in keeping with the dignity of the House. Such personal exchanges, if avoided, would greatly enhance the value of our proceedings and add to the dignity of our Assembly. There is no point of order involed.

I can only add once again that if members will address the Chair instead of each other, such incidents would be avoided.

BUDGET ESTIMATES FOR 1961-62.
DEMANDS FOR GRANTS

No. 29.—Civil Works.

Sri H. K. VEERANNA GOWDH (Minister for Public Works and Electricty).—Sir, on the recommendation of the Governor of Mysore, I beg to move:

> " That a sum not exceeding Rs. 14,70,84,400 be granted to the Government to defray the charges which will come in course of payment during the financial year for the period ending 31st day of March 1962, in respect of 'Civil Works."

Mr. SPEAKER.—Motion moved;

> " That a sum not exceeding Rs. 14,70,84,400 be granted to the Government to defray the charges which will come in course of payment during the financial year for the period ending 31st day of March 1962, in respect of Civil Works."

The other Demands namely Demand No. 50, 51, 53, 42, 46, 47, 9, 10, 48, 52, are also before the House.

ಒಂದು ಮಾತನ್ನು ಹೇಳುವುದಿದೆ. ಈ ಹೊತ್ತು ಒಂದೇ ದಿವಸ ಈ ಡಿಮ್ಯಾಂಡಿಗೆ ಇದೆ. ಅಲ್ಲಗೆ, ಸರ್ಕಾರದವರೂ ಇಂದೇ ಉತ್ತರ ಕೊಡಬೇಕಾಗುತ್ತದೆ. ಅವರಿಗೆ ಒಂದೂವರೆ ಗಂಟೆಯಿಂದ ಎರಡು ಗಂಟೆಯುವರೆಗೂ ಕಾಲಾವಕಾಶ ಕೊಡಬೇಕಾಗುತ್ತದೆ. ಬಹುಶಃ ನಾಲ್ಕು ಗಂಟೆಯಿಂದ ಆರು ಗಂಟೆಯವರೆಗೆ ಅವರಿಗೆ ಕೊಡಬೇಕಾಗಬಹುದು. ಆದುದರಿಂದ ಇನ್ನು ಉಳಿದಿರುವುದು ಸ್ವಲ್ಪ ಕಾಲ. ಆದಕಾರಣ ಮೊದಲನೆಯ ಭಾಷಣ ಮಾಡುವವರಿಗೆ ಅರ್ಧ ಗಂಟೆ, ಮಿಕ್ಕವರಿಗೆ ಹದಿನೈದು ನಿಮಿಷದಂತೆಯೂ ಕಾಲಾವಕಾಶ ಕೊಡಬೇಕೆಂದು ಮಾಡಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಹೇಳಿದ ಪ್ರಕಾರ ಕಡಮೆ ಕಾಲ ಇರುವುದರಿಂದ, ಸ್ವಲ್ಪ ಹೆಚ್ಚಿಗೆ ಕಾಲ ಇವೊತ್ತು ಸಭೆ ಕುಳಿತುಕೊಳ್ಳುವುದಕ್ಕಾಗುತ್ತದೆಯೇ? ಎರಡು ಗಂಟೆಯು ಕಾಲ ಹೆಚ್ಚಿಗೆ ಕುಳಿತುಕೊಳ್ಳುವುದಕ್ಕೆ ಮನಸ್ಸು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಅಲ್ಲಿಗೆ ಎಂಟು ಗಂಟೆಯಾಗಿ ಬಿಡುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಂತ್ರಿಗಳು ಆರರಿಂದ ಏಳರವರೆಗೆ ಉತ್ತರ ಕೊಡುವಂತೆ ಮಾಡಿದರೆ ಸಾಕು.

ಅಧ್ಯಕ್ಷರು.—ಬಹಳ ಹೊತ್ತಾದರೆ, ಮಂತ್ರಿಗಳ ಉತ್ತರವನ್ನು ಕೇಳುವುದಕ್ಕೆ ಸದಸ್ಯರು ಯಾರೂ ಇರುವುದೇ ಇಲ್ಲ.

ಶ್ರೀ ಎಂ. ರಾಮಪ್ಪ.—ಆರು ಗಂಟೆಯವರೆಗೂ ಸದಸ್ಯರು ಮಾತನಾಡಿ, ಆಮೇಲೆ ಆರರಿಂದ ಏಳರವರೆಗೆ ಒಂದು ಗಂಟೆ ಕಾಲ ಮಂತ್ರಿಗಳಿಗೆ ಕೊಟ್ಟರೆ ಸಾಕು.

ಶ್ರೀ ಎಚ್. ಕೆ. ವೀರಣ್ಣಗೌಡ.—ಆಗುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆಗುವುದಿಲ್ಲ ಎಂದು ಈಗಲೇ ಹೇಗೆ ಹೇಳುತ್ತೀರಿ?

ಅಧ್ಯಕ್ಷರು.—ಅವರು ಅರ್ಧ ಗಂಟೆ ಸಾಕೆಂದು ಹೇಳುತ್ತಾರೆ. ಆಮೇಲೆ ಒಂದು ವಿವರಣೆ—ಆಮೇಲೆ ಇನ್ನೊಂದು ವಿವರಣೆ—ಈ ರೀತಿ ಹೋಗುತ್ತಾ ಒಂದೂವರೆ ಗಂಟೆ ಎರಡು ಗಂಟೆ ಆಗಿಬಿಡುತ್ತದೆ. ಅವರು ಅದನ್ನು-ಇದನ್ನು ನೀವು ಕೇಳುತ್ತಿರುತ್ತಾರೆ. ಆದುದರಿಂದ ಮಂತ್ರಿಗಳಿಗೆ ಕೊಡುವ ಕಾಲದಲ್ಲಿ ಕಡಮೆ ಮಾಡುವುದೆಂದರೆ ಬಹಳ ಕಷ್ಟ.

ಈಗ ಶ್ರೀಮಾನ್ ವೀರಪ್ಪನವರು ಇತ್ತಕಡೆಯಿಂದ ಪ್ರಾರಂಭ ಮಾಡಲಿ.

† ಶ್ರೀ ವೈ. ವೀರಪ್ಪ.—ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆಯ ಡಿಮ್ಯಾಂಡಿನ ಮೇಲೆ ನಮ್ಮ ಅಭಿಪ್ರಾಯಗಳನ್ನು ಕಳೆದ ಸಾಲಿನಲ್ಲಿ ಹೇಳಿದ್ದರ ಮೇಲೆ ಈ ಇಲಾಖೆ ಯಾವ ರೀತಿ ಕಾರ್ಯಸಾಧನೆ ಮಾಡಿದೆ, ಕಾರ್ಯಕ್ರಮದ ಪ್ರಕಾರ ಕೆಲಸ ನಡೆಸಿವೆಯೇ, ಮುಂದೆ ಏನು ಮಾಡಬಹುದಾಗಿದೆ ಎಂಬ ಬಗ್ಗೆ ಕೆಲವು ಅಂಶಗಳನ್ನು ತಮ್ಮ ಮುಂದೆ ಇಡಬೇಕೆಂದು ನಿಂತಿದ್ದೇನೆ. ಮಾನ್ಯ ಸಚಿವರು, ಬಹುಮುಖ್ಯವಾದ ಈ ಇಲಾಖೆಗೆ 14 ಕೋಟಿ 70 ಲಕ್ಷ ಚಿಲ್ಲರೆ ರೂಪಾಯಿಗಳನ್ನು ಈ 1960-61ನೆಯ ಸಾಲಿಗೆ ಮಂಜೂರು ಮಾಡಬೇಕೆಂದು ಕೇಳಿದ್ದಾರೆ. ಆದರೆ ಈ ಇಲಾಖೆಯಲ್ಲಿ ಆಗತಕ್ಕ ಕೆಲಸ ಕಾರ್ಯಗಳನ್ನು ಸ್ವಲ್ಪಮಟ್ಟಿಗೆ ನಾವು ಪರಿಶೀಲಿಸಿ ನೋಡಿದರೆ, ಅದು ಅಷ್ಟು ಆಶಾದಾಯಕವಾಗಿಲ್ಲವೆಂದು ನಾನು ನಿರ್ದಾಕ್ಷಿಣ್ಯವಾಗಿ ಹೇಳಬೇಕಾಗಿದೆ.

ಈ ಇಲಾಖೆ ಅನೇಕ ಸಮಸ್ಯೆಗಳನ್ನು ಒಳಗೊಂಡಿದೆ. ಮುಖ್ಯವಾಗಿ ಆಹಾರ ಸಮಸ್ಯೆಯನ್ನು ನಿವಾರಣೆ ಮಾಡುವ ಗುರುತರವಾದ ಜವಾಬ್ದಾರಿಯನ್ನು ಹೊತ್ತಿದೆ. ಎರಡನೆಯದಾಗಿ ರಸ್ತೆ ಸಂಚಾರದ ಸೌಲಭ್ಯವನ್ನು ಜನರಿಗೆ ಒದಗಿಸಿಕೊಡುವ ಜವಾಬ್ದಾರಿಯೂ ಇದರ ಮೇಲಿದೆ. ಜೊತೆಗೆ, ಮೂರನೆಯ ಪಂಚವಾರ್ಷಿಕ ಯೋಜನೆಯ ಅಂಗವಾಗಿ ಈ ಇಲಾಖೆಯಿಂದ ಬಹುಮಟ್ಟಿನ ಉಪಕಾರವನ್ನು ಜನತೆ ಬಯಸುತ್ತದೆ. ಹೀಗಿರುವಲ್ಲಿ ಈಗ ಆಗುತ್ತಿರತಕ್ಕ ವಿಷಯಗಳನ್ನು ನೋಡಿದರೆ, ಆಹಾರದ ಕೊರತೆಯನ್ನು ಅತಿ ಜಾಗ್ರತೆಯಾಗಿ ನಿವಾರಣೆ ಮಾಡುತ್ತೇವೆಂದು ಹೇಳಿ ಮೈನರ್ ಇರ್ರಿಗೇಷನ್ ಯೋಜನೆಯೊಂದನ್ನು ಜಾರಿಗೆ ತಂದರು. ಮೈನರ್ ಇರ್ರಿಗೇಷನ್ ಸಂಬಂಧಪಟ್ಟಂತೆ ವಾರದ ಸಪ್ತಾಹವನ್ನು ಕೂಡ ಆಚರಿಸಿದರೆ. ಆಯಾ ಇಲಾಖೆಯ ಅಧಿಕಾರಿಗಳಿಗೆ ಇದ್ದ ತೊಂದರೆಗಳನ್ನು ಮನವರಿಕೆ ಮಾಡಿಕೊಂಡಿದ್ದಾಯಿತು. ಏನೇ ಮಾಡಿದರೂ ಈ ಇಲಾಖೆ ಯಶಸ್ವಿಯಾಗಿ ಕೆಲಸ ಮಾಡುತ್ತಿಲ್ಲವೆಂದು ನನಗಂತೂ ಮನವರಿಕೆಯಾಗಿದೆ. ಏಕೆಂದರೆ, ಅನೇಕ ಕೆಲಸಗಳು ಈ ಹೊತ್ತಿನವರೆಗೂ ಪೂರ್ತಿಯಾಗಿಲ್ಲ. ನಾವು ಹೇಳಿದ ಕೆಲಸಗಳನ್ನು ಎಸ್ಟಿಮೇಟ್ ಮಾಡುವುದಕ್ಕೆ ಸಹ ಸಾಕಾದಷ್ಟು ಸಿಬ್ಬಂದಿ ಸಿಕ್ಕುತ್ತಿಲ್ಲ. ನಾನು, ವಿಷಯಗಳನ್ನು ವಿಚಾರಣೆ ಮಾಡಿದ್ದರಲ್ಲಿ, ಅಲ್ಲಿ ಕೊಟ್ಟಿರತಕ್ಕ ಸಿಬ್ಬಂದಿ ಸಾಲದು ಎಂಬುದು ಮನವರಿಕೆಯಾಗಿದೆ. ನಾನು ನಮ್ಮ ಚಿಕ್ಕ ಕ್ಷೇತ್ರವಾದ ಹೊಳೆನರಸೀಪುರದ ವಿಚಾರವನ್ನೇ ಉದಾಹರಿಸುವುದಾದರೆ, ಅಲ್ಲಿ ಎಷ್ಟು ಮೈನರ್ ಇರ್ರಿಗೇಷನ್ ಕೆಲಸಗಳು ನಡೆದಿವೆ, ಅಂದಾಜು ಮಾಡಿದ ಕೆಲಸಗಳು ಎಷ್ಟು ಪೂರ್ತಿಯಾಗಿಲ್ಲವೆಂದು ಇಲಾಖೆಯ ಒಳಹೊಕ್ಕು ನೋಡಿದಲ್ಲಿ, ಇನ್ನೂ ಸುಮಾರು 13 ಲಕ್ಷ ರೂಪಾಯಿಗಳ ಕೆಲಸ ಕಳೆದ ವರ್ಷ ಮುಗಿದಿಲ್ಲವೆಂದು ಗೊತ್ತಾಗುತ್ತದೆ. ಕಾರಣವೇನೆಂದು ಕೇಳಿದರೆ, ಅಲ್ಲಿ ಕೆಲಸ ಮಾಡುವುದಕ್ಕೆ ಸಿಬ್ಬಂದಿಇಲ್ಲ. ಹಾಸನ ಇಂಜಿನಿಯರಿಗೆ ಕಳುಹಿಸಿದ ಎಸ್ಟಿಮೇಟುಗಳು ಸ್ಯಾಂಕ್ಷನ್ ಆಗಿ ಬಂದಿಲ್ಲವೆಂದು ವರದಿಯಾಗಿದೆ. ಹೋದ ವರ್ಷ ಮಾನ್ಯಮಂತ್ರಿಗಳಿಗೆ ಇದೇ ವಿಷಯವನ್ನು ಹೇಳಿದ್ದಕ್ಕೆ ಅವರು ''ಟ್ರಂಕ್ ಕಾಲ್'' ತೆಗೆದುಕೊಂಡು ಈ ಬಗ್ಗೆ ವಿಷಯಗಳನ್ನು ಸಂಗ್ರಹ ಮಾಡಿದರು

ಹೋದ ವರ್ಷ ಯಾವ ಸ್ಥಿತಿಯಲ್ಲಿತ್ತೋ ಅದೇ ಸ್ಥಿತಿಯಲ್ಲಿ ಇವತ್ತಿನ ದಿವಸವೂ ಇದೆಯೆಂದು ಹೇಳಿದರೆ ಅದೇನೂ ತಪ್ಪಾಗಲಾರದು. ಆದ್ದರಿಂದ ಮಾನ್ಯ ಮಂತ್ರಿಗಳು ದಯವಿಟ್ಟು ನಾನು ಹೇಳತಕ್ಕ ಸ್ಟೇಟ್‌ಮೆಂಟನ್ನು ವೆರಿಫೈ ಮಾಡಬೇಕು. ಒಂದೇ ಒಂದು ವಿಷಯವನ್ನು ಇಲ್ಲಿ ಹೇಳಬೇಕಾಗಿದೆ. ಅದು ಹೊಳೇನರಸಿಪುರ ತಾಲ್ಲೂಕ್ ವಿಚಾರ ಅಲ್ಲಿಗೆ ನೀರಾವರಿ ಸೌಕರ್ಯ ಗಳನ್ನು ಒದಗಿಸಲು ತೆಗೆದುಕೊಳ್ಳತಕ್ಕ ಕೆಲಸಗಳ ಬಗ್ಗೆ ಅಂದಾಜುಗಳಾಗಿ ಅವೆಲ್ಲ ಹಾಸನದ ಎಗ್ಜಿಕ್ಯುಟಿವ್ ಇಂಜನಿಯರ್ ಆಫೀಸಿನಲ್ಲಿ ತಿಂಗಳಾನುಗಟ್ಟಲೆ ವರ್ಷಾನುಗಟ್ಟಲೆಯಿಂದ ಹಾಗೆಯೇ ನಿಂತಿದೆ. ಇದನ್ನು ಕೂಲಂಕಷವಾಗಿ ವೆರಿಫೈ ಮಾಡಿ ನನಗೆ ಅದರ ಪರಿಸ್ಥಿತಿ ಏನಾಗಿದೆಯೆಂಬು ದನ್ನು ಉತ್ತರ ಕೊಡುವಾಗ ತಿಳಿಸಬೇಕೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

2-30 P.M.

ಇನ್ನು ಕಂಟ್ರಾಕ್ಟರ್ಸ್ ವಿಷಯ. ಅನೇಕ ಹೊಸ ಹೊಸ ರೀತಿಯಲ್ಲಿ ಕಂಟ್ರಾಕ್ಟುಗಳನ್ನು ರಿಜಿಸ್ಟರ್‌ಮಾಡಿ ಕೊಂಡಿದ್ದಾರೆ ಮತ್ತು ಕೆಲಸಗಳು ಸಮರ್ಪಕವಾಗಿ ಅಥವಾ ತೃಪ್ತಿಕರವಾಗಿ ಸಾಗುತ್ತಿದೆಯೇ ಇಲ್ಲವೇ ಎಂಬುದನ್ನು ನೋಡಿದರೆ ಖಂಡಿತವಾಗಿ ಸರಿಯಾಗಿ ಸಾಗುತ್ತಿಲ್ಲ. ಯಾವುದೋ ಒಂದು ವ್ಯಕ್ತಿಯ ದೆಸೆಯಿಂದ ಅಥವಾ ಆಡಳಿತ ಅಥವಾ ಇತರ ಯಾವ ಒಂದು ಪಾರ್ಟಿ ದೆಸೆಯಿಂದ ಈ ಮಾತನ್ನು ನಾನು ಹೇಳುತ್ತಾ ಇಲ್ಲ. ಅನೇಕ ಕಂಟ್ರಾಕ್ಟರ್ಸ್ ಇವತ್ತಿನ ದಿವಸ ತಾಲ್ಲೂಕ್ ಬೋರ್ಡ್ ಸದಸ್ಯರುಗಳಾಗಿದ್ದಾರೆ, ತಾಲ್ಲೂಕ್ ಕಾಂಗ್ರೆಸ್ ಕಮಿಟಿ, ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿ ಸದಸ್ಯರುಗಳಾಗಿದ್ದಾರೆ. ಆ ರೀತಿ ಆಗಬಾರದು. ಇದರಿಂದಲೇ ಅನೇಕ ಕೆಲಸಗಳು ಸರಿಯಾಗಿ ಆಗುತ್ತಾ ಇಲ್ಲ. ಇದು ನನ್ನ ಉದ್ದೇಶವೊಂದೇ ಅಲ್ಲ ಜನಾಭಿ ಪ್ರಾಯವೂ ಆಗಿದೆ. ನಾನು ಈ ವಿಷಯವಾಗಿ ಏನು ಹೇಳುತ್ತಿದ್ದೇನೋ ಅದು ನಿಜವಾದರೆ ಹೌದು ಎಂದು ಒಪ್ಪಿಕೊಳ್ಳಿ. ಯಾವಾಗಲೂ ನಾನು ಒಂದು ದುರುದ್ದೇಶದಿಂದ ಹೇಳುತ್ತಾ ಇಲ್ಲ. ಒಟ್ಟಿನಲ್ಲಿ ಕೆಲಸಗಳು ಸಮರ್ಪಕವಾಗಿಯಂತೂ ಆಗುತ್ತಾ ಇಲ್ಲ. ಈಗ ಅಲ್ಲಿ ಏನಾಗುತ್ತಿದೆ ಯೆಂದರೆ ಯಾರಾದರೂ ಸ್ಕ್ರೂಟಿನಿ ಅಥವಾ ಇನ್‌ಸ್ಪೆಕ್ಷನ್ ಮಾಡುವ ಅಧಿಕಾರಿಗಳು ಹೋದರೆ ಈ ಕಂಟ್ರಾಕ್ಟರ್ಸ್ ಮೇಲೆ ತಮ್ಮ ಅಧಿಕಾರವನ್ನು ಅವರು ಚಲಾಯಿಸುವುದಕ್ಕಾಗುವುದಿಲ್ಲ. ಮಂತ್ರಿಗಳು ಬರಲಿ, ದೊಡ್ಡ ಅಧಿಕಾರಿಗಳು ಬರಲಿ, ಅವರ ಹತ್ತಿರ ಮಾತನಾಡುತ್ತೇವೆಂದು ಹೇಳುತ್ತಾರೆ. ಈಗ ಈ ಅಧಿಕಾರಿಗಳು ನಮ್ಮ ಮೇಲೆ ಏನು ಚಾಡಿ ಹೇಳುತ್ತಾರೋ ಎಂಬ ಭಯದಿಂದ ಸರಿಯಾಗಿ ಕೆಲಸಮಾಡುವುದಕ್ಕೆ ಹಿಂಜರಿಯುತ್ತಾರೆ. ಇದರಿಂದ ನಮ್ಮ ಅಧಿಕಾರಿಗಳ ಮೂಲಕ ಎಷ್ಟು ಕೆಲಸವನ್ನು ತೆಗೆದುಕೊಳ್ಳಬೇಕೆಂದು ನಿರೀಕ್ಷಣೆ ಮಾಡುತ್ತೇವೋ ಅಷ್ಟು ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಇಂತಹ ಕ್ಲಿಷ್ಟ ಪರಿಸ್ಥಿತಿ, ಸಮಸ್ಯೆಗಳನ್ನು ನಿವಾರಣೆ ಮಾಡು ವುದಕ್ಕೆ ಸರ್ಕಾರದವರು ಸೂಕ್ತ ಕಾರ್ಯಕ್ರಮವನ್ನು ಕೂಡಲೇ ತೆಗೆದುಕೊಳ್ಳಬೇಕು. ಕಾನೂನು ಪ್ರಕಾರ ಇವೆಲ್ಲವನ್ನು ಮಾಡುವುದು ಒಳ್ಳೆಯದು ಮತ್ತು ಲೇಸು ಎಂದು ಕಾಣುತ್ತದೆ. ಇಲ್ಲದಿದ್ದರೆ ಇಲಾಖೆಯಿಂದ ಕೆಲಸ ಕಾರ್ಯಗಳು ಸಮರ್ಪಕವಾಗಿ ನಡೆಯುವುದಿಲ್ಲ. ಸನ್ನಿವೇಶ, ಪರಿಸ್ಥಿತಿ ಈ ರೀತಿ ಇರುವುದರಿಂದ ಇದನ್ನು ಕೂಲಂಕಷವಾಗಿ ವಿಚಾರ ಮಾಡುವುದು ಉತ್ತಮ ವೆಂದು ನನಗೆ ತೋರುತ್ತದೆ. ಏಕೆಂದರೆ ಇದಕ್ಕೆ ಒಂದು ನಿದರ್ಶನವನ್ನು ಹೇಳುತ್ತೇನೆ. ನಮ್ಮ ತಾಲ್ಲೂಕಿನ ಕಾಂಗ್ರೆಸ್ ಕಮಿಟಿಯಲ್ಲಿ ಬಹಳ ಮುಖ್ಯಸ್ಥರಾದ ಮತ್ತು ಬಹಳ ಹಳಬರಾದ ಒಬ್ಬ ನನ್ನ ಸ್ನೇಹಿತರು ಇದ್ದಾರೆ. ಅವರು ಕಂಟ್ರಾಕ್ಟರ್ಸ್ ಆಗಿದ್ದಾರೆ, ಆಗ ಮಾನ್ಯ ಪಿ. ಡಬ್ಲ್ಯು. ಡಿ ಮಂತ್ರಿಗಳಾಗಿದ್ದ ಶ್ರೀ ಚನ್ನಬಸಪ್ಪನವರು ಅಲ್ಲಿಯ ಗ್ರಾಮಸ್ಥರೆಲ್ಲರೂ ಸೇರಿದಾಗ ಒಂದು ಬಾರಿ ಬಹುಶಃ ನುಗು ಪ್ರಾಜೆಕ್ಟಿನ ಕೆಲಸ ಕಾರ್ಯಗಳನ್ನು ನೋಡಲು ಬೆಳಗಿನ ಜಾವ ಐದು ಗಂಟೆಗೆ ಬಂದರು ಹಳ್ಳಿಯವರೆಲ್ಲರೂ ಬಂದು ಒಂದುಕಡೆ ಕೂಳಿತುಕೊಂಡರು. ಹೊಳೆನರಸೀಪುರದಿಂದ ಆರು ಮೈಲಿಗಳ ದೂರದಲ್ಲಿ ಹಿಂದಲಹಳ್ಳಿ ಕೆರೆ ಕೆಲಸವಾಗಲೇ ಇಲ್ಲವೆಂದು ಅವರ ಒಂದು

(ಶ್ರೀ ವೈ. ವೀರಪ್ಪ)

ಅಹವಾಲನ್ನು ಹೇಳಿದರು. ಆಗ ಮಂತ್ರಿಗಳು ಅಲ್ಲಿರುವವರೆಲ್ಲರೂ ಇನ್ನು ಮೂರು ತಿಂಗಳೊಳಗೇ ಅನ್ನ ಊಟ ಮಾಡಬೇಕು, ಯಥೇಚ್ಛವಾಗಿ ಬತ್ತ ಬೆಳೆಯಬಹುದು ಎಂದು ಹೇಳಿ ಎಷ್ಟೋ ಜನರಿಗೆ ಅಲ್ಲಿ ಕೆಲಸಗಳನ್ನು ಒದಗಿಸಿ ಕೊಟ್ಟರು. ಆದರೂ ಇನ್ನೂ ಕೆಲವು ಕೆಲಸಗಳು ಪೂರ್ಣವಾಗಿಲ್ಲ. ಅಲ್ಲಿ ಗ್ರಾಮದ ಜನಗಳು ಎಷ್ಟು ಕೆಲಸಗಳನ್ನು ನಿರೀಕ್ಷಣೆ ಮಾಡಿದ್ದರೋ ಅಷ್ಟು ನಿರೀಕ್ಷಿಸಿದಷ್ಟು ಕೆಲಸ ಸಫಲವಾಗಲಿಲ್ಲ. ಕಂಟ್ರಾಕ್ಟರ್‌ಸ್‌ಗೆ ಜುಲ್ಮಾನೆ ಕೂಡ ಹಾಕಿದ್ದಾರೆ. ಅದನ್ನು ಪುನಃ ಕ್ಯಾನ್ಸಲ್ ಮಾಡಿದ್ದಾರೆಂದು ನನಗೆ ತಿಳಿದು ಬಂದಿದೆ. ಇದರಿಂದ ಸಾರ್ವಜನಿಕರ ಕೆಲಸ ಮಾಡು ವುದಕ್ಕೆ ಅಧಿಕಾರಿಗಳಿಗೆ ತೊಂದರೆಯಾಗುತ್ತದೆ. ಈ ದೃಷ್ಟಿಯಿಂದ ಸರ್ಕಾರದವರು ಏನಾದರೂ ಒಂದು ಉಪಾಯಮಾಡಿ ಕೆಲಸ ಅತಿ ಜಾಗ್ರತೆಯಾಗಿ ಆಗುವುದಕ್ಕೆ ಪ್ರಯತ್ನ ಮಾಡಬೇಕೆಂದು ನನ್ನ ಪ್ರಾರ್ಥನೆ.

ಇನ್ನೊಂದು ವಿಷಯ ಬಹು ಮುಖ್ಯವಾದುದು. ಇದನ್ನು ಪದೇ ಪದೇ ಹೇಳುತ್ತಿದ್ದೇನೆ. ನೀರಾವರಿ ಕೆಲಸಗಳು ಎಲ್ಲೆಲ್ಲಿ ಏನೇನು ಆಗಬೇಕಾಗಿತ್ತೋ ಅಥವಾ ನೀರಾವರಿ ಯೋಜನೆಗಳು ಎಷ್ಟು ಆಗಬೇಕಾಗಿತ್ತೋ ಅಷ್ಟು ಆಗಲಿಲ್ಲವೆಂದು ನಾನು ಮೊದಲಿನಿಂದಲೂ ವಾದ ಮಾಡುತ್ತಿದ್ದೇನೆ. ನನ್ನ ಮಾನ್ಯ ಸ್ನೇಹಿತರೂ ಕೂಡ ಹೇಳುತ್ತಿದ್ದಾರೆ. ಆದಾಗ್ಯೂ ಕೂಡ ಸರ್ಕಾರದವರು ಈ ಬಗ್ಗೆ ಒಂದು ನಿರ್ದಿಷ್ಟವಾದ ತೀರ್ಮಾನವನ್ನು ತೆಗೆದುಕೊಳ್ಳದೇ ಇರುವುದಕ್ಕೆ ಕಾರಣ ನನಗೆ ಗೊತ್ತಾಗ ಲಿಲ್ಲ. ಈಗಾಗಲೇ ಸರ್ಕಾರದವರು ಅದ್ಭುತವಾದ, ಪ್ರಗತಿಪರವಾದ ಮತ್ತು ಆಶಾದಾಯಕ ವಾದ ಯೋಜನೆಗಳನ್ನು ಹಾಕಿದ್ದಾರೆ. ಈಗ ಒಂದನೇ ಯೋಜನೆ ಆಯಿತು ಎರಡನೆ ಯೋಜ ನೆಯೂ ಆಯಿತು. ಇವತ್ತಿನ ದಿವಸ ಮೂರನೆಯ ಯೋಜನೆಯ 12ನೇ ದಿವಸದಲ್ಲಿ ಹೆಜ್ಜೆ ಇಟ್ಟಿದ್ದೇವೆ. ಆದಾಗ್ಯೂ ನಮಗೆ ಬರತಕ್ಕ ನೀರಿನ ಸೌಕರ್ಯವನ್ನು ಪೂರ್ತಿಯಾಗಿ ಉಪಯೋಗಿಸಿ ಕೊಂಡಿದ್ದೇವೆಯೇ ಇಲ್ಲವೆ ಎಂಬುವನ್ನು ನೋಡಿದರೆ ಖಂಡಿತವಾಗಿ ನಾವು ವಿಫಲರಾಗಿದ್ದೇವೆಂದು ನಾನು ಹೇಳಬೇಕಾಗಿದೆ. ಕೃಷ್ಣಾ ಮತ್ತು ಗೋದಾವರಿ ನದಿಗಳ ವಿಚಾರವಾಗಿ ಈಗಾಗಲೇ ಕೇಂದ್ರ ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆ. ನಮಗೆ ನಿಜವಾಗಿ ಭವಿಷ್ಯ ಚೆನ್ನಾಗಿದೆ. ಈಗ ಸರ್ಕಾರದವರು ಈ ಬಗ್ಗೆ ಮಾಡಿದ 1951ನೇ ಅವಾರ್ಡನ್ನು ಲೀಗಲ್ ಓಪೀನಿಯನ್ನಿಗೆ ಕಳುಹಿಸಿದ್ದಾರೆಂಬ ಅಂಶಗಳನ್ನು ನಾನು ಕೇಳಿದ್ದೇನೆ. ಆದರೆ ನಮ್ಮ ಮನೆ ಬಾಗಿಲಿನಲ್ಲಿರು ವಂತೆ ಇರತಕ್ಕ ಹಾರಂಗಿ, ಕಂಬದಕಡ, ಹೇಮಾವತಿ ಪ್ರಾಜೆಕ್ಟುಗಳ ಸ್ಥಿತಿ ಚಿಂತಾಜನಕವಾಗಿದೆ. ಏಕೆಂದರೆ ಹಿಂದೆ ದೊಡ್ಡ ದೊಡ್ಡ ಅಧಿಕಾರಿಗಳು ಪಂಡಿತೋತ್ತಮರು, ತಜ್ಞರು ಕೊಟ್ಟಿರತಕ್ಕ ಅಭಿಪ್ರಾಯಗಳನ್ನು ಇವತ್ತಿನ ದಿವಸ ಈ ಅಸೆಂಬ್ಲಿಯೊಳಗೆ ವಿರೋಧಿಸಿ ಈ ಕೆಲಸವಾಗದಂತೆ ಮಾಡತಕ್ಕ ಕೆಲವು ವ್ಯಕ್ತಿಗಳು ಸಹ ಇದ್ದಾರೆ 1924ರ ಕರಾರಿನ ಪ್ರಕಾರ 1974ರೊಳಗೆ ಕಾವೇರಿ ಬೇಸಿನ್ ವಾಟರ್ ಎಸಿದೆ ಅದರಲ್ಲಿ ಒಂದು ತೊಟ್ಟು ಸಹ ವೇಸ್ಟ್ ಆಗದಂತೆ ಉಪಯೋಗಿಸಿಕೊಳ್ಳ ಬೇಕಾಗಿದೆ. ಈಗಾಗಲೇ 36–37 ವರ್ಷಗಳನ್ನು ಅವಿಚ್ಛಿನ್ನವಾಗಿ ಕಳೆದಿದ್ದೇವೆ. ಕೇವಲ ಇನ್ನು 13–14 ವರ್ಷಗಳು ಮಾತ್ರ ಉಳಿದಿವೆ. ಈ 13–14 ವರ್ಷಗಳಲ್ಲಿ ಈ ಕೆಲಸವನ್ನು ನಮ್ಮ ಸರ್ಕಾರದವರು ನಿಜವಾಗಿ ಸಾಧನೆ ಮಾಡುತ್ತಾರೋ ಇಲ್ಲವೋ ಎಂಬ ಶಂಕೆ ನನಗೆ ಬಂದಿದೆ. ನಮ್ಮ ನೆರೆ ಹೊರೆಯ ರಾಜ್ಯಗಳವರು ಇದೇ ಕಾವೇರಿ ಬೇಸಿನ್‌ವಾಟರನ್ನು ಈಗಾಗಲೇ 21 ಸಾವಿರ ಎಕರೆಗೆ ಉಪಯೋಗಿಸಿಕೊಂಡಿದ್ದಾರೆ. ಇಲ್ಲಿ ಕೇವಲ ಮೂರುವರೆ ಲಕ್ಷ ಎಕರೆ ಜಮೀನು ಸಾಗುವಳಿ ಆಗುತ್ತದೆ. ಇನ್ನು ಬೇಕಾದಷ್ಟು ಲಕ್ಷಾಂತರ ಜಮೀನುಗಳು ಸಾಗುವಳಿಯಾಗುವ ಸನ್ನಿವೇಶ ಇರಬೇಕಾದರೆ, ನಾವು ಈ ಬಾಬಿಗೆ ಇಷ್ಟು ದುಡ್ಡನ್ನು ಖರ್ಚು ಮಾಡಬೇಕಾದರೆ, ನಾವು ಈ ರೀತಿಯಾಗಿ ದೇಶದಲ್ಲಿ ಆಹಾರ ಅಭಾವವನ್ನು ಕಾಣುತ್ತಾ ಇರಬೇಕಾದರೆ ಸರ್ಕಾರ ದವರು ಏತಕ್ಕೋಸ್ಕರ ಈ ಬಗ್ಗೆ ತಕ್ಷಣವಾಗಿ ತೀರ್ಮಾನವನ್ನು ತೆಗೆದುಕೊಂಡಿಲ್ಲವೆಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಈಗ ಹಾರಂಗಿ ಪ್ರಾಜೆಕ್ಟಿನಿಂದ ಸುಮಾರು ಒಂದು ಲಕ್ಷ

ಐದು ಸಾವಿರ ಎಕರೆ ಸಾಗು ಆಗುತ್ತಿದೆ. ಇತರ ಪ್ರಾಜೆಕ್ಟುಗಳಿಗೆ ಹೋಲಿಸಿ ನೋಡಿದರೆ ಇದು ಬಹಳ ಕಡಿಮೆ. ಕೆಲವರಿಗೆ ಈ ಪ್ಲಾನುಗಳಿಂದ ತೊಂದರೆಯೂ ಆಗಬಹುದು. ಆದರೆ ಅನುಕೂಲ ಎಷ್ಟಿದೆ ಅನಾನುಕೂಲ ಎಷ್ಟಿದೆ ಎಂಬುದನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಹೋಲಿಕೆ ಮಾಡಿ ನೋಡಿದರೆ ಅನಾನುಕೂಲಗಳೇ ಹೆಚ್ಚು ಅನುಕೂಲಗಳು ಕಡಿಮೆಯಾಗಿವೆ. ಇನ್ನು ಕಂಬದಕಡ ಪ್ರಾಜೆಕ್ಟಿನಿಂದ ಸುಮಾರು 22 ಸಾವಿರ ಎಕರೆ ಜಮೀನು ಸಾಗುವಳಿಯಾಗುತ್ತಿದೆ. ಅದರೊಳಗೆ ಮುಳುಗಡೆ ಯಾಗತಕ್ಕ ಪ್ರದೇಶ ಕಡಮೆ. ಇನ್ನು ಹೇಮಾವತಿ ಪ್ರಾಜೆಕ್ಟಿನ ವೈಶಿಷ್ಟ್ಯತೆ ಬೇರೆಯಾಗಿದೆ. ದೈವವಶಾತ್ ನಮ್ಮ ಸರ್ಕಾರದವರು ಬಹಳ ದೊಡ್ಡ ಮನಸ್ಸು ಮಾಡಿ ಈ ಯೋಜನೆಯನ್ನು ಜಾಗ್ರತೆ ಪೂರ್ಣಗೊಳಿಸುತ್ತೇವೆಂದು ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಇದರಲ್ಲಿ ಬಹಳ ಸಂಕಟವಾದ ವಿಚಾರ ನಡೆದಿದೆ. ಕೇವಲ ಈಗ ಎಡ ದಂಡೆಯ ಒಂದು ಚಾನಲ್ ಮಾತ್ರ ತೆಗೆದು 35 ಅಥವಾ 40 ಸಾವಿರ ಎಕರೆ ಸಾಗುವಳಿ ಮಾತ್ರ ಮಾಡಬೇಕೆಂದು ಇದ್ದಾರೆ. ಮೊದಲಿನಿಂದಲೂ 133 ಅಡಿ ಎತ್ತರದಲ್ಲಿ ಒಂದು ಕಟ್ಟೆಯನ್ನು ಕಟ್ಟಿ ಎರಡು ಕಾಲುವೆಗಳನ್ನು ಎಡ ಬಲ ದಂಡೆಗಳಲ್ಲಿ ತೆಗೆದು 60 ಸಾವಿರ ಎಕರೆ ಜಮೀನನ್ನು ಸಾಗುವಳಿ ಮಾಡಬೇಕೆಂದಿದ್ದರು, ಯಾವ ಕಾರಣದಿಂದಲೋ ಅಥವಾ ಯಾರ ಒಂದು ಒತ್ತಾಯದಿಂದಲೋ ಆ ರೀತಿ ಮಾಡಿಲ್ಲ. ಕೇವಲ 121 ಅಡಿ ಎತ್ತರದಲ್ಲಿ ಕಟ್ಟೆಯನ್ನು ಕಟ್ಟಬೇಕೆಂದು ತೀರ್ಮಾನಿಸಿದ್ದಾರೆಂದು ನನಗೆ ಗೊತ್ತಾಗುತ್ತದೆ. ಈ ರೀತಿಯಾಗಿ ಆಹಾರ ಅಭಾವ ಪರಿಸ್ಥಿತಿ ಇರುವುದರಿಂದ ಜನಗಳು ಆರ್ಥಿಕ ಮುಗ್ಗಟ್ಟಿನಿಂದ ವಿಶೇಷವಾಗಿ ನರಳುತ್ತಿದ್ದಾರೆ. ಆದ್ದರಿಂದ 133 ಅಡಿ ಎತ್ತರದ ಅಂದಾಜು ಮಾಡಿದರೆ ಬಹಳ ಒಳ್ಳೆಯದು. ಅದೇ ಎತ್ತರವನ್ನು ಇಟ್ಟುಕೊಂಡು ಗೊರೂರ್ ಪ್ರಾಜೆಕ್ಟನ್ನು ಸಹ ಬಹು ಶೀಘ್ರವಾಗಿ ಮಾಡಬೇಕೆಂದು ನಾನು ಹೇಳುತ್ತೇನೆ. ಅದರಲ್ಲಿ ಏನೂ ಉತ್ಪ್ರೇಕ್ಷೆ ಇಲ್ಲ. 1924ರ ಕರಾರಿನ ಪ್ರಕಾರ ಆ ನೀರನ್ನು ಪೂರ್ತಿಯಾಗಿ ಉಪಯೋಗಿಸಿ ಕೊಳ್ಳಬೇಕಾದರೆ ಇಂತಹ ತ್ವರಿತವಾದ ಕ್ರಮವನ್ನು ಸರ್ಕಾರದವರು ಕೂಡಲೇ ತೆಗೆದುಕೊಳ್ಳುವುದು ಉತ್ತಮ. ನಮ್ಮ ಸರ್ಕಾರದವರು ಈ ಬಗ್ಗೆ ಟಾಪ್ ಪ್ರೈಯಾರಿಟಿ ಕೊಡಬೇಕೆಂದು ಯೋಜನಾ ಮಂಡಲಿಯವರನ್ನು ಪ್ರಾರ್ಥನೆ ಮಾಡಿಕೊಳ್ಳಬೇಕು ಮತ್ತು, ಕೇಂದ್ರ ಸರ್ಕಾರದವರನ್ನು ಸಹ ಪ್ರಾರ್ಥನೆ ಮಾಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರದವರನ್ನು ಒತ್ತಾಯ ಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ವ್ಯವಸಾಯದ ಡಿಮ್ಯಾಂಡಿನ ಮೇಲೆ ಮಾತನಾಡುತ್ತ, ತುಂಗಭದ್ರ ಮತ್ತಿತರ ದೊಡ್ಡ ಪ್ರಾಜೆಕ್ಟುಗಳಲ್ಲಿ ಪಬ್ಲಿಕ್ ವರ್ಕ್ಸ್ ಇಲಾಖೆಯವರ ಒಂದು ಗುರುತರ ಜವಾಬ್ದಾರಿಯೇನಿದೆ ಎಂಬುದರ ಬಗ್ಗೆ ಮಾನ್ಯ ಸದಸ್ಯರನೇಕರು ಹೇಳುತ್ತಿದ್ದರು ; ನಾನು ಈ ಸಂಧರ್ಭದಲ್ಲಿ ಹೇಳುವುದೇನೆಂದರೆ ಕಾವೇರಿ ಬೇಸಿನ್ ನೀರನ್ನು ಉಪಯೋಗಿಸಿಕೊಳ್ಳುವ ಬಗ್ಗೆ ಕೇವಲ ಶೆಡ್ಯೂಲ್ಡ್ ವಿವರಗಳ ಬಗ್ಗೆ ಒಂದು ಯೋಜನೆ ಹಾಕಿದ್ದಿರ. ಕಾವೇರಿ ಬೇಸಿನ್‌ನಲ್ಲಿ ನಾನ್‌ಶೆಡ್ಯೂಲ್ ರಿವರುಗಳು ಬೇಕಾದಷ್ಟಿವೆ. ಆ ನೀರನ್ನು ಕೂಡ ಉಪಯೋಗಿಸಿಕೊಂಡಿಲ್ಲ. ಹೀಗಿರುವಾಗ, ಕೆಲಸವನ್ನು ಸರಿಯಾಗಿ ಸಾಧನೆ ಮಾಡದೆಯೇ, ಬೃಹದ್ವ್ಯಕ್ತವಾದ ದೊಡ್ಡ ಹಣವನ್ನು ಕೇಳುವುದು ಸೂಕ್ತವೇ ಎಂಬ ಶಂಕೆ ಉಂಟಾಗುತ್ತದೆ. ಶೆಡ್ಯೂಲ್ಡ್ ಮತ್ತು ನಾನ್ ಶೆಡ್ಯೂಲ್ಡ್ ನದಿಗಳ ನೀರಿನ ಒಂದು ಹನಿಯೂ ಅಪ್ರಯೋಜಕವಾಗದಂತೆ ಯೋಜನೆ ಹಾಕಿಕೊಂಡು ಉಪಯೋಗಿಸಿಕೊಂಡರೆ ಅಕ್ಕ ಪಕ್ಕದ ಪ್ರದೇಶಗಳ ಜನಗಳ ಆರ್ಥಿಕ ಮುಗ್ಗಟ್ಟು ಹೋಗುವುದಲ್ಲದೆ ಆಹಾರ ಅಭಾವದ ದೊಡ್ಡ ಪೆಡಂಭೂತವೂ ನಿವಾರಣೆಯಾಗುತ್ತದೆ. It is the document which is laid permanently that is important. If we do not execute the works in terms of the document, I am sure the next generation will course us seriously. ಆ ದೃಷ್ಟಿಯಿಂದ ಸರ್ಕಾರದವರು ಇಷ್ಟು ಅನುಕೂಲ ಮಾಡಿಕೊಡದಿದ್ದರೆ, ನಮ್ಮ ಮೈಸೂರು ದೇಶದ ಮುಂದಿನ ಜನಾಂಗ ಶಾಪ ಹಾಕುವುದಿಲ್ಲವೇ ಎಂದು ಸರ್ಕಾರ ತಿಳಿದುಕೊಂಡು, ಬಹಳ

(ಶ್ರೀ ವೈ. ವೀರಪ್ಪ)

ದಿಟ್ಟತನದಿಂದ, ಕೇಂದ್ರ ಸರ್ಕಾರ ಮತ್ತು ಯೋಜನಾ ಮಂಡಲಿಯೊಡನೆ ಹೋರಾಡಿ ಮೂರನೆಯ ಯೋಜನೆಯೊಳಗೆ ಕಾವೇರಿ ಬೇಸಿನ್ನಿನ ಒಂದು ತೊಟ್ಟು ನೀರು ಉಪಯೋಗವಾಗದೆ ಹೋಗದಂತೆ ನೋಡಿಕೊಳ್ಳಬೇಕು.

ಇನ್ನೊಂದು ವಿಷಯವನ್ನು ಬಹಳ ಜುಗುಪ್ಸೆಯಿಂದ ಹೇಳಬೇಕಾಗಿದೆ. ವರ್ಷವರ್ಷವೂ ಬಜೆಟ್ ಸೆಶನ್ ಬರುತ್ತದೆ, ನಾವು ಭಾಷಣ ಮಾಡುತ್ತೇವೆ, ಅದು ಲೆಜಿಸ್ಲೇಚರ್ ಪ್ರೊಸೀಡಿಂಗ್ಸಿಗೆ ಹೋಗಿ ಹಾಗೇಯೆ ಉಳಿಯುತ್ತದೆ. ಕಾರ್ಯ ನಿರೀಕ್ಷಣೆ ಮಾಡಿದಷ್ಟು ಸೂಚನೆ ಮಾಡಿದಷ್ಟು ಆಗುತ್ತಾ ಇಲ್ಲ. ಏಕೆಂದರೆ ಒಂದೇ ಒಂದು ಉದಾಹರಣೆ ಕೊಡುತ್ತೇನೆ. ನೆನ್ನೆತಾನೆ ನಾನು ಗನ್ನಿಗಡ ಮತ್ತು ಗೊಂಡಹಳ್ಳಿ ಕಡವ ಬಳಿ ಸೇತುವೆಗಳನ್ನು ಕಟ್ಟಿಸಿಕೊಡುತ್ತೀರ ಎಂದು ಕೇಳಿದ ಪ್ರಶ್ನೆಗೆ, ಅವುಗಳನ್ನು ಈಗ ಕೈಗೊಳ್ಳುವುದೂ ಸಾಧ್ಯವೇಯೆಂದು ಮಾನ್ಯ ಮಂತ್ರಿಗಳು ಹೇಳಿದರು. ಆ ಜಾಗದಲ್ಲಿ ಸೇತುವೆಗಳನ್ನು ಕೊಡಬೇಕು. ಒಬ್ಬ ವ್ಯಕ್ತಿಯ ದೃಷ್ಟಿಯಿಂದಾಗಲೀ ಅಥವಾ ಕೆಲವಾರು ಗ್ರಾಮದವರಿಗಾಗಲೀ ಈ ಸೇತುವೆಗಳಾಗಬೇಕೆಂದು ಖಂಡಿತವಾಗಿಯೂ ಕೇಳುತ್ತಿಲ್ಲ. ಇವುಗಳಿಂದ ನಿಜವಾಗಿಯೂ 50–60 ಗ್ರಾಮದವರಿಗೆ ಅನುಕೂಲವಾಗುತ್ತದೆ. ಎರಡು ಜಿಲ್ಲೆಯವರಿಗೆ ವಾಣಿಜ್ಯ ಸಂಪರ್ಕವುಂಟಾಗಿ, ಅಲ್ಲಿಯ ಜನರ ಆರ್ಥಿಕ ಮುಗ್ಗಟ್ಟು, ಆರಂಬದ ಮುಗ್ಗಟ್ಟು ಸುಧಾರಿಸುತ್ತದೆ. ಕಳೆದ ಮೂರು ವರ್ಷಗಳಿಂದಲೂ ಸರ್ಕಾರದವರು ಮಾಡಿಕೊಡುತ್ತೇವೆಂದು ಆಶ್ವಾಸನೆ ಕೊಡುತ್ತಾ ಬರುತ್ತಿದ್ದು, ನೆನ್ನೆದಿವಸ ಏಕ್‌ದಂ ಮಾನ್ಯ ಮಂತ್ರಿಗಳು ಬಹಳ ನಿರಾಶಾದಾಯಕವಾದ ಉತ್ತರ ಹೇಳಿದರು, ಏಕೆಂದರೆ ಮೂರನೆಯ ಪಂಚವಾರ್ಷಿಕ ಯೋಜನೆಯನ್ನು ಪೂರ್ಣಮಾಡಲಿಕ್ಕೆ ಸಾಕಾದಷ್ಟು ಹಣ ವಿಲ್ಲದೆ ಇರುವುದರಿಂದ ಎಂದು ಸಾಧ್ಯವಾದರೆ ಈ ಸೇತುವೆಗಳನ್ನು ತೆಗೆದುಕೊಳ್ಳುತ್ತೇವೆಂದು ಮೊದಲು ಹೇಳಿದರು, ಆಮೇಲೆ ಮಾದಗೆರೆ ಸೇತುವೆ ಆದಮೇಲೆ ಈ ಸೇತುವೆಗಳನ್ನು ಕಟ್ಟಿಸುವ ವಿಚಾರವನು ಪರಿಶೀಲನೆ ಮಾಡುತ್ತೇವೆಂದು ಹೇಳಿದರು. ಮೂರನೆಯ ಯೋಜನೆ ಬೃಹತ್ತರವಾದ ಯೋಜನೆ, ಮಹತ್ತರವಾದ ಯೋಜನೆ, ಅದಕ್ಕೆ ಹೆಚ್ಚಿಗೆ ದುಡ್ಡು ಬೇಕು. ಆದರೂ ಮೂರನೆಯ ಯೋಜನೆ ಯಲ್ಲಿ ಆ ಪ್ರದೇಶದವರಿಗಾದರೂ ಜನಗಳಿಗೆ ಕೂಡ ಸ್ವಲ್ಪ ಅನುಕೂಲವನ್ನು, ಸೌಲಭ್ಯವನ್ನು ಕಲ್ಪಿಸಿ ಕೊಡಬೇಕು. ಮುಂದಗೆರೆಯ ಸೇತುವೆಯೂ ಆಗಬೇಕಾಗಿರುತ್ತದೆ, ಅಲ್ಲಿಯ ಜನಗಳಿಗೂ ಸಹಾಯವಾಗಬೇಕು, ಅವರ ಮೇಲೆ ನಮ್ಮ ಅಸೂಯೆ ಇಲ್ಲ, ಅಲ್ಲಿಯ ಕೆಲಸಗಳಿಗೆ ನಮ್ಮ ಅಡ್ಡಿ ಆತಂಕವಿಲ್ಲ. ಆದರೆ ನಮಗೆ ಗನ್ನಿಗಡ ಮತ್ತು ಗೊಂಡಹಳ್ಳಿ ಹತ್ತಿರವೂ ಸೇತುವೆಗಳನ್ನು ಮಾಡಿ ಕೊಡಬೇಕು. ಇವುಗಳನ್ನು ಮಾಡಿಕೊಡುವುದರಿಂದ ಹಾಸನ ಮತ್ತು ಮಂಡ್ಯ ಜಿಲ್ಲೆಗಳ ರೈತರಿಗೆ ನೇರವಾದ ಸಂಪರ್ಕವನ್ನು ಕಲ್ಪಿಸಿಕೊಟ್ಟಂತಾಗುತ್ತದೆ, ಈಗ ನೇರವಾದ ಸಂಪರ್ಕವಿಲ್ಲ. ನೇರವಾದ ಸಂಪರ್ಕವಿದ್ದರೆ ರೈತರು ಕಷ್ಟವಿಲ್ಲದೆ ಆಹಾರ ವಸ್ತುಗಳನ್ನು ಬದಲಾವಣೆ ಮಾಡಿ ಕೊಳ್ಳಬಹುದು, ವ್ಯಾಪಾರ ಮಾಡಿಕೊಳ್ಳಬಹುದು ಅಲ್ಲಿಯ ಜನರಿಗೆ ಸಂಚಾರ ಸೌಲಭ್ಯಗಳ ಅನುಕೂಲ ವಾದರೆ ಅವರ ಆರ್ಥಿಕ ವ್ಯವಸ್ಥೆ ಕೂಡ ಬಹಳ ಮಟ್ಟಿಗೆ ಸುಧಾರಿಸುತ್ತದೆ. ಈ ದೃಷ್ಟಿ ಯಿಂದ ಆ ಕೆಲಸವನ್ನು ಸರ್ಕಾರದವರು ಬಹಳ ಜಾಗ್ರತೆ ಮಾಡಿಕೊಡಬೇಕೆಂದು ವಿನಂತಿ ಮಾಡಿ ಕೊಳ್ಳುತ್ತೇನೆ.

ನಮ್ಮ ಜಿಲ್ಲೆಯ ಹೊಳೆನರಸಿಪುರ ತಾಲ್ಲೂಕಿನಲ್ಲಿ ನಾಲೆ ಹಾಗೂ ನದೀ ನೀರನ್ನು ನೀರಾವರಿ ಗಾಗಿ ಉಪಯೋಗಿಸಿಕೊಳ್ಳುವುದಕ್ಕೆ ಒಂದು ಒಳ್ಳೆಯ ಯೋಜನೆಯನ್ನು ಮಾಡಿದ್ದೀರಿ, ಒಂದು ಲಿಫ್ಟ್ ಇರಿಗೇಶನ್ ಸ್ಕೀಮ್ ಮಾಡಿದ್ದೀರಿ. ಆ ಬಗ್ಗೆ ಕೆಲವಾರು ವಿಚಾರಣೆಗಳು, ವಿಚಾರ ವಿನಿಮಯವಾಗಿದೆ, ಕಡಗಿನ ಹೊಸಹಳ್ಳಿ ಮತ್ತು ಚಿಕ್ಕಹಳ್ಳಿ ಯೋಜನೆಯೆಂಬುದೇ ಅದು. ಇವತ್ತಿನ ದಿವಸ ಅವುಗಳ ಬಗ್ಗೆ ದೇಶದಲ್ಲಿ ಕೂಡ ಪ್ರಚಾರವಾಗಿದೆ, ತಜ್ಞರು ಮತ್ತು ಮಾನ್ಯಮಂತ್ರಿ ಗಳೂ ಅಲ್ಲಿಗೆ ಬಂದಿದ್ದರು, ಅಧಿಕಾರಿಗಳೂ ಬಂದಿದ್ದರು, ಇಂಥ ಸ್ಕೀಮಿನಿಂದ ಎಲ್ಲೆಲ್ಲಿ ಅನುಕೂಲ

ವಾಗುತ್ತದೊ, ಅಲ್ಲಲ್ಲಿ ಮಾಡುವುದು ಒಳ್ಳೆಯದು, ಅದರಿಂದ ಆಹಾರದ ಅಭಾವ ನಿವಾರಣೆ ಮಾಡಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ. ಅದು ಕೇವಲ ಬೆಂಗಾಡು, ಹುಂಜಹಳ್ಳಿ ಎಂಬಕಡೆ ಬಹಳ ರೈತಾಪಿ ಜನಗಳು ಹುರುಳಿ ಕೂಡ ಆಗವೆ ಇರತಕ್ಕಂಥ ಜಮೀನಿನಲ್ಲಿ, ಶ್ರೀರಾಮ ದೇವರ ಉತ್ತರನಾಲಾದಿಂದ ನೀರನ್ನು ತೆಗೆದುಕೊಂಡು, ಇವತ್ತಿನ ದಿವಸ ಫಸಲು ಬೆಳೆದಿದ್ದಾರೆ. ಅಂಥ ಯೋಜನೆಗಳ ಬಗ್ಗೆ ಹೊಳೆನರಸೀಪುರ ತಾಲ್ಲೂಕಿನಲ್ಲಿ ಈಗಾಗಲೇ ಅಂದಾಜು ಆಗಿ, ಇವತ್ತಿನ ದಿವಸ ಇಲಾಖೆಯವರು ದೊಡ್ಡ ದೊಡ್ಡ ಯೋಜನೆಗಳನ್ನು ತಯಾರು ಮಾಡಿದ್ದಾರೆ. ಈ ಲಿಫ್ಟ್ ಇರಿಗೇಶನ್ ಯೋಜನೆಗಳ ಬಗ್ಗೆ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆಂದು ಸಂಬಂಧಪಟ್ಟ ಅಧಿಕಾರಿಗಳನ್ನು ಮಾನ್ಯಮಂತ್ರಿಗಳು ಕೇಳಿ, ಅವರು ಏನೇನು ವಿವರಗಳನ್ನು, ಅಂಕಿ ಅಂಶಗಳನ್ನು ಸಂಗ್ರಹಿಸಿ ಅಂದಾಜು ತಯಾರು ಮಾಡಿ ಇಟ್ಟಿದ್ದಾರೋ, ಅವುಗಳು ತಮ್ಮ ಮನಸ್ಸಿಗೆ ತೃಪ್ತಿಕರವಾಗಿದ್ದರೆ ಮತ್ತು ಅಧಿಕಾರಿಗಳೂ ಹಾಗೆಯೇ ಅಭಿಪ್ರಾಯ ಪಟ್ಟರೆ ಕಾರ್ಯರೂಪಕ್ಕೆ ತರಬೇಕು. ಅದರಿಂದ ಸುಮಾರು ಎರಡುಸಾವಿರ ಎಕರೆ ಜಮೀನು ಬೇಸಾಯಕ್ಕೆ ಬರುತ್ತದೆ. ಲಿಫ್ಟ್ ಇರಿಗೇಶನ್‌ನಿಂದ ಹೊಳೇನರಸೀಪುರದ ಒಂದುಕಡೆಯಲ್ಲಿಯೇ ಇಷ್ಟು ಅನುಕೂಲವಾದರೆ, ಇನ್ನೂ ಅನೇಕ ಕಡೆಗಳಲ್ಲಿರುವ ಸೌಲಭ್ಯಗಳನ್ನು ಪರಿಶೀಲನೆ ಮಾಡಿ ಕೆಲಸ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಿದರೆ, ನಿಜವಾಗಿಯೂ ನಮ್ಮ ಆಹಾರದ ಕೊರತೆಯನ್ನು ಬಹಳ ಸುಲಭವಾಗಿ ನಿವಾರಣೆ ಮಾಡಬಹುದು ಇದಕ್ಕೆ ಬೇರೆ ಇಲಾಖೆಯವರ ಒಂದು ಸಹಕಾರವೂ ಬೇಕು ಎಲೆಕ್ಟ್ರಿಸಿಟಿ ಬೋರ್ಡಿನವರ ಸಹಾಯನಮಗಿಲ್ಲದಿದ್ದರೆ, ಈ ಸ್ಕೀಮು ಜಯಪ್ರದವಾಗುವುದಿಲ್ಲ. ಹೊಟ್ಟೆ ಹಸಿದಿರುವಾಗ, ಎಲೆಕ್ಟ್ರಿಸಿಟಿ ಅಭಾವವಿದೆಯೆಂದು ಅವರು ಹೇಳಬಾರದು. ವಿದ್ಯುಚ್ಛಕ್ತಿ ಕೊಡುವುದು ಅವರ ಜವಾಬ್ದಾರಿ, ದುಡ್ಡನ್ನು ಕೊಡುವ ಜವಾಬ್ದಾರಿ ದೇಶದ ಜನತೆಗೆಬಿಡಿ. ವಿದ್ಯುಚ್ಛಕ್ತಿ ಕೊರತೆಯನ್ನು ಪದೇ ಪದೇ ಅಸೆಂಬ್ಲಿಯಲ್ಲಿ ಹೇಳುತ್ತಲೇ ಇದ್ದೇವೆ. ಅದನ್ನು ಶೀಘ್ರದಲ್ಲಿಯೇ ನಿವಾರಣೆ ಮಾಡಿ, ವಿದ್ಯುದ್ವೇಗದಲ್ಲಿ ನಿವಾರಣೆ ಮಾಡಿ, ವಿದ್ಯುಚ್ಛಕ್ತಿಯನ್ನು ರೈತರಿಗೆ ಸಾಕಷ್ಟು ಮಟ್ಟಿಗೆ ಸಪ್ಲೈ ಮಾಡುವುದಕ್ಕೆ ಸಹಾಯ ಮಾಡಬೇಕು ಲಿಫ್ಟ್ ಇರಿಗೇಶನ್ ಭಾವಿಗಳನ್ನು ಯಾರು ಉಪಯೋಗಿಸುತ್ತಾರೆಯೋ ಅಂಥವರೆಲ್ಲರಿಗೂ ಸಹಾಯ ಮಾಡಬೇಕೆಂದು ತಮ್ಮ ಮೂಲಕ ಮಾನ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ನಾನು ಮತ್ತೊಷ್ಟು ಹೇಳುತ್ತಿರುವುದೇನೆಂದರೆ, ನಾನು ಹೇಳಿದ ಲಿಫ್ಟ್ ಇರಿಗೇಶನ್ ಬಗ್ಗೆ ತಮ್ಮ ಮನಸ್ಸನ್ನು ಕೇಂದ್ರಿಕರಿಸಿ, ಸಂಬಂಧಪಟ್ಟ ಅಧಿಕಾರಿಗಳಲ್ಲಿ ಕರೆಸ್ಪಾಂಡೆನ್ಸ್ ಮಾಡಿ, ಅಂಕಿ ಅಂಶಗಳನ್ನು ತರಿಸಿಕೊಂಡು, ಈಗಾಗಲೇ ಹೊಳೆನರಸಿಪುರ ತಾಲ್ಲೂಕಿನಲ್ಲಿ ಅಧಿಕಾರಿಗಳು ಯಾವ ಯೋಜನೆಯನ್ನು ಸಿದ್ಧಪಡಿಸಿದ್ದಾರೋ ಅದನ್ನು ಕಾರ್ಯಗತ ಮಾಡುವುದಕ್ಕೆ ಪ್ರಾರಂಭ ಮಾಡಬೇಕು. ನನಗೆ ಹೇಮಾವತಿ ಕನಸು ಮನಸ್ಸಿನಲ್ಲಿಯೂ ಬರುತ್ತಿದೆ. ಕಾವೇರಿ ಬೇಸಿನ್ನಿನ ನೀರನ್ನೆಲ್ಲಾ ಆದಷ್ಟು ಮಟ್ಟಿಗೆ ಜಾಗ್ರತೆಯಾಗಿ ಉಪಯೋಗಿಸಿ ಕೊಂಡು ಸಾಧ್ಯವಾದ ನೀರಾವರಿ ಯೋಜನೆಗಳನ್ನೆಲ್ಲಾ ಕೈಗೊಳ್ಳಲು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಹಾರಂಗಿ, ಕಂಬದಕಡ ಮತ್ತು ಗೋಮೂರು ಪ್ರಾಜೆಕ್ಟುಗಳ ಬಗ್ಗೆ ಯೋಜನೆ ಮಾಡಿ ಆಯೋಜನೆ ಶೀಘ್ರವಾಗಿ ಆಲೋಚನೆ ಮಾಡಿ, ಅವುಗಳನ್ನು ಪ್ರಯಾರಿಟಿ ಸ್ಕೀಮುಗಳು ತೆಗೆದುಕೊಂಡು ಜಾಗ್ರತೆ ಕಾರ್ಯಗತ ಗೊಳಿಸಬೇಕೆಂದು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ಈ ಸಂದರ್ಭದಲ್ಲಿ ಮಾತನಾಡುವಾಗ ಹೇಳಬೇಕಾದ ಮತ್ತೊಂದು ಅಂಶವೇನೆಂದರೆ, ಅನೇಕ ರೋಡುಗಳನ್ನು ಇಲಾಖೆಯವರು ತಮ್ಮ ಆಡಳಿತಕ್ಕೆ ತೆಗೆದುಕೊಂಡಿದ್ದಾರೆ.

ಈ ಪಿ.ಡಬ್ಲ್ಯು.ಡಿ. ನಲ್ಲಿ ಕೆಲಸಗಳು ಎಷ್ಟು ಜಾಗ್ರತೆ ಆಗಬೇಕೋ ಅಷ್ಟು ಜಾಗ್ರತೆ ಆಗುತ್ತಿಲ್ಲವೆಂದು ಹೇಳಬೇಕಾಗಿದೆ. ಈ ಕಾರಣದಿಂದ ಈ ದಿವಸ ಅಲ್ಲಿ ಸುಮಾರು 25–30 ಗ್ರಾಮಗಳ ಜನರಿಗೆ ಬಹಳ ತೊಂದರೆಯಾಗಿದೆ. ಜನರು ಪೇಟೆ, ಸಂತೆ ಇತ್ಯಾದಿಗಳಿಗೆ ಕೂಡ

(ಶ್ರೀ ವೈ. ವೀರಪ್ಪ)

ಹೋಗಲು ಅವಕಾಶವಿರುವುದಿಲ್ಲ. ಈಗಿರತಕ್ಕ ಮಾನ್ಯ ಮಂತ್ರಿಗಳಿಗೆ ಈ ವಿಷಯಗಳೆಲ್ಲ ಗೊತ್ತಿದೆಯೋ ಇಲ್ಲವೋ ನನಗೆ ತಿಳಿಯದು. ಅಲ್ಲಿ ಹೊಳೆನರಸೀಪುರ–ಕೇರಳಾಪುರ ರಸ್ತೆ ಎಂತ ಒಂದಿದೆ. ಹಿಂದಿದ್ದ ಮಂತ್ರಿಗಳಿಗೆಲ್ಲ ಈ ವಿಚಾರ ಚೆನ್ನಾಗಿ ಗೊತ್ತಿತ್ತು. 15 ವರ್ಷಗಳ ಹಿಂದಿನಿಂದ ನಾವು ಈ ರಸ್ತೆಗೆ ಒತ್ತಾಯ ಮಾಡುತ್ತಲೇ ಇದ್ದೇವೆ. ಆದರೆ ಇದರಲ್ಲಿ ಏನೋ ಒಂದು ಕ್ಲಿಷ್ಟ ಪರಿಸ್ಥಿತಿಯುಂಟಾಗಿದೆ. ಇದರಿಂದ ಅಲ್ಲಿ 25-30 ಗ್ರಾಮಗಳ ಜನರಿಗೆ ತೊಂದರೆ ಆಗಿದೆ. ಆದರೆ ಯಾರೋ ಒಬ್ಬಿಬ್ಬ ವ್ಯಕ್ತಿಗಳ ಮಧ್ಯೆ ಇರತಕ್ಕ ವೈಷಮ್ಯಗಳಿಂದ ಇಂಥ ಕೆಲಸಗಳು ನಿಲ್ಲಬಾರದು. ಈ ಕಾರ್ಯ ಬೇಗ ಆಗಲೇಬೇಕೆಂದು ಹೇಳುತ್ತೇನೆ. ಈ ರಸ್ತೆ ವಿಚಾರದಲ್ಲಿ ಎಲ್.ಎಸ್.ಜಿ. ಮಂತ್ರಿಗಳ ಹಾಗೂ ಹಿಂದಿನ P.W.D. ಮಂತ್ರಿಗಳ ಕಡೆಯಿಂದ ಮಾಹಿತಿ ಪಡೆದು ಈ ಕೆಲಸವನ್ನು ಜಾಗ್ರತೆ ನಡೆಸಲು ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದೇ ಸಂದರ್ಭದಲ್ಲಿ ನಾನೀಗ ಸರಕಾರದವರಿಗೆ ನೇರವಾಗಿ ತಿಳಿಸಬೇಕಾಗಿರುವ ಒಂದು ವಿಚಾರವೇನೆಂದರೆ–ಸರ್ಕಾರದವರು ಈ ಕಂಟ್ರಾಕ್ಟರುಗಳಿಗೆ ಸಕಾಲದಲ್ಲಿ ಕೆಲಸವನ್ನೊಪ್ಪಿಸಿ, ಅವರು ಷರತ್ತುಗಳಿಗನುಸಾರವಾಗಿ ಆ ಕೆಲಸವನ್ನು ಮುಗಿಸಿ ಕೊಟ್ಟಾಗ್ಯೂ ಅವರಿಗೆ ಸರಿಯಾಗಿ ಬಿಲ್‌ನ ಹಣ ಪಾವತಿ ಆಗುತ್ತಿಲ್ಲವೆಂಬ ಒಂದು ದೂರು ನನ್ನ ಕಿವಿಗೆ ಬಿದ್ದಿದೆ. ನಿಗದಿ ಮಾಡಿದ ಕಾಲದಲ್ಲಿ ನಿಗದಿ ಮಾಡಿದ್ದ ಕೆಲಸವನ್ನು ಮಾಡಿಕೊಟ್ಟರೆ ಅಂಥ ಕಂಟ್ರಾಕ್ಟರಿಗೆ ನಿಗದಿಯಾದ ಕಾಲದಲ್ಲಿ ಬಿಲ್ಲನ್ನು ಏಕೆ ಪಾವತಿ ಮಾಡಬಾರದು ? ನಾನು ವಿನಾ ಕಾರಣ ಈ ವಿಚಾರವನ್ನು ಪ್ರಸ್ತಾಪಿಸುತ್ತಿಲ್ಲ. ಸರ್ಕಾರದವರು ಹೀಗೆ ಕಂಟ್ರಾಕ್ಟರ ಬಿಲ್ಲನ್ನು ಕಾಲಕ್ಕೆ ಸರಿಯಾಗಿ ಪಾವತಿ ಮಾಡದಿದ್ದರೆ ಅದರಿಂದ ಕೇವಲ ಕಂಟ್ರಾಕ್ಟರಿಗೊಬ್ಬನಿಗೇ ಲುಕ್ಸಾನಾಗುವುದಿಲ್ಲ. ಆ ನಿಧಾನದಿಂದ ಆ ಪ್ರದೇಶದಲ್ಲಿರತಕ್ಕ ಜನಗಳಿಗೂ ಸಹ ಆ ಕೆಲಸವಾಗದೆ ಬಹಳ ತೊಂದರೆ ಆದೇ ಆಗುತ್ತದೆ. ಈ ತೊಂದರೆಯನ್ನು ನಿವಾರಣೆ ಮಾಡಲು ಸರ್ಕಾರದವರು ಏನಾದರೂ ಒಂದು ಹೊಸ ಸುಧಾರಣೆಯನ್ನು ಜಾರಿಗೆ ತಂದುದೇ ಆದರೆ ನಿಜವಾಗಿಯೂ ಈ ಅನೇಕ ಕೆಲಸಗಳು ಬಹಳ ಸುಗಮವಾಗಿ ಆಗುತ್ತವೆಂದು ನಾನೀ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಆ ನಮ್ಮ ಶರಾವತಿ ವ್ಯಾಲಿಯ ವಿದ್ಯುಚ್ಛಕ್ತಿಯ ಯೋಜನೆ ಏನಿದೆಯೋ ಅದರ ಬಗ್ಗೆ ಈಗಾಗಲೇ ಈ ಮಾನ್ಯ ಸಭೆಯಲ್ಲಿ ಬಹಳ ವಿಪುಲವಾದ ಚರ್ಚೆಗಳಾಗಿವೆ. ಈ ವಿಚಾರದಲ್ಲಿ ಸಾಕಷ್ಟು ಮಾಹಿತಿ ಮಾನ್ಯ ಮಂತ್ರಿಗಳಿಗೂ ಈಗಾಗಲೇ ಬಂದಿರಬಹುದು. ಈ ಯೋಜನೆಯನ್ನು ಜಾಗ್ರತೆ ಮುಗಿಸುವುದಕ್ಕೆ ಸರ್ಕಾರದಲ್ಲಿ ಒಳಗೊಳಗೇ ಅವರಲ್ಲಿ ಭಿನ್ನಾಭಿಪ್ರಾಯಗಳು ಬಂದಿರಬಹುದು. ಆದರೆ ಅವರಿಗೆ ಆ ತೊಂದರೆಗಳೇನೇ ಇರಲಿ ಈ ಕೆಲಸವನ್ನು ಜಾಗ್ರತೆ ಮುಗಿಸುವುದಕ್ಕೆ ಪ್ರಯತ್ನ ಮಾಡಿದರೆ ಇದರಿಂದ ದೇಶಕ್ಕೆ ಕ್ಷೇಮವಾಗಬಹುದು. ಮೇಲಾಗಿ ನಮಗೆ ಪೀಡಿಸುತ್ತಿರುವ ಈ ಆಹಾರದ ಕೊರತೆಯೆಂಬ ಒಂದು ಪೆಡಂಭೂತ ಏನಿದೆ ಇದನ್ನು ಓಡಿಸುವುದಕ್ಕೆ ಸಹ ಇದರಿಂದ ತುಂಬಾ ಅನುಕೂಲವಾಗುತ್ತದೆ. ಇದೇ ಸಂದರ್ಭದಲ್ಲಿ ಸರ್ಕಾರದವರ ಗಮನಕ್ಕೆ ತರಬೇಕಾದ ಮತ್ತೊಂದು ಬಹು ಮುಖ್ಯವಾದ ವಿಚಾರವೇನೆಂದರೆ ರಸ್ತೆಗಳ ದುರಸ್ತಿಗಾಗಿ ಈಗ ಅಲ್ಲಲ್ಲಿ ರಸ್ತೆಗಳಲ್ಲಿ ಬೇಕಾದಷ್ಟು ಜಲ್ಲಿಯನ್ನು ಶೇಖರಣೆ ಮಾಡಿರುತ್ತಾರೆ. ಆ ಜಲ್ಲಿಯನ್ನು ಸಕಾಲದಲ್ಲಿ ಉಪಯೋಗ ಮಾಡುವುದಕ್ಕೆ ಅವಕಾಶವಾಗದೆ ಇರುವುದರಿಂದ ಆ ಜಲ್ಲಿ ದನಕರುಗಳ ತುಳಿತದಿಂದ ದನ ಕಾಯುತಕ್ಕ ಹುಡಗರಿಂದ ಬಹಳ ವೇಸ್ಟಾಗಿ ಹೋಗುತ್ತಿದೆ. ಇದನ್ನು ತಡೆಗಟ್ಟಬೇಕು. ಇಲ್ಲವಾದರೆ ಇದರಿಂದ ಕಂಟ್ರಾಕ್ಟರಿಗೂ ನಷ್ಟ ಸರ್ಕಾರಕ್ಕೂ ನಷ್ಟ. ಈ ದಿವಸ ಅಲ್ಲಲ್ಲೇ ರಸ್ತೆಗಳಲ್ಲಿ ಸಾವಿರಾರು ರೂಪಾಯಿಗಳ ಜೆಲ್ಲಿಯನ್ನು ಸ್ಟ್ಯಾಕ್ ಮಾಡಿದ್ದಾರೆ. ಇದರಲ್ಲಿ ಶೇಕಡ 30 ರಷ್ಟಾದರೂ ಹಾಳಾಗಿ ಹೋಗುತ್ತಿದೆ. ಈ ವಿಚಾರದಲ್ಲಿ ಸರ್ಕಾರದವರು ಸರಿಯಾಗಿ ನಿಗಾ ತೆಗೆದುಕೊಂಡು ಸಕಾಲದಲ್ಲಿ ಆ ಸಾಮಾನು ರಸ್ತೆಗೆ ವಿನಿಯೋಗವಾಗುವಂತೆ ಮಾಡಿದರೆ ಆಗ ಸರ್ಕಾರದವರು ಈ ರಸ್ತೆಗಾಗಿ ಖರ್ಚು ಮಾಡಿದ ಹಣ ಸಾರ್ಥಕವಾದಂತಾಗು

ತ್ತದೆ. ಇಲ್ಲದೆ ಇದ್ದರೆ ಇಲ್ಲ. ಇದಕ್ಕಾಗಿ ಈಗ ಸರ್ಕಾರದವರು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ. ಮೇಲಾಗಿ ಈ ವಿಚಾರದಲ್ಲಿ ಇಲಾಖಾ ಅಧಿಕಾರಿಗಳಿಗೂ ಸಹ ಸೂಕ್ತ ಎಚ್ಚರಿಕೆ ಕೊಡಬೇಕಾದ್ದು ಅವಶ್ಯಕ. ಈ ಇಲಾಖೆಗೇನೂ ದುಡ್ಡನ್ನೇ ಕೊಡಬೇಕಾಗಿಲ್ಲ ಎಂತ ಟೀಕೆ ಮಾಡತಕ್ಕ ವ್ಯಕ್ತಿಯಲ್ಲ ನಾನು. ಕೊಡತಕ್ಕ ಹಣ ಸದ್ವಿನಿಯೋಗವಾಗಬೇಕೆಂದು ಮಾತ್ರ ನಾನೀಗ ಹೇಳುತ್ತಿದ್ದೇನೆ. ನಮ್ಮ ಆಹಾರ ಅಭಾವದ ನಿವಾರಣೆ ಇದನ್ನೇ ಅವಲಂಬಿಸಿ ಕೊಂಡಿರುತ್ತೆ. ಆದ್ದರಿಂದ ಈ ಎಲ್ಲ ವಿಚಾರಗಳಿಗೂ ಸರ್ಕಾರದವರು ಸೂಕ್ತ ನಿಗಾ ಕೊಟ್ಟು ಅಲ್ಲಲ್ಲೇ ನಡೆಯಬೇಕಾಗಿರತಕ್ಕ ಕೆಲಸ ಕಾರ್ಯಗಳು ಜಾಗ್ರತೆ ಮುಗಿಸತಕ್ಕ ಏರ್ಪಾಡನ್ನು ಕೈಗೊಳ್ಳಬೇಕೆಂದು ಹೇಳಿ ಈ ಸಂದರ್ಭದಲ್ಲಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿ ಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಕೆ. ಸುರಪೂರ್ (ಇಂಡಿ).—ಅಧ್ಯಕ್ಷರೇ, ಈಗ ಸಭೆಯ ಮುಂದೆ ಇರತಕ್ಕ ಈ ಲೋಕೋಪಯೋಗಿ ಶಾಖೆಯ ಬೇಡಿಕೆಗಳನ್ನು ಅನುಮೋದಿಸುತ್ತ ನಾನೀಗ ಕೆಲವು ಸೂಚನೆಗಳನ್ನು ಸರ್ಕಾರಕ್ಕೆ ಹೇಳಬಯಸುತ್ತೇನೆ.

ಈಗ ನಾನು ಈ ರೋಡ್ಸ್ ಮತ್ತು ಬಿಲ್ಡಿಂಗುಗಳೇನಿವೆ ಇವುಗಳ ಸಲುವಾಗಿ ಸರ್ಕಾರಕ್ಕೆ ಹೇಳಬೇಕಾಗಿರುವುದೇನೆಂದರೆ ಈಗ ಮುಖ್ಯವಾಗಿ ಸಂಸ್ಥಾನದಲ್ಲಿ ಎಲ್ಲೆಲ್ಲಿ ದೊಡ್ಡ ದೊಡ್ಡ ರಸ್ತೆಗಳಿರುತ್ತವೋ ಅವುಗಳನ್ನೆಲ್ಲ ಪೂರ್ಣವಾಗಿ ಈಗ ಡಾಂಬರ್ ರಸ್ತೆ ಮಾಡಲಿಕ್ಕೆ ಷುರು ಮಾಡಿದ್ದಾರೆ. ನಾನು ಇದನ್ನು ವಿರೋಧಿಸುತ್ತೇನೆ. ನಮ್ಮ ಉತ್ತರ ಕರ್ಣಾಟಕದಲ್ಲಿರತಕ್ಕದರ ಒಂದು ರಸ್ತೆಗೂ ಇಲ್ಲಿಯತನಕ ಒಂದು ಕಾಜ್‌ವೇಯನ್ನಾಗಲೀ-ಬ್ರಿಡ್ಜನ್ನಾಗಲೀ ಹಾಕಿರುವು ದಿಲ್ಲ. ಮೊದಲು ಇವುಗಳನ್ನು ಹಾಕದೆ ರಸ್ತೆಗಳನ್ನು ಡಾಂಬರ್ ಮಾಡುವುದು ಯೋಗ್ಯವಾದ್ದಲ್ಲ ಎಂತ ನನ್ನ ಭಾವನೆ ಅದೆ. ಮನೇಲಿ ಉಪವಾಸವಿದ್ದರೂ ಹೊರಗಡೆ ಹೊಸ ಅಂಗೀ ಹಾಕಿಕೊಂಡು ಹೋದರೆ ಹೇಗಾಗುತ್ತದೋ ಈಗ ಇದೂ ಹಾಗೇ ಆಗಿದೆ. ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಅನೇಕ ರಸ್ತೆಗಳಿಗೆ ಕಾಜ್‌ವೇಗಳಿಲ್ಲ ಬ್ರಿಡ್ಜಗಳೂ ಇಲ್ಲ. ನಾವು ಪದೇ ಪದೇ ಈ ಬಗ್ಗೆ ಒತ್ತಾಯ ಮಾಡುತ್ತಲೇ ಬಂದಿದ್ದೇವೆ. ಆದರೆ ಸರ್ಕಾರದವರು ಇಲ್ಲಿಯತನಕ ನಾವು ಹಾಗೆ ಮಾಡಿದ್ದೇವೆ, ಹೀಗೆ ಮಾಡಿದ್ದೇವೆ, ಅಷ್ಟು ಮಾಡಿದ್ದೇವೆ, ಇಷ್ಟು ಮಾಡಿದ್ದೇವೆ ಎಂತ ಹೇಳುತ್ತಿದ್ದುದೆಲ್ಲ ಬರಿ ಪುಸ್ತಕದ ಮಾತಾಗಿದೆ. ಆದರೆ ನಮ್ಮ ಕಡೆ ಒಂದು ಕೆಲಸವೂ ಆಗಿಲ್ಲ. ಆದರೆ ಆ ಜಮಖಂಡಿ ರಸ್ತೆಯಲ್ಲಿ ಮಾತ್ರ ಒಂದು ಕಡೆ ಮಾಡಿದ್ದಾರೆ.

ಅಧ್ಯಕ್ಷರು.—ಎಲ್ಲಿ ಮಾಡಿದ್ದಾರೆ ಎಂದು ಹೇಳಿದಿರಿ ?

ಶ್ರೀ ಎಂ. ಕೆ. ಸುರಪೂರ್.—ತಾವು ಇಲ್ಲೇ ಇರುವುದರಿಂದ ತಮಗೆ ಗೊತ್ತಿಲ್ಲ. ನಾವು ಅಲ್ಲೇ ಇರುವುದರಿಂದ ಎಲ್ಲಾ ನೋಡಿದ್ದೇವೆ. ಈಗ ಜಮಖಂಡಿಗೆ ಹೋಗುವ ರಸ್ತೆಯಲ್ಲಿ ಒಂದು ಸಣ್ಣ ಸೇತುವೆ ಕೆಲಸ ಮಾಡಿದ್ದಾರೆ. ಆದುದರಿಂದ ನಾನೀಗ ಸರ್ಕಾರದವರಿಗೆ ಹೇಳುವುದೇನೆಂದರೆ ಮೊದಲು ಈ ರಸ್ತೆಗಳಿಗೆ ಅಗತ್ಯವಾಗಿ ಆಗಬೇಕಾದ ಕಾಜ್‌ವೇ ಮತ್ತು ಬ್ರಿಡ್ಜಗಳನ್ನು ಮೊದಲು ಮಾಡಿ ಅನಂತರ ಈ ರಸ್ತೆಗಳನ್ನು ಡಾಂಬರ್ ಮಾಡಿ ಎಂತ ಹೇಳುತ್ತೇನೆ. ಬರಿ ಡಾಂಬರ್ ರಸ್ತೆ ಮಾಡಿ ಬ್ರಿಡ್ಜ ಇಲ್ಲದಿದ್ದರೇನು ಪ್ರಯೋಜನ ? ಹಳ್ಳಗಳು ಬಂದರೆ ಈ ಡಾಂಬರ್ ರಸ್ತೆಯೆಂದೂ ಉಪಯೋಗಕ್ಕೆ ಬರುವುದಿಲ್ಲ. ಮೇಲಾಗಿ ನಮ್ಮಲ್ಲಿ ಈ ಡಾಂಬರ್ ರಸ್ತೆ ಮಾಡಲಿಕ್ಕೂ ಸಹ ರೋಡ್‌ರೋಲರ್ಸ್‌ಗಳೂ ಮತ್ತು ಇತರ ಎಕ್ವಿಪ್‌ಮೆಂಟ್ಸ್ ಗಳು ಸಾಕಿಲ್ಲ. ಅದೇನು ನಮ್ಮ ಪ್ರಾಂತ್ಯಕ್ಕೆ ಶಾಪ ಬಂದಿದೆಯೋ ನಾನು ಕಾಣೆ ! ನಾವು ಎಷ್ಟು ಬಾಯಿ ಬಡಿದುಕೊಂಡರೂ ಏನೂ ಪ್ರಯೋಜನವಾಗುತ್ತಿಲ್ಲ. ನಮ್ಮಲ್ಲಿರತಕ್ಕ ಎರಡು ಎರಡು ರೋಡ್ ರೋಲರುಗಳಲ್ಲಿ ಒಂದು ಕುಂಟ ಇನ್ನೊಂದು ಇದೆ. ಅದರಿಂದ ಇಡೀ ಜಿಲ್ಲೆಗೆ ಎಷ್ಟು ಕೆಲಸ ಮಾಡಲು ಸಾಧ್ಯವಾದೀತು ? ಈ ವಿಚಾರದಲ್ಲಿ ನಾವು ಸುಮ್ಮನೆ ಬಾಯಿ ಬಡಿದುಕೊಳ್ಳುವುದಾಗಿದೆ. ಸರ್ಕಾರದವರು ಕೂಡಲೇ ಇದನ್ನು ವಿಚಾರಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಬಾಗಲುಕೋಟೆ ವಿಚಾರವೋ ?

ಶ್ರೀ ಎಂ. ಕೆ. ಸುರಪೂರ್.—ಅದೂ ಬಿಜಾಪುರ ಜಿಲ್ಲೆಯಲ್ಲಿದೆ. ಅಷ್ಟು ಮಾತ್ರ ಹೇಳಬಲ್ಲೆ. ಈ ದಿವಸ ಅಲ್ಲೆಲ್ಲಾ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ರಸ್ತೆಗಳನ್ನು ಮಾಡಿದ್ದಾರೆ. ಒಂದೂ ಉತ್ತಮ ಸ್ಥಿತಿಯಲ್ಲಿಲ್ಲ. ಇದನ್ನು ಹೇಳಿದರೆ ಸರ್ಕಾರದವರು ಅವುಗಳನ್ನಿನೂ ಉತ್ತಮ ಸ್ಥಿತಿಗೆ ತರಬಲ್ಲರು. ನಾವು ಈ ವಿಚಾರಗಳನ್ನೆಲ್ಲಾ ಹೇಳಿದರೆ ಸರ್ಕಾರದವರು ದುಡ್ಡಿಲ್ಲ ಎನ್ನುತ್ತಾರೆ. ಹಾಗಾದರೆ ನಾವಿನ್ನೇನು ಮಾಡಬೇಕು ? ಆದರೆ ಸರ್ಕಾರಕ್ಕೆ ಈ ದಿವಸ ಅಂಥ ದುಡ್ಡಿನ ಕೊರತೆಯೇನೂ ಇಲ್ಲ. ಬೇಕಾದ ಹಾಗೆ ಇತರ ಕಡೆಗಳಿಗೆಲ್ಲ ಖರ್ಚು ಮಾಡುತ್ತಿದ್ದಾರೆ. ಆದರೆ ನಮ್ಮಲ್ಲಿಗೆ ಮಾತ್ರ ಸರ್ಕಾರದವರು ಮನಸ್ಸು ಮಾಡುತ್ತಿಲ್ಲ. ನಮ್ಮಲ್ಲಿ ಇರತಕ್ಕ ಇನ್ನೊಂದು ಭಾರಿ ತೊಡರೇನೆಂದರೆ ನಮ್ಮಲ್ಲಿ ಭಾರಿ ಭಾರಿ ಕಂಟ್ರಾಕ್ಟರುಗಳಿರುವುದಿಲ್ಲ. ಆದ್ದರಿಂದ ನಮ್ಮಲ್ಲಿ ಇರತಕ್ಕ ಕಂಟ್ರಾಕ್ಟರುಗಳಿಗೇ ಸ್ವಲ್ಪ ದುಡ್ಡು ಜಾಸ್ತಿ ಖರ್ಚಾದರೂ ಚಿಂತೆಯಿಲ್ಲ. ಷೆಡ್ಯೂಲ್ ರೇಟಿಗಿಂತ ಹತ್ತು ಇಪ್ಪತ್ತು ಪರ್ಸೆಂಟ್ ಜಾಸ್ತಿ ಮಾಡಿಕೊಟ್ಟರೆ ಇದರಿಂದ ಕೆಲಸಗಳು ಬೇಗ ಆಗುತ್ತವೆ. ಜಮಖಂಡಿ-ಮುರಳವಾಡಿ ರಸ್ತೆಯಲ್ಲಿ ಒಂದು ಬ್ರಿಡ್ಜ್ ಆಗಬೇಕಾಗಿದೆ. ಇದಕ್ಕಾಗಿ ನಾವು ಐದು ವರ್ಷಗಳಿಂದ ಹೊಡೆದಾಡುತ್ತಿದ್ದೇವೆ. ಇನ್ನೂ ಮೊನ್ನೆ ತಾನೆ ರಿಟ್ ಅರ್ಜಿ ದಾಖಲ್ಮಾಡಿದ್ದ ಇಂಜಿನಿಯರ್ ಸಾಹೇಬರು ಅಲ್ಲಿಗೆ ಬಂದಿದ್ದರು. ಆಗ ಅವರೇ ನಮ್ಮ ಪೇಚಾಟ ನೋಡಿ ಏನಾದರೂ ಆಗಲೀ ನಾನು ರಿಟೈರ್ ಆಗುವುದಕ್ಕೆ ಮುಂಚೆ ಈ ನಿಕಾಲಿ ಮಾಡಿಕೊಡುತ್ತೇನೆಂದು ಅವರು ಹೇಳಿದ್ದರು. ಮುಖ್ಯವಾಗಿ ವಿಜಾಪೂರ ಜಿಲ್ಲೆಯಲ್ಲಿ ದೊಡ್ಡ ದೊಡ್ಡ ಕೆಲಸಗಳನ್ನು ಪ್ರಾರಂಭಿಸಬೇಕು. ಈ ರೀತಿ ಮಾಡುವುದು ಅಗತ್ಯವಾಗಿದೆ. ಅನೇಕ ಕೆಲಸ ಕಾರ್ಯಗಳ ಬಗ್ಗೆ ಮಂತ್ರಿಗಳು ಆಗಾಗ್ಗೆ ನಮ್ಮ ಜಿಲ್ಲೆಗೆ ಬಂದಾಗ್ಗೆ ವಾಗ್ದಾನ ಮಾಡಿದ್ದಾರೆ. ಅನೇಕ ಕೆಲಸಗಳ ಬಗ್ಗೆ ಶಂಕು ಸ್ಥಾಪನೆ ಸಹ ಆಗಿದೆ. ಆದರೆ ಕೆಲಸಕಾರ್ಯಗಳು ನಡೆಯುತ್ತಿಲ್ಲ. ಆದಷ್ಟು ಜಾಗ್ರತೆ ಕೆಲಸಕಾರ್ಯಗಳನ್ನು ಪ್ರಾರಂಭಿಸಬೇಕು. ಅದರಲ್ಲಿಯೂ ಪ್ರಾಮುಖ್ಯವಾಗಿ ಇಂಡಿ-ಚಡಚಣ ರೋಡಿನಲ್ಲಿ ಕಲ್ಲಹಳ್ಳಿ ಹತ್ತಿರ ಸೇತುವೆ ಆಗಬೇಕಾದುದು ಅತಿ ಜರೂರಾಗಿದೆ. ಈ ಸೇತುವೆ ಇಲ್ಲದ ಮೂಲಕ ಮಳೆಗಾಲದಲ್ಲಿ ಅನೇಕ ದಿವಸಗಳವರೆಗೆ ಟಪಾಲು ಹೋಗಲು ಸಹ ಕಷ್ಟವಾಗುತ್ತದೆ. ಇದಲ್ಲದೆ ಎಷ್ಟೋ ರಸ್ತೆಗಳ ದುರಸ್ತಿ ಕೆಲಸವಾಗಬೇಕಾಗಿದೆ. ಚೊಳಚಗುಡ್ಡ ಮತ್ತು ಪಟ್ಟದ ಕಲ್ಲ ನಡುವಿನ ರಸ್ತೆ ಮಾಡಬೇಕೆಂದು ಹೇಳಿದ್ದೇವೆ. ಅನೇಕ ರಸ್ತೆಗಳಲ್ಲಿ ಸೇತುವೆ ಕಟ್ಟುವುದಕ್ಕೆ ಪೈಪ್ ಇಲ್ಲವೆಂದು ಹೇಳುತ್ತಾರೆ. ಈ ರೀತಿ ಹೇಳುವುದು ಬೇಡ. ಪೈಪ್ ದೊರೆಯದೇ ಹೋದರೆ ಕಲ್ಲಿನಿಂದ ಸೇತುವೆ ಕಟ್ಟಬಹುದು. ಈ ರಸ್ತೆ ರಚನೆ ಮತ್ತು ರಿಪೇರ್ ಕೆಲಸದ ಬಗ್ಗೆ ಸರಕಾರ ಗಮನ ಕೊಡುತ್ತಾರೆಂದು ನಾನು ಆಶಿಸುತ್ತೇನೆ. ಇನ್ನು ಅನೇಕ ಸಣ್ಣ ಸಣ್ಣ ಕೆಲಸಗಳು ಆಗಬೇಕಾಗಿವೆ. ಅವುಗಳನ್ನೆಲ್ಲ ವಿವರವಾಗಿ ಈಗ ಸಭೆಯಲ್ಲಿ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಸಣ್ಣ ಕೆಲಸಗಳ ಬಗ್ಗೆ ಮಂತ್ರಿಗಳಿಗೆ ಭೇಟಿಯಾಗಿ ಛೇಂಬರ್‌ನಲ್ಲಿ ಹೇಳಿದ್ದೇನೆ. ಇನ್ನು ನೀರಾವರಿ ಯೋಜನೆಯ ಬಗ್ಗೆ ಹೇಳುವುದಾದರೆ ಅಪ್ಪರ್ ಕೃಷ್ಣಾ ಪ್ರೊಜೆಕ್ಟ್ ಬಗ್ಗೆ ಹಣ ಒದಗಿಸಿದ್ದಾರೆ. ಈ ಯೋಜನೆಯ ಬಗ್ಗೆ ಆಂಧ್ರ ರಾಜ ದವರು ಗಲಾಟೆ ಎಬ್ಬಿಸಿದ್ದರೂ ಈ ಯೋಜನೆ ಆಗುತ್ತದೋ ಇಲ್ಲವೋ ಎಂದು ಜನರು ಹೆದರಿದ್ದರು. ಈ ಯೋಜನೆಯ ವಿಚಾರದಲ್ಲಿ ಶ್ರೀ ಚನ್ನಬಸಪ್ಪನವರು ವಿಶೇಷವಾಗಿ ಪರಿಶ್ರಮವಹಿಸಿ ಕೇಸ್ ತಯಾರುಮಾಡಿದ್ದಾರೆ. ಇದಕ್ಕೆ ಅವರು ಯೋಗ್ಯ ವ್ಯಕ್ತಿಯಾಗಿದ್ದಾರೆ. ಈ ಯೋಜನೆಯನ್ನು ಕಾರ್ಯಗತ ಮಾಡುವುದರ ಬಗ್ಗೆ ಮತ್ತು ನ್ಯಾಯವಾದ ನಮ್ಮ ಪಾಲನ್ನು ದೊರಕಿಸುವುದರಲ್ಲಿ ಅವರು ಯಶಸ್ವಿಯಾಗುತ್ತಾರೆಂದು ನಾನು ನಂಬಿದ್ದೇನೆ. ನಮಗೆ ನ್ಯಾಯ ದೊರೆಯುತ್ತದೆಂದು ಭರವಸೆಯಿದೆ. ಆದಷ್ಟು ಬೇಗನೆ ಅಪ್ಪರ್ ಕೃಷ್ಣಾ ಪ್ರೊಜೆಕ್ಟ್ ಕಾರ್ಯಗತವಾಗಲಿ ಎಂದು ಆಶಿಸುತ್ತೇನೆ.

ಇನ್ನು ಎಲೆಕ್ಟ್ರಿಸಿಟಿ ಬಗ್ಗೆ ಹೇಳುವುದಾದರೆ ಧಾರವಾಡ ಮತ್ತು ವಿಜಾಪುರ ಜಿಲ್ಲೆಯ ವರೆಗೆ ಬಂದಿದೆ. 1957ರಲ್ಲಿ ನವಲಗುಂದ ನರಗುಂದ ಪಟ್ಟಣಗಳಿಗೆ ವಿದ್ಯುಚ್ಛಕ್ತಿ ಪೂರೈಕೆ ಪ್ರಾರಂಭಿಸಿದ್ದಾರೆ. ಇದಕ್ಕೂ ಹೆಚ್ಚಿನ ಪ್ರಗತಿ ಆಗಿಲ್ಲ. ಅನೇಕ ಊರುಗಳಿಗೆ ವಿದ್ಯುಚ್ಛಕ್ತಿ ಪೂರೈಕೆಯಾಗಬೇಕಾಗಿದೆ. ವಿದ್ಯುಚ್ಛಕ್ತಿ ಬರುತ್ತದೆಂದು ಕಂಬಗಳನ್ನು ನಿಲ್ಲಿಸಿದ್ದಾರೆ. ಆದರೆ ಪೂರ್ತಿ ಕೆಲಸವಾಗಿಲ್ಲ. ವಿಜಾಪುರ ಜಿಲ್ಲೆಗೆ ಆದಷ್ಟು ಜಾಗ್ರತೆ ವಿದ್ಯುಚ್ಛಕ್ತಿ ಪೂರೈಕೆ ಯನ್ನು ಒದಗಿಸಿಕೊಡಬೇಕು. ಎಂದು ಮಂತ್ರಿಗಳಿಗೆ ಪ್ರಾರ್ಥಿಸುತ್ತೇನೆ. ಇನ್ನು ಹೆಚ್ಚಿಗೆ ಮಾತನಾಡದೆ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

The House adjourned for recess at Three of the Clock and reassembled at Forty Minutes past Three of the Clock.

[Mr. DEPUTY SPEAKER in the chair.]

ಶ್ರೀ ಜಿ. ಎಸ್. ಬೊಮ್ಮೇಗೌಡ (ಮಂಡ್ಯ).—ಸ್ವಾಮಿ, ನಮ್ಮ ಮುಂದಿರುವ ಬೇಡಿಕೆ ಗಳ ವಿಚಾರವಾಗಿ ಮಾತನಾಡುವಾಗ ನಮ್ಮ ಅನುಭವವನ್ನು ಮತ್ತು ನಾವು ನೋಡುತ್ತಿ ರುವುದನ್ನು ಸರ್ಕಾರದ ಗಮನಕ್ಕೆ ತರತಕ್ಕದ್ದು ಬಹಳ ಮುಖ್ಯವೆಂದು ನಾನು ಭಾವಿಸು ತ್ತೇನೆ. ನಮ್ಮ ದೇಶದಲ್ಲಿ ಇಂಜನಿಯರಿಂಗ್ ಇಲಾಖೆಯಲ್ಲಿ ಕೆಲಸ ಮಾಡುವವರು ದಕ್ಷತೆಯಿಂದ ಕೆಲಸ ಮಾಡತಕ್ಕ ಅಧಿಕಾರಿಗಳು, ತುಂಬ ಮೇಧಾವಿಗಳು ಇದ್ದಾರೆ ಎಂದು ಹೇಳಿಕೊಳ್ಳತಕ್ಕ ಹೆಮ್ಮೆ ನಮಗೆ ಇರಬೇಕಾದರೆ, ನಮ್ಮ ಕಣ್ಣುಮುಂದೆ ಈಗ ಜೀವಿಸತಕ್ಕ ಪೂಜ್ಯ ಭಾರತರತ್ನ ಎಂ. ವಿಶ್ವೇಶ್ವರಯ್ಯನವರು ಅದಕ್ಕೆ ಕಾರಣರು. ಆ ಹೆಮ್ಮೆ ನಮಗೆ ಹಾಗೆಯೇ ಉಳಿಯ ಬೇಕಾದರೆ, ಇಲಾಖೆಯಲ್ಲಿ ಕೆಲಸ ಮಾಡತಕ್ಕ ದಕ್ಷರಾದ ಅನೇಕ ಅಧಿಕಾರಿಗಳಿಗೆ, ಅವರು ಹೋಗ ತಕ್ಕ ವೇಗದಲ್ಲಿ ಅಲ್ಪ ಸ್ವಲ್ಪ ಎಡರು ತೊಡರುಗಳುಂಟಾದರೆ, ಸಣ್ಣ ಪುಟ್ಟ ಲೋಪದೋಷಗಳು ಕಂಡು ಬಂದರೆ ಅವರು ಮಾಡುವ ಉನ್ನತ ಕೆಲಸ ಕಾರ್ಯಗಳನ್ನು ನೋಡುವುದಕ್ಕೆ ಬದಲಾಗಿ ಅಲ್ಪ ಸ್ವಲ್ಪ ಎಡವಿದ್ದನ್ನೂ ಸಣ್ಣ ಪುಟ್ಟ ತಪ್ಪುಗಳನ್ನೂ ದೊಡ್ಡದಾಗಿ ಮಾಡುವುದರಿಂದ ಅಧಿಕಾರಿಗಳು ಕೆಲಸದಲ್ಲಿ ಮುಂದುವರಿಯುವುದಕ್ಕೆ ಆಗದೆ ಕೆಲಸ ಮಾಡುವುದು ಹೇಗೆ ಎನ್ನುವ ಭೀತಿ ಇಲಾಖೆಯಲ್ಲಿ ಇಂದು ಉಂಟಾಗಿದೆ. ಮುಖ್ಯವಾಗಿ ನಮ್ಮ ಇಂಜನೀಯರುಗಳಲ್ಲಿ ಅಡ ಗಿರುವ ಮೇಧಾಶಕ್ತಿ ಹೊರಹೊಮ್ಮ ಅದರ ಉಪಯೋಗವನ್ನು ದೇಶ ಪಡೆಯಬೇಕಾದರೆ, ಸಣ್ಣ ಪುಟ್ಟ ಲೋಪದೋಷಗಳನ್ನು ಹೆಚ್ಚಾಗಿ ಗಮನಿಸುವುದಕ್ಕೆ ಬದಲಾಗಿ ಅದರಲ್ಲಿರುವ ಶಕ್ತಿಯನ್ನು ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನಮಾಡಬೇಕು. ಇಂದು ಇಲಾಖೆಯಲ್ಲಿ ಏನು ಭಯಭೀತಿ ಉಂಟಾಗಿದೆಯೋ ಅದು ಹೋಗುವುದಕ್ಕೆ ತಕ್ಕವಾತಾವರಣ ಮುಂದಾದರೂ ಉಂಟಾಗಲು ಎಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತೇನೆ. ಈಗಾಗಲೆ ನಿಷ್ಠಾ ವಂತರಾಗಿ ಕೆಲಸಮಾಡಿದವರು, ನಿಸ್ಪೃಹ ಸೇವೆ ಸಲ್ಲಿಸಿದಂಥವರು, ಹತ್ತಾರುವರ್ಷ ದಕ್ಷತೆ ಯಿಂದ ಸೇವೆ ಮಾಡಿದಂಥ ಅಧಿಕಾರಿಗಳು ಅನುಭವಿಸಿದಂಥ ಕೆಲವು ತೊಂದರೆಗಳನ್ನು ಗಮನಿ ಸಿದರೆ ಮುಂದೆ ಅಂಥ ಕಹಿವಾತಾವರಣ ಉಂಟಾಗದಿರಲಿ, ದಕ್ಷತೆಯಿಂದ ಕೆಲಸಮಾಡತಕ್ಕ ಅಧಿಕಾರಿ ಗಳಿಂದ ಪ್ರಯೋಜನ ಹೊಂದುವಂಥ ಅವಕಾಶ ಈ ದೇಶಕ್ಕೆ ದೊರೆಯಲಿ ಎಂದು ನಾನು ಮತ್ತೊಮ್ಮೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಶ್ರೀ ಜಿ. ಎಸ್. ಬೊಮ್ಮೇಗೌಡ)

ಬಹಳ ಮುಖ್ಯವಾದ ವಿಷಯವೆಂದರೆ, ಕಾವೇರಿ ನೀರಿನ ಉಪಯೋಗದ ಪ್ರಶ್ನೆ. ಈ ವಿಷಯವನ್ನು ಹೇಳುವಾಗ ನನಗಾದರೂ ಒಂದು ಸಂತೋಷವೇನೆಂದರೆ, ಈ ಕಾವೇರಿ ನೀರನ್ನು ಉಪಯೋಗಿಸಿಕೊಳ್ಳತಕ್ಕ ಹಾಗೂ ಸ್ವಂತ ಬೇಸಾಯ ಮಾಡತಕ್ಕ ಒಬ್ಬ ರೈತನ ಕೈಯಲ್ಲಿ ಈ ದಿನ ಲೋಕೋಪಯೋಗಿ ಇಲಾಖೆ ಇರುವುದು. ಹೀಗೆ ಇರುವುದರಿಂದ ಅದರ ಕಷ್ಟನಿಷ್ಠೂರಗಳೇನು, ಆ ಭಾಗದ ರೈತರು ಅನುಭವಿಸುತ್ತಿರುವ ತೊಂದರೆಗಳೇನು ಎನ್ನುವುದನ್ನು ವಿವರಿಸುವ ಅಗತ್ಯವಿಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ. ಈಗಾಗಲೇ ವೃತ್ತ ಪತ್ರಿಕೆಗಳಲ್ಲಿ ಓದಿರುವಂತೆ ಇದೇ ತಿಂಗಳು 27ನೆಯ ತಾರೀಖು ಡೆಲ್ಲಿಯಲ್ಲಿ ಕಾವೇರಿನದಿ ನೀರಿನ ಬಗ್ಗೆ ಮದ್ರಾಸ್ ಸರ್ಕಾರಕ್ಕೂ ಮತ್ತು ಮೈಸೂರು ಸರ್ಕಾರಕ್ಕೂ ಇರುವಂತ ವಿವಾದ ಚರ್ಚೆಗೆ ಇದೆ ಎಂದು ಕೇಳಿ ತುಂಬ ಸಂತೋಷವಾಯಿತು. ಈ ವಿವಾದವನ್ನು ಪರಿಹರಿಸತಕ್ಕ ಕಾರ್ಯ ಭಾರವನ್ನು ಕೇಂದ್ರ ನೀರಾವರಿ ಸಚಿವರಾದ ಹಫೀಜ್ ಮಹಮದ್ ಇಬ್ರಾಹಿಂ ರವರು ವಹಿಸಿಕೊಳ್ಳುತ್ತಾರೆಂದು ಹೇಳುವಾಗ ಅವರು ಇಡೀ ಭಾರತದ ಜನತೆಯ ಪ್ರೀತಿಯ ಪ್ರತೀಕವಾಗಿರುವಾಗ, ಅವರು ಯಾವ ದಾಕ್ಷಿಣ್ಯಕ್ಕೂ ಒಳಗಾಗದೆ ಮೈಸೂರು ಏನು ತೊಂದರೆಯನ್ನು ಅನುಭವಿಸುತ್ತಿದೆಯೋ ಅದನ್ನು ಬಗೆಹರಿಸುವುದರಲ್ಲಿ ಉದ್ಯುಕ್ತರಾಗಿ ನ್ಯಾಯ ದೊರಕಿಸಿಕೊಡುತ್ತಾರೆನ್ನುವ ನಂಬಿಕೆ ನಮಗೆ ಇದೆ ಎಂದು ಹೇಳಲಿಕ್ಕೆ ಇಚ್ಛಿಸುತ್ತೇನೆ. ನಮ್ಮ ಮಂತ್ರಿಗಳು ಹಾಗೂ ಇಲಾಖೆಯ ಕಾರ್ಯದರ್ಶಿಗಳು, ಸಿಬ್ಬಂದಿವರ್ಗದವರು ಎಲ್ಲ ವಿಚಾರಗಳನ್ನೂ ನೋಡಿ. ಹಾಗೂ ಅನೇಕ ಸಂದರ್ಭಗಳಲ್ಲಿ ಈ ಸಭೆಯಲ್ಲಿ ಮಾನ್ಯ ಸದಸ್ಯರು ಕೊಟ್ಟಿರತಕ್ಕ ಸೂಚನೆಗಳನ್ನು ಗಮನದಲ್ಲಿಟ್ಟು ನಮಗೆ 1924 ರಲ್ಲಿ ಆಗಿರುವಂಥ ಒಪ್ಪಂದದ ಪ್ರಕಾರ ಏನು ತೊಂದರೆಯುಂಟಾಗಿದೆಯೋ ಅದನ್ನು ಬಗೆಹರಿಸುವುದರಲ್ಲಿ ಏನು ನಿಲುವನ್ನು ಮಾನ್ಯ ಸಚಿವರು ತಾಳುತ್ತಾರೆಯೋ ಅದಕ್ಕೆ ಈ ದೇಶದ ಮತ್ತು ಈ ಸಭೆಯ ಬೆಂಬಲವಿದೆ ಎಂದು ಹೇಳುವುದಕ್ಕೆ ಇಚ್ಛಿಸುತ್ತೇನೆ.

ಕನ್ನಂಬಾಡಿ ಕಟ್ಟೆಯಮೂಲಕ ಕಾವೇರಿ ನೀರನ್ನು ಒದಗಿಸತಕ್ಕ ಸಂದರ್ಭದಲ್ಲಿ ಮೊದಲು ಬ್ಲಾಕ್‌ಗಳಾಗಿ ವಿಂಗಡಿಸಿ, ಖುಷ್ಕಿ, ತರಿ ಮತ್ತು ಬಾಗಾಯ್ತು ಎಂದು ಮೂರು ವಿಧವಾದ ಬೆಳೆಯನ್ನು ಬೆಳೆಯಬೇಕೆಂದು ವಿಧಾಯಕವಾಗಿತ್ತು. ಆದರೆ ಆ ಕಾಲದಲ್ಲಿ ಒದಗಿಸಿದ ನೀರನ್ನು ಉಪಯೋಗಿಸಿಕೊಳ್ಳಲು ಎಷ್ಟು ಜಮೀನು ಅಚ್ಚುಕಟ್ಟಿಗೆ ಬರಬೇಕಾಗಿತ್ತೋ ಅಷ್ಟು ಬರದೇ ಇದ್ದುದ್ದರಿಂದ ಬ್ಲಾಕ್‌ಗಳ ವಿಂಗಡಣೆ ಅನುಷ್ಠಾನಕ್ಕೆ ಬರಬೇಕಾದ ಪ್ರಮೇಯ ಉಂಟಾಗಲಿಲ್ಲ. ಆ ಕಾರಣದಿಂದ ವಿಶ್ವೇಶ್ವರಯ್ಯ ನಾಲಾ ನೀರನ್ನು ಒದಗಿಸಿದಲಾಗಾಯ್ತು ಎಲ್ಲರೂ ನೀರನ್ನು ಉಪಯೋಗಿಸಿಕೊಳ್ಳುತ್ತಾ ಬಂದರು. ಅದರಿಂದ ಅನೇಕರಿಗೆ ಒಂದು ಬೆಳೆ ಭತ್ತ ಬೆಳೆಯುವುದಕ್ಕೂ ತೊಂದರೆಯುಂಟಾಗಿರುವ ಅನೇಕ ಭಾಗಗಳಿವೆ. ಈ ತೊಂದರೆಯನ್ನು ನಿವಾರಿಸಲು ಮತ್ತು ಕಾವೇರಿ ನೀರಿನ ಪೂರ್ಣ ಪ್ರಯೋಜನವನ್ನು 1974 ರೊಳಗೆ ಹೊಂದುವಂಥ ಕಾಮಗಾರಿಗಳನ್ನು ಕೈಗೊಳ್ಳಬೇಕು. ಇದರಬಗ್ಗೆ ತೀವ್ರಾಸಕ್ತಿಯನ್ನು ವಹಿಸಿ ಆದಷ್ಟು ಜಾಗ್ರತೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು, ಆ ಯೋಜನೆಯ ಯಶಸ್ಸು ಈ ದೇಶಕ್ಕೆ ಲಭಿಸುವಂಥ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸ್ವಾಮಿ, ಕಬ್ಬು ಬೆಳೆಯತಕ್ಕ ಪ್ರದೇಶದಲ್ಲಿ ಕಬ್ಬಿನ ಮೇಲೆ ಟನ್ ಒಂದಕ್ಕೆ ಆರು ರೂಪಾಯಿ ಸೆಸ್ ವಸೂಲ್ಮಾಡುತ್ತಾರೆ. ಆ ಪ್ರದೇಶದಲ್ಲಿ ರಸ್ತೆ ಸೌಕರ್ಯ ಸಂಚಾರ ಸೌಕರ್ಯ ಹಾಗೂ ಎಲ್ಲ ವಿಧವಾದ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಈ ನಿಧಿಯನ್ನು ಮಾಡಿರುತ್ತಾರೆ. ಆದರೆ ಈ ನಿಧಿಯಿಂದ ರೈತನಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ಕೆಲಸ ಕಾರ್ಯಗಳು ನಡೆಯುತ್ತಿಲ್ಲ. ಹಿಂದೆ ಇದಕ್ಕಾಗಿಯೇ ಇದ್ದ ಇಲಾಖೆಯನ್ನು ಸಣ್ಣ ಪುಟ್ಟ ತಪ್ಪುಗಳನ್ನೇ ಹೆಚ್ಚು ಮಾಡಿ, ತೆಗೆದು ಹಾಕಿದರು. ಅದರಿಂದ ಇವೊತ್ತು ಎಷ್ಟು ಕೆಲಸವಾಗ

ಬೇಕೋ ಅಷ್ಟು ಕೆಲಸವಾಗದೆ ಕಬ್ಬನ್ನು ಒದಗಿಸತಕ್ಕ ರೈತರ ಕಣ್ಣಲ್ಲಿ ನೀರು ಮಾತ್ರವಲ್ಲ ರಕ್ತವನ್ನೂ ಬರುವ ಸ್ಥಿತಿಯಲ್ಲಿ ರಸ್ತೆಗಳಿವೆ. ಕಬ್ಬನ್ನು ಸಾಗಿಸಬೇಕಾದರೆ ಬಹಳ ಕಷ್ಟವಾಗಿದೆ. ಹಿಂದೆ ಈ ಶಾಖೆಯ ಮಂತ್ರಿಗಳಾಗಿದ್ದ ಮಾನ್ಯ ಚನ್ನಬಸಪ್ಪನವರು ಆ ಪ್ರಾಂತಕ್ಕೆ ಬಂದು ರಸ್ತೆಗಳ ಸ್ಥಿತಿಯನ್ನು ನೋಡಿ, ಯಾರೂ ವಿವರಿಸುವ ಅಗತ್ಯವಿಲ್ಲ. ನಾನೇ ಕಣ್ಣಾರೆ ನೋಡಿದ್ದೇನೆ, ನೋಡುವುದಕ್ಕೆ ಬಹಳ ಸಂಕಟವಾಗುತ್ತದೆ. ಆದಷ್ಟು ಜಾಗ್ರತೆ ರಸ್ತೆಗಳನ್ನು ಮಾಡಿಸಿ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆಂದು ಹೇಳಿದ ಮಾತು ಮಾತಾಗಿಯೇ ಉಳಿದಿದೆ. ರೈತ ದೇಶದ ಬೆನ್ನುಮೂಳೆ ಎಂದು ಹೇಳುತ್ತಾರೋ ಆದರೆ ಅವನು ಕಬ್ಬು ಸಾಗಿಸುವ ಕಾಲದಲ್ಲಿ ಅವನ ಕಣ್ಣಿನಲ್ಲಿ ನೀರಲ್ಲ ರಕ್ತ ಕೂಡ ಬರುತ್ತದೆ. ಸರ್ಕಾರ ಇದನ್ನೆಲ್ಲ ಗಮನಿಸಿ ಕಬ್ಬು ಬೆಳೆಯತಕ್ಕ ರೈತನು ರೈತನಾಗಿ ಬಾಳಬೇಕಾದರೆ, ಸರ್ಕಾರದವರು ವಿಶೇಷ ಆಸಕ್ತಿ ವಹಿಸಿ ಜೂನ್, ಜುಲೈ ತಿಂಗಳಿನೊಳಗಾಗಿ, ಸಕ್ಕರೆ ಕಾರ್ಖಾನೆಗೆ ಕಬ್ಬು ಒದಗಿಸುವುದರೊಳಗಾಗಿ, ರಸ್ತೆಯನ್ನು ಸಂಚಾರಕ್ಕೆ ಯೋಗ್ಯವಾದುದನ್ನಾಗಿ ಮಾಡದೆ ಇದ್ದರೆ, ನಾವು ಕಬ್ಬು ಸಾಗಿಸುವುದಿಲ್ಲವೆಂದು ರೈತರು ಮುಷ್ಕರ ಹೂಡಬೇಕಾಗುತ್ತದೆಂದು ಹೇಳಬೇ ಗತ್ಯಂತರವಿಲ್ಲದೆನ್ನುವುದನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ.

ಒಂದು ಪ್ರತ್ಯೇಕ ಡಿವಿಜನ್ ಮಾಡಬೇಕಾದರೆ ಇಷ್ಟಿಷ್ಟು ಹಣದ ಕೆಲಸವಿದ್ದರೆ ಮಾತ್ರ ಮಾಡಬೇಕು ಎಂಬ ನಿಯಮವಿದೆ. ಕಬ್ಬು ಬೆಳೆಯುದೆ ಇರುವ ಕಡೆ ಒಂದು ಸಾರಿ ರಸ್ತೆ ರಿಪೇರಿ ಮಾಡಿದರೆ ಹೆಚ್ಚು ಖರ್ಚಿಲ್ಲದೆ ಬರೀ ಗ್ರಾವಲ್ ಹಾಕಿ ರಸ್ತೆಯನ್ನು maintain ಮಾಡಿಕೊಂಡು ಹೋಗತಕ್ಕ ಅವಕಾಶವಿದೆ. ಸಕ್ಕರೆ ಕಾರ್ಖಾನೆ ಪ್ರದೇಶದಲ್ಲಿ, ಕಬ್ಬು ಬೆಳೆಯುವ ಪ್ರದೇಶದಲ್ಲಿ ಹಣ ಖರ್ಚುಮಾಡಿ ಒಂದುವರ್ಷ ರಸ್ತೆಯನ್ನು ರಿಪೇರಿ ಮಾಡಿದರೆ ಮೂರನೆಯವರ್ಷ ಪುನಃ ಗ್ರಾಂಟ್ ಒದಗಿಸಿ ರಿಪೇರಿ ಮಾಡಿಸದೆ ಇದ್ದರೆ ಕಬ್ಬುಸಾಗಿಸುವುದಕ್ಕೆ ಅವಕಾಶವಿರುವುದಿಲ್ಲ, ಪ್ರತಿವರ್ಷವೂ ಈ ರಸ್ತೆಗಳ ರಿಪೇರಿಗಾಗಿ ಹಣವನ್ನು ಖರ್ಚುಮಾಡುವುದರ ಬದಲು ಅದಕ್ಕೆ ಸಿಮೆಂಟ್ ಕಾಂಕ್ರೀಟ್ ಹಾಕಿಸುವುದು ಅಥವಾ asphalting ಮಾಡಿಸುವುದು ಹೀಗೆ ವ್ಯವಸ್ಥೆ ಮಾಡಿಸಿದರೆ ರೈತರಿಗೆ ಅನುಕೂಲವಾಗುತ್ತದೆ. ಅಲ್ಲಿ ಹೋಗಿನೋಡಿದರೆ ಒಂದು ಗಾಡಿಯಾದರೂ ಮುರಿದು ಬಿದ್ದಿರುತ್ತದೆ. ಇದಕ್ಕೆ ಒಂದು ಮಾರ್ಗವೆಂದರೆ ಅಲ್ಲಿ ಒಂದು ವಿಶೇಷ ಡಿವಿಜನ್ ಸ್ಥಾಪನೆಮಾಡಿ, ಏನೇನು ತೊಂದರೆಗಳಿವೆಯೋ ಅವನ್ನು ಪರಿಹರಿಸುವುದಕ್ಕೆ ಸರ್ಕಾರ ತೀವ್ರಾಸಕ್ತಿವಹಿಸಬೇಕೆಂದು ಈ ಸಂದರ್ಭದಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸರ್ಕಾರಕ್ಕೆ ಎಷ್ಟರ ಮಟ್ಟಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದೆಯೆನ್ನುವುದನ್ನು ಹೇಳುತ್ತೇನೆ. ಮದ್ದೂರು ಮತ್ತು ಮಂಡ್ಯ ತಾಲ್ಲೂಕು ಬೋರ್ಡಿನವರು ಮತ್ತು ಮಂಡ್ಯ ಜಿಲ್ಲಾ ಅಭಿವೃದ್ಧಿ ಕಾನ್ಸಿಲ್‌ನವರು, ಈ ಪ್ರಾಂತದಲ್ಲಿ ಒಂದು ಸ್ಪೆಷಲ್ ಸೆಸ್ ಡಿವಿಜನ್ ತೆರೆಯಬೇಕೆಂದು ಇಲ್ಲದೆ ರೈತರ ತೊಂದರೆ ನೀಗುವುದಿಲ್ಲ ಎಂದು ಸರ್ವಾನುಮತದಿಂದ ಮಾಡಿ ಕಳಿಸಿದಂಥ ನಿರ್ಣಯ ಹಾಗೆಯೇ ತೀರ್ಮಾನವಾಗದೇ ಉಳಿದಿದೆ. ಸರ್ಕಾರ ಇದರ ಕಡೆ ಗಮನ ಕೊಡಬೇಕೆಂದು ಹೇಳುತ್ತೇನೆ. ಮತ್ತು ಇಲ್ಲಿ ಮುಖ್ಯವಾದ ಇನ್ನೊಂದು ಕಾರಣವೂ ಇದೆ. ಬೆಳಗಾಂ, ರಾಯಚೂರು ಕಡೆಯಲ್ಲಿ ಯಾವ ರೀತಿಯಾಗಿ ಷೆಡ್ಯೂಲ್ ಆಫ್ ರೇಟ್ಸ್ ಇದೆಯೋ ಅದೇ ರೀತಿಯಾದ ದರಗಳು ಈ ಕ್ಷೇತ್ರದಲ್ಲಿಲ್ಲ. ಇದಕ್ಕೋಸ್ಕರ ಕೆಲವು ಎಸ್ಟಿಮೇಟುಗಳು ಮಂಜೂರಾಗಿದ್ದರೂ ಇಲ್ಲಿ ಕೊಡತಕ್ಕ ದರಗಳು ಕಡಿಮೆಯಾಗಿದೆ ಎಂದು ಕೆಲಸ ಮಾಡಪೇ ಇರುವ ಪರಿಸ್ಥಿತಿ ಇದೆ. ಆದುದರಿಂದ ಬೆಳಗಾಂ ಮತ್ತು ರಾಯಚೂರು ಈ ಭಾಗಗಳಲ್ಲಿ ಯಾವರೀತಿಯಾದ ಷೆಡ್ಯೂಲು ರೇಟುಗಳನ್ನು ಕೊಡುತ್ತಿದ್ದರೋ ಅದೇ ರೀತಿಯಾಗಿ ಇಲ್ಲಿನ ಕೆಲಸಗಳಿಗೂ ಕೊಡುವ ಹಾಗೆ ಮಾಡಿದರೆ ಕೆಲಸಗಳು ಜಾಗ್ರತೆಯಾಗುತ್ತವೆ. ಈ ರೀತಿ ಆಗುವ ಬಗ್ಗೆ ತೀವ್ರವಾಗಿ ಸರಕಾರ ಯೋಚನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಶ್ರೀ ಜಿ. ಎಸ್. ಬೊಮ್ಮೇಗೌಡ)

ಷಿಂಪಾದಿಂದ ಒಂದು ಪಿಕ್ ಅಪ್ ಇಗ್ಗಲೂರು ಬಳಿ ಕಟ್ಟುವುದರ ಮೂಲಕ ಮಳವಳ್ಳಿ ತಾಲ್ಲೂಕಿನ ಹಲಗೂರು ಮತ್ತು ಚನ್ನಪಟ್ಟಣದ ಕೆಲವು ತಾಲ್ಲೂಕುಗಳಿಗೆ ಅನುಕೂಲವಾಗುತ್ತದೆ. ಹಲಗೂರಿನಲ್ಲಿ ಕಳೆದ ಸಾರಿ ಸಕಾಲದಲ್ಲಿ ಮಳೆ ಬಾರದೆ ಆಗಿ ಅಲ್ಲಿ ಬೆಳೆಯುತ್ತಿದ್ದ ರಾಗಿ ಬೆಳೆಯೂ ಬಾರದೇ ಅಲ್ಲಿ ಅಭಾವ ಪರಿಸ್ಥಿತಿ ಬಂದಿತು ಎಂದು ಈ ಹಿಂದೆ ಅಭಾವದ ಪರಿಸ್ಥಿತಿಯನ್ನು ಇಲ್ಲಿ ಸಭೆಯಲ್ಲಿ ಚರ್ಚಿಸುವಾಗ ಹೇಳಿದ್ದೇವೆ. ಇಲ್ಲಿ ರಾಗಿಯನ್ನು ಬಿತ್ತಿ ಒಂದು ತಿಂಗಳಾಗಬೇಕಾಗಿತ್ತು ಎಂದು ನಾವುಗಳು ಇಲ್ಲಿ ಗಲಾಟೆ ಮಾಡಿದಾಗ ಮಂಡ್ಯ ಜಿಲ್ಲಾಧಿಕಾರಿಗಳು ಈಗತಾನೇ ಇಲ್ಲಿ ಕ್ಷಾಮದ ಪರಸ್ಥಿತಿ ಕಂಡು ಬರುತ್ತಿದೆ ಎಂದು ವರದಿ ಕಳುಹಿಸಿದರು. ಅದನ್ನು ಕೂಡ ಇಲ್ಲಿನ ಎಲ್ಲಾ ಸದಸ್ಯರು ಬಹಳವಾಗಿ ರಾಗಿ ಬೆಳೆ ಹೋಯಿತು ಎಂದು ಹೇಳಿದ ಮೇಲೆ ಒಂದು ರೀತಿಯಲ್ಲಿ ಅಭಾವದ ಪರಿಸ್ಥಿತಿ ಇಲ್ಲಿ ಕಂಡು ಬರುತ್ತಿದೆ ಎಂದು ಹೇಳಿರುವ ವರದಿ ಕಳುಹಿಸಿದ್ದಾರೆ. ರೇವತಿ ಮಳೆಯೂ ಈಗ ಬರದೇ ಹೋಗಿರುವುದರಿಂದ ಈ ಮೊದಲೇ ಜೋಳವನ್ನು ಬಿತ್ತಬೇಕಾಗಿತ್ತು. ಅದನ್ನು ಬಿತ್ತುವುದಕ್ಕೆ ಆಗಲಿಲ್ಲ. ಇಂತಹ ಕಡೆಗಳಲ್ಲಿ ಯಾವುದಾದರೂ ಉಗ್ರವಾದ ಕಾರ್ಯಕ್ರಮವನ್ನು ತೆಗೆದುಕೊಂಡು ಇಲ್ಲಿನ ಜನರ ಕಷ್ಟವನ್ನು ನಿವಾರಣೆ ಮಾಡಲು ಇಲ್ಲಿರುವ ಸರಕಾರದ ಅಧಿಕಾರಿಗಳು ಸರಕಾರದ ಗಮನಕ್ಕೆ ತರುವುದು ಬಹಳ ಮುಖ್ಯವಾದುದು. ಇಂತಹ ಮುಖ್ಯ ವಿಷಯಗಳನ್ನು ಸರಕಾರದ ಗಮನಕ್ಕೆ ಸ್ಥಳದಲ್ಲಿರುವ ಅಧಿಕಾರಿಗಳು ತರದೇ ಹೋದರೆ, ಇಂತಹ ಜನಗಳ ವಿಚಾರದಲ್ಲಿ ಆಸಕ್ತಿ ಇಲ್ಲದಿದ್ದರೆ ಜಿಲ್ಲಾ ಮಟ್ಟದಲ್ಲಿರುವ ಅಧಿಕಾರಿಗಳಲ್ಲಿ ಎಷ್ಟರ ಮಟ್ಟಿಗೆ ದೇಶಪ್ರೇಮವಿದೆ ಎನ್ನುವುದನ್ನು ನಾನು ಇಲ್ಲಿ ಹೇಳುವ ಆಗತ್ಯವಿಲ್ಲ. ಈ ಷಿಂಪಾ ಪಿಕಪ್‌ನ್ನು ಈಗಲಾದರೂ ಬೇಗನೆ ಮಾಡಬೇಕೆಂದು ತಮ್ಮ ಮೂಲಕ ಸರಕಾರದಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಷುಗರ್ ಕೇನ್ ಸೆಸ್ ರಸ್ತೆಗಳಿಗೆ ಹಣ ಒದಗಿಸಿರುವುದರಲ್ಲಿ ಏನು ಅರ್ಥ ಎನ್ನುವುದು ನನಗೆ ಗೊತ್ತಾಗಲಿಲ್ಲ. ಇಲ್ಲಿ ಎಕ್ಸಿಕ್ಯೂಟಿವ್ ಇಂಜನೀಯರವರು 61-62ನೇ ಸಾಲಿಗಾಗಿ ಷುಗರ್ ಕೇನ್ ಸೆಸ್ ಫಂಡು, ಇದಕ್ಕಾಗಿ 20 ಲಕ್ಷ ರೂಪಾಯಿಗಳು ಬೇಕೆಂದು ಕೇಳಿದ್ದಾರೆ. ಆದರೆ ಅವರು ಇಲ್ಲಿಗೆ ಎಷ್ಟು ಬೇಕಾಗಿತ್ತೋ ಅಷ್ಟನ್ನೂ ಪೂರ್ತಿಯಾಗಿ ಕೇಳಲಿಲ್ಲ. ಕಾರಣ ನೀರನ್ನು ಒದಗಿಸುವ ಕೆಲಸ ಮತ್ತು ರಸ್ತೆ ಕಾಮುಗಾರಿ ಇವೆರಡೂ ಒಂದು ಡಿವಿಜನ್‌ಗೆ ವಹಿಸಿದೆ. ಜುಲೈನಿಂದ ನೀರಿನ ಸರಬರಾಯಿ ಮಾಡುವುದೇ ಕಷ್ಟ. ಹೀಗಿರುವಾಗ ರಸ್ತೆ ಕಡೆ ಗಮನ ಕೊಡಲು ಸಾಧ್ಯವಿಲ್ಲ ಈ ಕಾರಣಕ್ಕಾಗಿ ಬೇಕಾಗುವ ಹಣದಲ್ಲಿ ¼ ಭಾಗ ಮಾತ್ರ ಕೇಳಿದ್ದಾರೆ ಕಾರಣ ಲ್ಯಾಪ್ಸ್ ಆಗದ ರೀತಿ ಕೆಲಸ ಮಾಡೋಣವೆಂಬುದು ಅವರ ಇಚ್ಛೆ. ¼ ಭಾಗ ಮಾತ್ರ ಹಣ ಕೊಟ್ಟರೆ ಹೇಗೆ? ಇಲ್ಲಿನ ರಸ್ತೆಗಳು ಯೋಗ್ಯ ರೀತಿಯಲ್ಲಿ ಸರಿಪಡಿಸಲು ಸಾಧ್ಯ? ಅಲ್ಲಿನ ಕೆಲಸ ಪೂರ್ಣವಾಗಿ ತೆಗೆದುಕೊಳ್ಳಬೇಕಾದರೆ ಈಗ ಮಾಡಿರುವ ರಸ್ತೆಗಳ ಮಧ್ಯೆ ಸೇತುವೆ ಕಲ್ವರ್ಟ್, ಕಾಸ್-ವೇ ಇವಕ್ಕೆ 44 ಲಕ್ಷ ರೂ. ಬೇಕು. ರಸ್ತೆಗಳ ಮಧ್ಯೆ ಸೇತುವೆಗಳಾಗದೇ ಒಂದು ಮೈಲಿಯಲ್ಲಿ ವೇ ಬಿಡ್ಜ್ ಇದ್ದರೆ ಎಂಟು ಮೈಲಿ ಬಳಸಬೇಕಾದ ಪ್ರಸಂಗವಿರುತ್ತದೆ. ಇದನ್ನು ಪೂರೈಸಬೇಕಾದರೆ ಇದಕ್ಕೆ 44 ಲಕ್ಷ ರೂಪಾಯಿಗಳಷ್ಟು ಹಣ ಬೇಕಾಗುತ್ತದೆ. ಇಂತಹದರಲ್ಲಿ 20 ಲಕ್ಷ ರೂಪಾಯಿಗಳು ಬೇಕೆಂದು ಕೇಳಿದುದರಲ್ಲಿ ಸರಕಾರದವರು 10 ಲಕ್ಷ ರೂಪಾಯಿಗಳಷ್ಟು ಮಾತ್ರ ಒದಗಿಸಿದ್ದಾರೆ. ಇದರಿಂದ ಎಷ್ಟು ಮಟ್ಟಿಗೆ ಕೆಲಸ ಕಾರ್ಯಗಳನ್ನು ಪೂರ್ತಿಮಾಡುವುದಕ್ಕಾಗುತ್ತದೆ ಎನ್ನುವುದರ ಬಗ್ಗೆ ನನಗಾದರೋ ಅರ್ಥವಾಗುತ್ತಿಲ್ಲ. 20 ಲಕ್ಷ ರೂಪಾಯಿಗಳು ಸಾಲದೇ ಇರುವಾಗ ಇದರಲ್ಲಿ ಹತ್ತು ಲಕ್ಷ ರೂಪಾಯಿಗಳನ್ನು ಮಾತ್ರ ಸರಕಾರದವರು ಒದಗಿಸಿದರೆ ಇದರಿಂದ ಇಲ್ಲಿನ ರೈತರಿಗಿರುವ ತೊಂದರೆಯನ್ನು ಕಡಿಮೆ ಮಾಡಲು ಖಂಡಿತ ಸಾಧ್ಯವಾಗುವುದಿಲ್ಲ. ಇದರಿಂದ ನಾನು ಮೊದಲೇ ಹೇಳಿದ ಹಾಗೆ ಹಳ್ಳಿಯಲ್ಲಿರುವ ರೈತರು ರೊಚ್ಚಿಗೆದ್ದು ನಿಲ್ಲುವ ಸ್ಥಿತಿಗೆ ಬರುವಂತಾಗುತ್ತದೆ. ಇದಕ್ಕೆ ಅವಕಾಶ ಕೊಡಬಾರದು.

ಆದುದರಿಂದ ನಾನಾಗಲೇ ಹೇಳಿದಂತೆ ಇಲ್ಲಿಗೆ ಒಂದು ಪ್ರತ್ಯೇಕವಾದ ಡಿವಿಜನ್ನು ಒಂದನ್ನು ಏರ್ಪಾಡು ಮಾಡಿ ಇಲ್ಲಿರುವ ರೈತರ ತೊಂದರೆಗಳನ್ನು ತಪ್ಪಿಸುವುದಕ್ಕೆ ಅವರ ಕಷ್ಟಗಳನ್ನು ಪರಿಹರಿಸಲು ಏರ್ಪಾಡು ಮಾಡಬೇಕೆಂದು ತಮ್ಮ ಮೂಲಕ ಸರಕಾರದವರಲ್ಲಿ ಕೇಳುತ್ತೇನೆ. ಇಷ್ಟನ್ನು ಹೇಳಿ ಈ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ವೈ. ಮಂಜಯ್ಯ ಶೆಟ್ಟಿ (ಬೈಂದೂರು) ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಇಟ್ಟಿರುವ ಬೇಡಿಕೆಗಳನ್ನು ಸಮರ್ಥಿಸುತ್ತಾ ಕೆಲವು ವಿಚಾರಗಳನ್ನು ಸರಕಾರದ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಎರಡನೆಯ ಪಂಚವಾರ್ಷಿಕ ಯೊಜನೆಯಲ್ಲಿ ಕೈಗೊಂಡ ಅನೇಕ ಕಾರ್ಯಗಳು ಬಹಳ ಯಶಸ್ವಿಯಾಗಿ ಮಾಡಲು ಪಿ. ಡಬ್ಲ್ಯು. ಡಿ. ನೌಕರರು ಗಳು ಈ ಬಗ್ಗೆ ಬಹಳ ಶ್ರಮ ಪಟ್ಟಿದ್ದಾರೆ. ಇದಕ್ಕಾಗಿ ಅವರಿಗೆ ನನ್ನ ಅಭಿನಂದನೆಗಳು. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಎರಡನೇ ಪಂಚವಾರ್ಷಿಕ ಯೋಜನೆಗಿಂತ ಇಮ್ಮಡಿ ಕೆಲಸವಾಗಬೇಕಾಗಿದೆ. ಮೂರನೆಯ ಪಂಚವಾರ್ಷಿಕ ಯೋಜನೆ ಯಶಸ್ವಿಯಾಗಬೇಕಾದರೆ ಪಿ.ಡಬ್ಲ್ಯು.ಡಿ. ಇಲಾಖೆಗೆ ಸಂಭಂಧಪಟ್ಟ ನೌಕರರು ಬಹಳ ಸಾಹಸದಿಂದಲೂ, ನಿಷ್ಠೆಯಿಂದಲೂ ಕೆಲಸ ಮಾಡುವ ಅವಶ್ಯಕತೆ ಇದೆ. ಎರಡನೆಯ ಪಂಚವಾರ್ಷಿಕ ಯೋಜನೆಯ ಯಶಸ್ವಿಗೆ ಕಾರಣರಾಗಿರುವ ಈ ನೌಕರರುಗಳೇ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿಯೂ ನಿಷ್ಠೆ ಯಿಂದ ಕೆಲಸ ಮಾಡುವ ಭರವಸೆ ನಮಗಿದೆ. ಅವರಿಗೆ ಪರಮಾತ್ಮನು ಶಕ್ತಿಯನ್ನು ಕೊಡಲಿ, ಮೂರನೆಯ ಪಂಚವಾರ್ಷಿಕ ಯೋಜನೆಯು ಯಶಸ್ವಿಯಾಗುವಂತೆ ಆಗಲಿ, ಮತ್ತು ಇದಕ್ಕೆ ಸಂಬಂಧಪಟ್ಟ ಮಂತ್ರಿಗಳೂ ಮತ್ತು ನೌಕರರು ಒಳ್ಳೆಯ ಕೆಲಸವನ್ನು ಮಾಡಲಿ ಎಂದು ನಾನು ಈ ಸಂದರ್ಭದಲ್ಲಿ ಆಶಿಸುತ್ತೇನೆ.

ಪಶ್ಚಿಮ ಕರಾವಳಿ ರಸ್ತೆ ಬಹಳ ಪ್ರಾಮುಖ್ಯವಾದ ಯೋಜನೆ. ಇದಕ್ಕಾಗಿ ಸರಕಾರ ದವರು ಸುಮಾರು ಏಳೂವರೆ ಕೋಟಿ ರೂಪಾಯಿಗಳಷ್ಟು ಹಣವನ್ನು ವೆಚ್ಚ ಮಾಡಲಿಕ್ಕೆ ಇದ್ದಾರೆ. ಒಂದು ಸಮಯದಲ್ಲಿ ಈ ಯೋಜನೆ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆ ಈ ಎರಡು ಜಿಲ್ಲೆಗಳಿಗೆ ಮಾತ್ರ ಪ್ರಯೋಜನವಾಗುತ್ತದೆ ಎನ್ನುವ ಒಂದು ಅಭಿಪ್ರಾಯವೂ ಇದ್ದಿತು. ಆದರೆ ಇಂದು ಆ ಅಭಿಪ್ರಾಯ ಬದಲಾಣೆಯಾಗುತ್ತಾ ಬಂದಿದೆ. ಇದು ಎರಡು ಜಿಲ್ಲೆಗೆ ಮಾತ್ರವೇ ಅಲ್ಲದೇ ಇಡೀ ದೇಶಕ್ಕೆ ಪ್ರಯೋಜನವಾಗುವ ಯೋಜನೆಯಾಗಿ ರಾಷ್ಟ್ರದ ಅಭ್ಯುದಯಕ್ಕೆ ಮಹತ್ವದ ಯೋಜನೆ ಎನ್ನುವ ಅಭಿಪ್ರಾಯ ನಮ್ಮ ಜನರಲ್ಲಿ ಈಗ ಕಂಡುಬರುತ್ತದೆ. ಇದಕ್ಕಾಗಿ ನಾವೂ ಸಂತೋಷಪಡತಕ್ಕ ವಿಚಾರವಾಗಿದೆ. ಈ ಯೋಜನೆ ಪ್ರಾರಂಭವಾಗಿ ಸುಮಾರು ಮೂರುವರೆ ವರ್ಷಗಳಾಯಿತು. ಮಾನ್ಯ ಉಪಮಂತ್ರಿಗಳು ಇದಕ್ಕಾಗಿ 67 ಲಕ್ಷ ರೂಪಾಯಿಗಳಷ್ಟು ಖರ್ಚಾಗಿದೆ ಮತ್ತು ಇನ್ನೂ ಐದು ಅಥವಾ ಐದೂವರೆ ಕೋಟಿ ರೂಪಾಯಿಗಳಷ್ಟು ಖರ್ಚಾಗಲಿಕ್ಕೆ ಇದೆ ಎಂದು ಮೊನ್ನೆ ಹೇಳಿದರು. ಮೂರು ವರ್ಷದ ಕಾಲದಲ್ಲೇ 67 ಲಕ್ಷ ರೂಪಾಯಿಗಳು ಖರ್ಚಾಗಿರುವಾಗ ಇನ್ನೂ ಐದೂವರೆ ಕೋಟಿ ರೂಪಾಯಿ ಗಳು ಖರ್ಚಾಗಲು ಇನ್ನು ಹತ್ತು ಹದಿನೈದು ವರ್ಷಗಳ ಕಾಲ ಬೇಕಾಗಬಹುದು ಎನ್ನುವ ಅನುಮಾನ ಬಂದಿದೆ. ಆದರೆ ಇದರಲ್ಲಿಯೂ ಒಂದು ಈ ಯೋಜನೆಯ ಕೆಲಸ ಬಹಳ ತ್ವರಿತದಿಂದ ವೇಗದಿಂದ ನಡೆಯುತ್ತಿದೆ. ಇದಕ್ಕಾಗಿ ಸಂಬಂಧಪಟ್ಟವರನ್ನು ನಾವು ಅಭಿನಂದಿಸಬೇಕಾಗಿದೆ. ಅದು ಹೇಗೇ ಇರಲಿ, ಮಾನ್ಯ ಉಪಮಂತ್ರಿಗಳು ಮೂರನೇ ಪಂಚವಾರ್ಷಿಕ ಯೋಜನೆಯ ಅವಧಿ ಯಲ್ಲಿಯೇ ಈ ಯೋಜನೆಯನ್ನು ಪೂರ್ತಿಗೊಳಿಸುತ್ತೇವೆಂದು ಭರವಸೆ ಕೊಟ್ಟಿದ್ದಾರೆ ಇನ್ನು ಸಾಲದು ಇದನ್ನು ಇನ್ನು ಮೂರು ವರ್ಷಗಳೊಳಗಾಗಿ ಪರಿಪೂರ್ಣವಾಗುವಂತೆ ಮಾಡಲು ಪ್ರಯತ್ನಿಸಬೇಕೆಂದು ಹೇಳತ್ತೇನೆ. ಇದಕ್ಕಾಗಿ ಸರ್ವ ಪ್ರಯತ್ನವನ್ನು ಮಾಡಬೇಕು ಎಂದು ಈ ಸಂಧರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಯಾವ ಯೋಜನೆಯೂ ಆದರು ಅದನ್ನು ಮಾಡುವಾಗ ಅಲ್ಲಿಯ ಜನರಿಗೆ ಸ್ವಲ್ಪ ಕಷ್ಟಗಳೂ ಆಗುತ್ತದೆ. ಯೋಜನೆಯನ್ನು ಮಾಡಲಿಕ್ಕೆ ಆ ರಸ್ತೆಯ ಪಕ್ಕದಲ್ಲಿ

(ಶ್ರೀ ವೈ. ಮಂಜಯ್ಯಶೆಟ್ಟಿ)

ಸುಮಾರು 150 ಅಡಿಗಳ ಅಗಲದ ಸ್ಥಳವನ್ನು ಸರಕಾರದವರು ಉಪಯೋಗಿಸಿಕೊಳ್ಳುವವರಾಗಿದ್ದಾರೆ. ಇದರಿಂದ ಅಕ್ಕಪಕ್ಕದಲ್ಲಿನ ಜನಗಳ ಮನೆ ಮಠಗಳು ಹೋಗುವ ಸಾವಿರಾರು ಕುಟುಂಬಗಳು ಇವೆ. ಇವರಿಗಾಗಿ ಮನೆಗಳನ್ನು ಮಾಡಿಕೊಳ್ಳುವ ಪ್ರಶ್ನೆಯೂ ಬರತೊಡಗಿದೆ. ಯಾವರೀತಿಯಾಗಿ ಶರಾವತಿ ಯೋಜನೆಯಲ್ಲಿ ಸರಕಾರದವರು ಸಾವಿರಾರು ಕುಟುಂಬಗಳಿಗೆ ಬೇರೆ ಕಡೆಗಳಲ್ಲಿ ಹೇಗೆ ಸ್ಥಳಗಳನ್ನು ಒದಗಿಸಿದರೋ ಅದೇ ಪ್ರಕಾರ ಇಲ್ಲಿಯೂ ಕೂಡರಸ್ತೆಯ ಪಕ್ಕದಲ್ಲಿ ಮನೆ ಮಠಗಳನ್ನು ಕಳೆದುಕೊಳ್ಳುವ ಸಾವಿರಾರು ಕುಟುಂಬಗಳಿಗೆ ಬೇಕಾಗುವ ಸೌಕರ್ಯಗಳನ್ನೂ ಸರಕಾರದವರು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ.

4-00 P.M.

ಈ ವಿಚಾರದಲ್ಲಿ ಮಾನ್ಯಮಂತ್ರಿಗಳಿಗೆ 12-12-1960ರಲ್ಲಿ ಮನವಿಗಳನ್ನುಕೊಟ್ಟು ಸೂಚನೆಯನ್ನು ಕಳಿಸಿದ್ದೇವೆ. ಅದರ ನಕಲನ್ನು ಚೀಫ್ಇಂಜಿನಿಯರಿಗೂ, ದಕ್ಷಿಣಕನ್ನಡ ಜಿಲ್ಲೆಯ ಸೂಪರಿನ್‌ಟೆಂಡೆಂಟ್ ಇಂಜಿನಿಯರಿಗೂ ಕಳುಹಿಸಿದ್ದೇನೆ. ಅನೇಕ ಸಲಹೆಗಳನ್ನೂ ಜನರ ಕಷ್ಟಗಳನ್ನು ನಿವಾರಿಸುವ ಬಗ್ಗೆ ಕೊಟ್ಟಿದ್ದೇನೆ. ಮಂತ್ರಿಗಳು ನನ್ನಮನವಿಗಳನ್ನು ತರಿಸಿಕೊಂಡು ಚೀಫ್ಇಂಜಿನಿಯರನ್ನು ಕರೆಸಿಕೊಂಡು ದೀರ್ಘಾಲೋಚನೆಮಾಡಿ ಜನಗಳಿಗೆ ಬರುವ ಸಂಕಷ್ಟಗಳನ್ನು ಪರಿಹಾರ ಮಾಡಬೇಕೆಂದು ಈ ಸಮಯದಲ್ಲಿ ನಾನು ಅತಿದೈನ್ಯದಿಂದ ಬೇಡಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ಖನಿಜಸಂಪತ್ತು ವಿಶೇಷ ರೀತಿಯಲ್ಲಿದೆ. ಮ್ಯಾಂಗನೀಸ್ಓರ್, ಐರನ್‌ಓರ್ ಸಿಕ್ಕುತ್ತದೆ. ಅದನ್ನು ಪರದೇಶಕ್ಕೆರಫ್ತುಮಾಡಿ ನಮ್ಮದೇಶದ ಸಂಪತ್ತನ್ನು ಬೆಳಸಬಹುದು. ಖನಿಜಸಂಪತ್ತನ್ನು ನಮ್ಮರಾಜ್ಯದಲ್ಲಿರುವ ಅನೇಕ ಬಂದರುಗಳ ಮುಂಖಾತರ ರಫ್ತು ಆಗಬೇಕಾಗಿದೆ. ಬಂದರುಗಳಿಗೆ ಐರನ್‌ಓರ್ ಮತ್ತು ಮ್ಯಾಂಗನೀಸ್‌ಓರ್ ಇವುಗಳನ್ನು ಸಾಗಾಟಮಾಡುವ ಬಗ್ಗೆ ಯೋಗ್ಯರಸ್ತೆಗಳು ಅಗತ್ಯ ಮತ್ತು ಅವಶ್ಯಕ, ಎಂದು ಹೇಳಲಿಚ್ಛಿಸುತ್ತೇನೆ, ಈ ಬಗ್ಗೆ ಈಗ ಸರ್ಕಾರದವರು ಓರ್‌ಕ್ಯಾರಿಯಿಂಗ್‌ರೋಡ್ ಎಂದು ನಾಲ್ಕು ರಸ್ತೆಗಳನ್ನುಮಾಡಲು ನಿರ್ಧಾರ ಮಾಡಿದ್ದಾರೆ. ಸುಮಾರು ನಾಲ್ಕುಕೋಟಿ ರೂಪಾಯಿಗಳನ್ನು ವೆಚ್ಚಮಾಡಿ ಹುಬ್ಬಳ್ಳಿ ಕಾರವಾರ, ತಾಳಗುಪ್ಪ, ಹೊನ್ನಾವರ, ಮಂಗಳೂರು ಮತ್ತು ಇನ್ನೊಂದು ರಸ್ತೆಯನ್ನು ಸರ್ಕಾರದವರು ಈಗಾಗಲೇ ಓರ್‌ಕ್ಯಾರ್ರಿಯಿಂಗ್‌ರೋಡು ಎಂದು ಪರಿಗಣಿಸಬೇಕೆಂದು ಆಬಗ್ಗೆ ಹೆಚ್ಚಿನ ಕೆಲಸವನ್ನುಮಾಡಲು ಪ್ರಾರಂಭಮಾಡಿದ್ದಾರೆ. ಮಂಗಳೂರು ಜಿಲ್ಲೆಯಲ್ಲಿ ಮಂಗಳೂರು ಬಂದರಾದನಂತರ, ಮುಡ್ಡಿಮನೆಯಿಂದ, ಕೊಡಚಾದ್ರಿ ಮೇಲಿನಿಂದ ಓರ್ ಸಾಗಲಿಕ್ಕೆಇದೆ. ಈಗಾಗಲೇ 5 ಸಾವಿರ ಟನ್ ಓರು ಕಳೆದ ಎರಡು ತಿಂಗಳಿಂದ ಕುಂದಾಪುರದಿಂದ ರಫ್ತಾಗಿ ಹೋಗಿದೆ ಓರ್‌ನ್ನುತರಲಿಕ್ಕೆ ಪ್ರತಿನಿತ್ಯ 10-20 ಲಾರಿಗಳು ಮಿನರಲ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟಿನಿಂದ ಕೊಲ್ಲೂರು, ಗೋಂಡಹಳ್ಳಿ ಮುಂತಾದ ಪ್ರದೇಶಗಳಲ್ಲಿ ತಿರುಗಾಡುತ್ತಿವೆ. ಕುಂದಾಪುರ ಬಂದರಿಗೆ ಓರನ್ನು ಪೂರೈಕೆಮಾಡುವುದಕ್ಕೆ ಲಾರಿಗಳು ಸಂಚಾರಮಾಡುತ್ತಿವೆ. ಆ ರಸ್ತೆಯ ಪರಿಸ್ಥಿತಿಯನ್ನು ನೋಡಿದರೆ ಸರ್ಕಾರದವರು ಮಿನರಲ್ ಡೆವಲಪ್‌ಮೆಂಟ್ ಬೋರ್ಡಿನ ಹೊಸಲಾರಿಗಳನ್ನು ಯಾವರೀತಿ ಓಡಾಡಿಸುತ್ತಾರೆಂದ್ದು ನನಗೆ ಪಶ್ಚಾತ್ತಾಪವಾಗುತ್ತದೆ. ಅಷ್ಟು ಹಣಕೊಟ್ಟು ಲಾರಿಯನ್ನುಪಡೆದು ಅಂಥಾ ಕೆಟ್ಟ ರಸ್ತೆಗಳಲ್ಲಿ ಅವುಗಳನ್ನು ಓಡಾಡಿಸುತ್ತಿದ್ದಾರೆ. ಪೆನ್ನಿವೈಸ್‌ಪೌಂಡ್ ಪೂಲಿಷ್ಎಂದು ಹೇಳಿದ ಹಾಗೆ ಅಷ್ಟು ಹಣಕೊಟ್ಟು ಖರ್ಚುಮಾಡಿ ತೆಗೆದುಕೊಂಡ ಹೊಸ ಲಾರಿಯನ್ನು ಬಹಳ ಕೆಟ್ಟಸ್ಥಿತಿಯಲ್ಲಿರುವ ರಸ್ತೆಯಲ್ಲಿ ಓಡಾಡಿಸುವುದೆಂದರೆ ಬಹಳಕಷ್ಟವಾಗುತ್ತದೆ. ಆ ರೋಡುಗಳನ್ನು ಓರ್ ಕ್ಯಾರಿಯಿಂಗ್‌ರೋಡು ಎಂದುಪರಿಗಣಿಸಿ ಅವುಗಳನ್ನುದುರಸ್ತು ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ದೈನ್ಯದಿಂದ ಕೇಳಿಕೊಳ್ಳುತ್ತೇನೆ. ಎಲ್ಲೆಲ್ಲಿ ಉತ್ತಮ ಮಟ್ಟದ ರಸ್ತೆ

ಗಳನ್ನು ಜನರಿಗೆ ಒದಗಿಸಿಕೊಡಬೇಕೆಂಬ ಮಹತ್ವದ ಉದ್ದೇಶದಿಂದ 1960-61ನೇ ಇಸವಿಯಲ್ಲಿ 7525 ಮೈಲಿ ಉದ್ದದ ಹಳ್ಳಿಯ ರಸ್ತೆಯನ್ನು ಸರ್ಕಾರದವರು ವಹಿಸಿಕೊಂಡಿದ್ದಾರೆ. 7525 ಮೈಲಿ ರಸ್ತೆಯನ್ನು ಸ್ಟೇಟ್ ಫಂಡ್ ರೋಡ್ ಎಂದು ಸರ್ಕಾರದವರು ಪರಿಗಣಿಸುವ ಸಂದರ್ಭದಲ್ಲಿ ಪ್ರತಿಜಿಲ್ಲೆಯಲ್ಲಿಯೂ ರಸ್ತೆಗಳನ್ನು ತೆಗೆದುಕೊಂಡಿದ್ದಾರೆ. ಮಂಗಳೂರು ರಸ್ತೆಯನ್ನು ತೆಗೆದುಕೊಂಡಿದ್ದಾರೆ. ಆದರೆ ಈ ವಿಚಾರದಲ್ಲಿ ಸರಿಯಾದ ಒಂದು ರೀತಿ ನೀತಿಯನ್ನು ಅನುಸರಿಸಿ ಸರ್ಕಾರದವರು ರಸ್ತೆಯನ್ನು ಆರಿಸಿದಂತೆ ಕಂಡುಬರುವುದಿಲ್ಲ. ನನ್ನ ಕ್ಷೇತ್ರ ಬಹಳ ಹಿಂದುಳಿದ ಕ್ಷೇತ್ರ 450ಮೈಲಿ ಹಿಂದುಳಿದ ಕ್ಷೇತ್ರ ಒಂದು ಲಕ್ಷ 15ಸಾವಿರ ಜನಸಂಖ್ಯೆ ಇದೆ. ಈ ಕ್ಷೇತ್ರದಲ್ಲಿ 1958ನೇ ಇಸವಿಯಲ್ಲಿ ಸರ್ಕಾರಿ ಹುಕುಂ ಪ್ರಕಾರ ಒಂದು ಮೈಲಿ ರಸ್ತೆಯನ್ನಾದರೂ ತೆಗೆದುಕೊಳ್ಳಲಿಲ್ಲ. ಇದನ್ನು ನೋಡಿ ಸರ್ಕಾರದೊಡನೆ ಮನವಿಮಾಡಿ ಸಂಬಂಧಪಟ್ಟ ಅಧಿಕಾರಿಗಳನ್ನು ಹಲವು ಸಾರಿ ನೋಡಿದನಂತರ 1959ನೇ ಇಸವಿಯಲ್ಲಿ ಹೊಸದಾಗಿ ಹೊರಡಿಸಿದ ಗಾರ್ನಮೆಂಟ್ ಆರ್ಡರ್ ಪ್ರಕಾರ 7ಮೈಲಿ ರಸ್ತೆಯನ್ನು ತೆಗೆದುಕೊಂಡರು, 1961ನೇ ಇಸವಿಯಲ್ಲಿ ಮೊನ್ನೆತಾನೆ ಹೊರಡಿಸಿದ ಗಾರ್ನಮೆಂಟ್ ಆರ್ಡರ್‌ನಲ್ಲಿ ಒಂದು ಮೈಲಿ ರಸ್ತೆಯನ್ನಾದರೂ 450 ಮೈಲಿ ಹಿಂದುಳಿದ ಕ್ಷೇತ್ರದಲ್ಲಿ ತೆಗೆದುಕೊಳ್ಳಲಿಲ್ಲ. ರಸ್ತೆಯನ್ನು ಒಂದು ಕ್ಷೇತ್ರದಲ್ಲಿ ತೆಗೆದುಕೊಳ್ಳದಿದ್ದರೆ, ಶ್ರೀ ವೀರಣ್ಣಗೌಡರ ಮಾತಿನಲ್ಲಿ ಹೇಳುವುದಾದರೆ ಇದು ಒಂದು ಸಣ್ಣಪುಟ್ಟ ಸಂಗತಿ. ರಾಷ್ಟ್ರೀಯ ರಸ್ತೆಯ ಅಭಿವೃದ್ಧಿಯ ದೃಷ್ಟಿಯಿಂದ ಒಂದು ಯೋಜನೆಯನ್ನು ಸರ್ಕಾರದವರು ತಂದಿದ್ದಾರೆ. ಆ ಸಂದರ್ಭದಲ್ಲಿ ಪ್ರತಿಯೊಂದು ಕ್ಷೇತ್ರದಲ್ಲೂ ಅದರಲ್ಲೂ ಹಿಂದುಳಿದ ಕ್ಷೇತ್ರವಾದ ಮಲೆನಾಡು ಪ್ರದೇಶದಲ್ಲಿ ಈ ಮಟ್ಟಿಗೆ ಹೆಚ್ಚಿನ ಗಮನವನ್ನು ಕೊಡುವುದು ಒಂದು ರಾಜ್ಯದ ಆಡಳಿತವನ್ನು ನೋಡುವುದು ನ್ಯಾಯವಾದ ಒಂದು ಸೂತ್ರ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಕೊನೆಯಪಕ್ಷ ಅಲ್ಲಿ ಜನಸಂಖ್ಯೆ ಅಥವಾ ವಿಸ್ತೀರ್ಣದ ರೀತಿಯಲ್ಲಿ 45ಮೈಲಿ ಆದರೂ ತೆಗೆದುಕೊಳ್ಳಬೇಕು. ಕ್ಷೇತ್ರದ ವಿಸ್ತೀರ್ಣದ ಪ್ರಕಾರ 200 ಮೈಲಿ ತೆಗೆದುಕೊಳ್ಳಬೇಕು 7ಮೈಲಿ ರಸ್ತೆಯನ್ನು ಬಹಳಪ್ರಯತ್ನಪಟ್ಟಮೇಲೆ ತೆಗೆದುಕೊಂಡರು. ಹೆಚ್ಚುರಸ್ತೆಯನ್ನು ತೆಗೆದುಕೊಳ್ಳಲಿಲ್ಲ. ಈ ವಿಚಾರದಲ್ಲಿ ಮಾನ್ಯಮಂತ್ರಿಗಳಿಗೂ ಮತ್ತು ಉಪಮಂತ್ರಿಗಳಿಗೂ ನಾನು ಮನವಿಯನ್ನು ಕಳುಹಿಸಿದ್ದೇನೆ. ಉಪಮಂತ್ರಿಗಳು ನನ್ನ ಮನವಿಯ ವಿಚಾರದಲ್ಲಿ ಗಮನಕೊಟ್ಟು ದೊಡ್ಡಸಾಹೇಬರ ಕನ್‌ವಿನ್ಸ್‌ಮಾಡಿ ಹೇಳಿದ್ದಾರೆ. ದೊಡ್ಡಸಾಹೇಬರು ಮನವಿಯನ್ನು ಕೊಟ್ಟದ್ದಕ್ಕೆ ''ಹೂ'' ಎಂದು ಹೇಳಿದ್ದಾರೆ. ''ಹೂ''ಹೇಳಿದರೆ ನಮ್ಮ ಕೆಲಸ ಆದಂತೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದೇ ರೀತಿ ಅನೇಕ ಪ್ರದೇಶಗಳಿಂದ ಬಂದಂಥ ನನ್ನಮಿತ್ರರೂ ಕೇಳಿದ್ದಾರೆ. ಈ ವಿಚಾರದಲ್ಲಿ ತಾವು ವಿಮರ್ಶಿಸಿ ಇನ್ನೊಂದು ಗೌರ್ನಮೆಂಟ್ ಆರ್ಡರ್ ಹೊರಡಿಸಿ ಯಾವ ಯಾವ ಕ್ಷೇತ್ರದಲ್ಲಿ ಯಾವ ರೀತಿ ಅನ್ಯಾಯವಾಗಿದೆ ಎಂಬುದನ್ನು ತಿಳಿದುಕೊಂಡು ತಾವು ಹೆಚ್ಚುರಸ್ತೆಯನ್ನುತೆಗೆದುಕೊಳ್ಳುವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಮಲೆನಾಡುಪ್ರದೇಶದಲ್ಲಿ ರಸ್ತೆಸಾರಿಗೆ ವಿಚಾರದಲ್ಲಿ ಸರ್ಕಾರದವರು ಬಹಳ ಯೋಗ್ಯವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಈಗಾಗಲೇ ರೂರಲ್ ಕಮ್ಯುನಿಕೇಷನ್ ಯೋಜನೆಗಳ ಮೂಲಕ ಅನೇಕ ರಸ್ತೆಯ ಯೋಜನೆಗಳು ಆಗುತ್ತಾ ಇದೆ. ಆದರೆ ಒಂದು ವಿಚಾರದಲ್ಲಿ ಮಾತ್ರ ತಮ್ಮೊಡನೆ ಈ ಸಂದರ್ಭದಲ್ಲಿ ಹೇಳಲು ಇಚ್ಛಿಸುತ್ತೇನೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕುಂದಾಪುರ ತಾಲ್ಲೂಕಿನಲ್ಲಿ ಹಾದುಹೋಗುವ ಪಶ್ಚಿಮಘಟ್ಟದ ಬುಡದಲ್ಲಿರುವ ಅನೇಕ ಗ್ರಾಮಗಳಲ್ಲಿ ಒಂದುರಸ್ತೆಯೂ ಇಲ್ಲ, ಚಡ್ಕಲ್, ಮುದೂರು, ಹಳ್ಳಿಹೊಳೆ, ಕಮಲಶಿಲೆ, ಸಿದ್ದಾಪುರ, ಮಚ್ಚಟ್ಟು, ಮಡಾಮಕ್ಕಿ. ಈ ಪ್ರದೇಶದಲ್ಲಿ ಒಂದೂ ಯೋಗ್ಯವಾದ ರಸ್ತೆ ಇಲ್ಲ. ಅಲ್ಲಿನ ಜನ ಸಂಕಷ್ಟಪಡುವುದು ನೋಡಿದರೆ ಬಹಳ ಕನಿಕರವಾಗುತ್ತದೆ. ಮಳೆಗಾಲದಲ್ಲಿ ಒಂದುಊರಿನಿಂದ ಇನ್ನೊಂದು ಊರಿಗೆಹೋಗುವುದು ಬಹಳಕಷ್ಟ. ಮಾನ್ಯ ಚನ್ನಬಸಪ್ಪನವರು ಎರಡು ವರ್ಷಗಳ ಹಿಂದೆ ನಮ್ಮಪ್ರದೇಶಕ್ಕೆ ಸಂದರ್ಶನ ಕೊಟ್ಟರು. ಆ ಸಂದರ್ಭದಲ್ಲಿ ಆ ಊರಿನ

(ಶ್ರೀ ವೈ. ಮಂಜಯ್ಯ ಶೆಟ್ಟಿ)

ಜನರು ಬಂದು ಅವರೊಡನೆ ತಮ್ಮ ಕಷ್ಟಗಳನ್ನು ಹೇಳಿಕೊಂಡರು ಹಾಗೆ ಹೇಳಿಕೊಳ್ಳುವಾಗ ಮುದಿ ಪ್ರಾಯದವರು ಒಬ್ಬರು ನಮ್ಮನ್ನು ಕೇಳುವವರೇ ಇಲ್ಲ. ಎಂದು ಹೇಳಿದು ಅದಕ್ಕೆ ಶ್ರೀ ಚನ್ನಬಸಪ್ಪನವರು "ನಾನು 500 ಮೈಲಿ ದೂರದಿಂದ ಬಂದದ್ದು ನಿಮ್ಮ ಕಷ್ಟವನ್ನು ಕೇಳುವುದಕ್ಕೆ. ಮತ್ತು ನಿಮಗೆ ಬೇಕಾದ ಸವುಲತ್ತನ್ನು ಕೇಳಿಕೊಳ್ಳುವುದಕ್ಕೆ ಏನು ಕಷ್ಟ" ಎಂದರು 10–20 ಗ್ರಾಮಗಳಲ್ಲಿ ರಸ್ತೆಗಳಿಲ್ಲ ಅವುಗಳನ್ನು ಒದಗಿಸಿಕೊಡಬೇಕು, ಎಂದು ಹೇಳಿದರು. ಆಗ ಮಂತ್ರಿಗಳು ಸೂಪರಿಂಟೆಂಡೆಂಟ್ ಇಂಜಿನಿಯರನ್ನು ಕರೆದು ಕೊಡಲೇ ಎಸ್ಟಿಮೇಟ್ ಆಗಬೇಕು ಎಂದು ಹುಕುಮ್ ಕೊಟ್ಟರು. ಆ ರಸ್ತೆಯ ಎಸ್ಟಿಮೇಟ್ ಆಗಿದೆ. ಈ ವರ್ಷದ ಬಡ್ಜೆಟ್ಟಿನಲ್ಲಿ ಅದು ಸೇರಿದೆ. ಬರೀ ಪ್ರಿಂಟೆಡ್ ಕಾಗದವನ್ನು ತೋರಿಸಿದರೆ ಜನಗಳು ಸಂತೋಷ ಪಡಲಿಕ್ಕಿಲ್ಲ. ಅದೂ ಅಲ್ಲದೆ ಆ ಪ್ರದೇಶದ ಜನರು ರಸ್ತೆ ಸಾರಿಗೆ ಇಲ್ಲದೆ ತೊಂದರೆ ಪಡುವ ಜನರು ಸ್ವಾತಂತ್ರ್ಯವನ್ನು ಪಡೆದ ಮೇಲೂ ಈ ರೀತಿ ಆಗಿದೆಯಲ್ಲಾ ಎಂದು ವ್ಯಸನಪೂರ್ವಕವಾಗಿ ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು.

ತಾವು ದಯವಿಟ್ಟು ಈ ಬಡ್ಜೆಟ್‌ನಲ್ಲಿ ಸೇರಿದ ಈ ರಸ್ತೆ ಕೆಲಸವನ್ನು ಆದಷ್ಟು ತೀವ್ರತೆಯಿಂದ ಪೂರೈಸಿ ಕೊಡಬೇಕಾಗಿ ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಇನ್ನೂ ನೀರಾವರಿ ವಿಚಾರ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೇರಳವಾಗಿ ಮಳೆ ಇದೆ. ಮಳೆ ನೀರು ಅನೇಕ ನದಿಗಳ ಮುಖಾಂತರ ಸಮುದ್ರಕ್ಕೆ ಸೇರಿ ವ್ಯರ್ಥವಾಗುತ್ತಿದ್ದೆ ಸಾಕಾದಷ್ಟು ಅಣೆಕಟ್ಟು ಕಟ್ಟಿ ನೀರಾವರಿ ಯೋಜನೆಯನ್ನು ಮಾಡುವ ಸಂದರ್ಭ ಅಲ್ಲಿ ಬೇಕಾದಷ್ಟು ಇದೆ. ಸುಮಾರು 6-7 ವರ್ಷಗಳ ಹಿಂದೆ ಮದರಾಸು ಸರ್ಕಾರದವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಿಜೂರು. ಬತನಹಳ್ಳಿ, ಹಾಲಡಿ ಯೋಜನೆಗಳ ಬಗ್ಗೆ ಎಸ್ಟಿಮೇಟನ್ನು ಸಹ ಸಿದ್ಧಪಡಿಸಿದರು. ಇಷ್ಟರವರೆಗೂ ಅದರಲ್ಲಿ ಯಾವುದನ್ನೂ ತೆಗೆದುಕೊಂಡಿಲ್ಲ. ಬಿಜೂರು ಜಲಾಶಯದ ಯೋಜನೆ ಈ ವರ್ಷದ ಯೋಜನೆಯಲ್ಲಿ ಪ್ಲಾನ್ ಯೋಜನೆಯಾಗಿ ಸೇರಿಸಿದ್ದಾರೆ. ಒಂದೆರಡು ದಿನಗಳಲ್ಲೇ ಆ ಯೋಜನೆಯ ಕೆಲಸ ಪ್ರಾರಂಭವಾಗುವ ಆಶೆ ಸಹ ಕಂಡು ಬರುತ್ತಿದೆ. ಕೆಲವು ಸಾರಿ ಆಶೆ ನಿರಾಶೆಯಾಗುವ ಸಂದರ್ಭ ಕಂಡು ಬಂದಿರುವುದರಿಂದ, ಇಲ್ಲಿಯವರೆಗೆ ಯಾವ ನೀರಾವರೀ ಯೋಜನೆಯನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಕೊಳ್ಳದೇ ಇರುವುದರಿಂದ ಈ ವರ್ಷದ ಬಡ್ಜೆಟ್‌ನಲ್ಲಿ, ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಬಿಜೂರು ಯೋಜನೆಗೆ ಬೇಕಾದ ಹಣವನ್ನು ಒದಗಿಸಿಕೊಟ್ಟು, ಮಳೆಗಾಲ ಪ್ರಾರಂಭವಾಗವುದರೊಳಗೆ ಈ ಯೋಜನೆಯ ಕಾರ್ಯವನ್ನು ನೆರವೇರಿಸುವಂತೆ ತಾವು ಮಾಡ ಬೇಕಾಗಿ ಅತಿ ದೈನ್ಯದಿಂದ ಕೇಳಿಕೊಳ್ಳುತ್ತೇನೆ.

ಇನ್ನು ಲಿಫ್ಟ್ ಇರಿಗೇಷನ್. ಅನೇಕ ನದಿಗಳು ನಮ್ಮ ಜಿಲ್ಲೆಯಲ್ಲಿ ಹರಿದು ಹೋಗುತ್ತವೆ. ಈ ನದಿಗಳ ಪಕ್ಕದಲ್ಲಿ ಲಿಫ್ಟ್ ಇರಿಗೇಷನ್ ಮುಖಾಂತರ 2 ಮತ್ತು 3ನೇ ಬೆಳೆ ಬೆಳೆಸಲು ಸಾಧ್ಯ ವಾಗುತ್ತದೆ ಎಂದು ಇಂದು ಮಂತ್ರಿ ಮಂಡಲದಲ್ಲಿರುವ ಬಾಳಿಗರವರು 4–5 ವರ್ಷಗಳಿಂದ ಸರಕಾರದವರಲ್ಲಿ ಒತಾಯ ಪಡಿಸುತ್ತಾ ಇದ್ದಾರೆ. ಒತ್ತಾಯ ಪಡಿಸಿದ್ದು ಮಾತ್ರವಲ್ಲ ದಕ್ಷಿಣ ಕನ್ನಡ ಜಿಲ್ಲೆಯ ಇಂಜನಿಯರಿಂಗ್ ಡಿಪಾರ್ಟ್‌ಮೆಂಟಿನವರೊಡನೆ ಚರ್ಚೆಮಾಡಿ, ಆ ಬಗ್ಗೆ ಶಿಫಾರ ಸನ್ನು ಕೂಡ ಸರ್ಕಾರದವರಿಗೆ ಮಾಡಿದ್ದಾರೆ. ಆದರೆ ಎಷ್ಟು ಪ್ರಯೋಜನವಾಯಿತು? ಸೆಕ್ರೆಟೆರಿ ಯಟ್‌ನಲ್ಲಿ ಯಾವುದೋ ಒಂದು ಕಪಾಟಿನಲ್ಲಿ ಇಟ್ಟಿರಬಹುದು. ನಿಜವಾಗಿಯೂ ಇದಕ್ಕೆ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದವರೊಡನೆ ಒತ್ತಾಯ ಪಡಿಸಿದರೆ ಮುಂದೆ ಸಂಪೂರ್ಣ ಗ್ರ್ಯಾಂಟು ಕೇಂದ್ರ ಸರ್ಕಾರದವರು ಕೊಡಲಿಕ್ಕೆ ಸಿದ್ಧರಾಗಿದ್ದಾರೆ ಎಂದು ಕೇಳಿದ್ದೇನೆ. ನಮ್ಮ ಸರ್ಕಾರ ದವರು ಈ ವಿಚಾರದಲ್ಲಿ ಆಹಾರ ಉತ್ಪಾದನೆ ದೃಷ್ಟಿಯಿಂದಲೂ ದಯವಿಟ್ಟು ಹೆಚ್ಚಿನ ಆಸಕ್ತಿ ಯನ್ನು ತೋರಿಸಿ ಲಿಫ್ಟ್ ಇರಿಗೇಷನ್ ಸ್ಕೀಂ ಯಶಸ್ವಿಯಾಗುವಂತೆ ಮಾಡಬೇಕಾಗಿ ಹೇಳಿ ನನಗೆ ಇಷ್ಟು ಮಾತನಾಡಲು ಸಮಯ ಕೊಟ್ಟಿದ್ದಕ್ಕಾಗಿ ಮಾನ್ಯ ಸಭಾಪತಿಗಳನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ವೆಂಕಟರೆಡ್ಡಿ (ಗೌರೀಬಿದನೂರು).— ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಪಬ್ಲಿಕ್ ವರ್ಕ್ಸ್ ಡಿಮ್ಯಾಂಡ್ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ತಮಗೆ ವಂದನೆಗಳನ್ನರ್ಪಿಸಿ ನನ್ನ ಭಾಷಣವನ್ನು ಷುರು ಮಾಡುತ್ತೇನೆ. ಸ್ವಾಮಿ, ಇವತ್ತಿನ ದಿವಸ ನಮ್ಮ ಮುಂದೆ ಇರತಕ್ಕ ಪಿ. ಡಬ್ಲ್ಯು. ಡಿಮ್ಯಾಂಡ್ ಏಂದರೆ ದೇಶದಲ್ಲಿ ಬಹಳ, ಅತಿ ಮುಖ್ಯವಾದುದು. ಇದರಿಂದ ನಾನಾ ಡಿಪಾರ್ಟ್‌ಮೆಂಟ್‌ಗಳು ಎಂದರೆ ವ್ಯವಸಾಯ, ಕೋಆಪರೇಷನ್, ಎಜುಕೇಷನ್ ಇವೆಲ್ಲವೂ ಇದರ ಒಂದು ಕನೆಕ್ಷನ್‌ನಿಂದ ನಡೆಯಬೇಕಾಗಿರುವಂಥ ಒಂದು ಡಿಮ್ಯಾಂಡ್ ಇದು. ಈಗ 2ನೇ ಪಂಚವಾರ್ಷಿಕ ಯೋಜನೆ ಕಳೆದು 3ನೇ ಪಂಚವಾರ್ಷಿಕ ಯೋಜನೆಯಲ್ಲಿ ಕಾಲಿಟ್ಟಿದ್ದೇವೆ. 2ನೇ ಪಂಚವಾರ್ಷಿಕ ಯೋಜನೆಯಲ್ಲಿ ಅವರು ಮೊದಲನೆಯ ಒಂದು ಆಸಕ್ತಿ ತೆಗೆದುಕೊಂಡು ಸಣ್ಣ ನೀರಾವರೀ ಯೋಜನೆ ಷುರುಮಾಡಿದರು. ಇದು ಎಷ್ಟು ಮಟ್ಟಿಗೆ ಉಪಕಾರ ಹೊಂದಿದೆ ಎಂದರೆ ಅವರೇ ಹೇಳುತ್ತಾ ಇದ್ದಾರೆಯಲ್ಲಾ ನಾವು ದೇಶದಲ್ಲಿ ಎಷ್ಟು ಉಪಕಾರ ಮಾಡಬೇಕಾಗಿತ್ತೋ ಎಂದು ಅಂದು ಕೊಂಡಿದೆವೋ ಅದರಲ್ಲಿ ಶೇಕಡ 10%ಕೂಡ ಇವತ್ತಿನ ದಿವಸ ಕೆಲಸ ನಡೆದಿಲ್ಲ ಎಂದು–ಖಂಡಿತವಾಗಿಯೂ ಆ ವಿಚಾರದಲ್ಲಿ ಟೀಕೆ ಮಾಡುತ್ತೇನೆ. ಬೇಕಾದರೆ ಒಂದೆರಡು ಉದಾಹರಣೆ ಕೊಡುತ್ತೇನೆ. ನಮ್ಮ P. W. ಮಿನಿಸ್ಟರು ಅದನ್ನು ವಿಚಾರಣೆ ಮಾಡಿ ನೋಡಲಿ. ನಮ್ಮ ತಾಲ್ಲೂಕಿನಲ್ಲಿ–ಗೌರೀಬಿದನೂರಿನಲ್ಲಿ ಒಂದು ಸಣ್ಣ ಕೆರೆ ಒಡೆದು ಹೋಯಿತು. ರಿಪೇರಿ ಮಾಡಲು ಅಂದಾಜು 50 ಸಾವಿರ ರೂಪಾಯಿ ಆಗಬಹುದು. ಅದನ್ನು ಉಪಮಂತ್ರಿಗಳಿಗೆ ಎಷ್ಟೋ ಸಲ ಹೇಳಿದೆ. ಒಂದು ಇಂಟರ್‌ಪೆಲೇಷನ್ ಸಹ ಕಳುಹಿಸಿದ್ದೆ. 3 ವರ್ಷದ ಹಿಂದೆ ''ಜಾಗ್ರತೆ ಮಾಡಿಸಿ ಕೊಡುತ್ತೇವೆ'' ಎಂದು ಉತ್ತರ ಕೊಟ್ಟರು. ''ಜಾಗ್ರತೆ'' ಎಂದರೆ ಎಷ್ಟು ವರ್ಷ ಎನ್ನುವುದು ನಮಗೆ ಗೊತ್ತಾಗಲಿಲ್ಲ ಸ್ವಾಮಿ! ಗುಂಡಂಗೆರೆ ಕೆರೆ ಅಂತ ಇದೆ ಅದು ಒಡೆದು ಹೋಗಿ 4 ವರ್ಷ ಆಗಿದೆ. ಇದುವರೆಗೂ ಎಸ್ಟಿಮೇಟ್ ಆಗಿದೆಯೇ ಇಲ್ಲವೇ ಎಂದು ಯಾರನ್ನು ವಿಚಾರಿಸಿದರೂ ''ಕಳುಹಿಸಿದ್ದೇವೆ'', ''ಮಾಡಿಸುತ್ತಾ ಇದ್ದೇವೆ'' ಎಂದು ಉತ್ತರ ಬರುತ್ತಿದೆಯೇ ಹೊರತು ಕೆರೆ ಮಾತ್ರ ದುರಸ್ತು ಆಗಿಲ್ಲ. ಇವತ್ತಿನವರೆಗೂ ಅದ ಮೊದಲು ಯಾವರೀತಿ ಇತ್ತೋ ಅದೇ ರೀತಿ ಇದೆ. ಇದು ಮಾನ್ಯ ಡೆಪ್ಯೂಟಿ ಮಿನಿಸ್ಟರಿಗೆ ಚೆನ್ನಾಗಿ ಗೊತ್ತು. 4–5 ಸಲ ಕೇಳಿದೆ ''ವಿಚಾರಿಸುತ್ತೇನೆ'', ''ಮಾಡುತ್ತೇವೆ', ''ಮಾಡೋಣ'' ಎಂದು ಅನ್ನುತ್ತಾ ಇದ್ದಾರೆಯೇ ಹೊರತು ಖಂಡಿತವಾಗಿಯೂ ಒಬ್ಬ ಅಸಿಸ್ಟೆಂಟ್ ಇಂಜನಿಯರಾಗಲೀ ಎಕ್ಸಿಕ್ಯೂಟೀವ್ ಇಂಜನಿಯರಾಗಲೀ, ನೋಡಿಕೊಂಡು ಬರುತ್ತೇವೆ ಅಂದವರು ಇದುವರೆಗೂ ಬಂದಿಲ್ಲ. ಎಸ್ಟಿಮೇಟ್ ಆಗಿದೆಯೋ, ಇಲ್ಲವೋ ಗೊತ್ತಿಲ್ಲ. ಸಣ್ಣ ನೀರಾವರೀ ಯೋಜನೆ ಎಷ್ಟರಮಟ್ಟಿಗೆ ಮಾಡುತ್ತಾರೆ ಎನ್ನುವುದಕ್ಕೆ ಈ ಒಂದೆರಡು ಉದಾಹರಣೆಗಳು ಸಾಕಾಗಿವೆ.

ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಬಿಕ್ಕಲಮಡಗು ಕೆರೆ ಅಂತ ಇದೆ. 8–10 ವರ್ಷ ಆಯಿತು ಷುರುಮಾಡಿ. ಆಗಲೇ 2 ಅಥವಾ 3 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಅದು ಒಂದು ಸಲ ನದಿ ಬಂದು ಕೊಚ್ಚಿಕೊಂಡು ಹೋಯಿತು. ಈಗ 9 ಲಕ್ಷ ರೂಪಾಯಿನ ಬಂದು ಎಸ್ಟಿಮೇಟ್ ಮಾಡಿದ್ದರಂತೆ ಅದು 18 ಲಕ್ಷ ರೂಪಾಯಿ ಆಗಿದೆ ಎಂದು ಹೇಳುತ್ತಾರೆ. ಅಷ್ಟು ಚೆನ್ನಾಗಿ ಗೊತ್ತಿಲ್ಲ. ಆ ಕೆರೆ ಆದರೆ ಗೌರೀಬಿದನೂರು ತಾಲ್ಲೂಕಿಗೆ ಹೆಚ್ಚಿನ ಉಪಕಾರವಾಗುತ್ತದೆ. ಆದ್ದರಿಂದ ಇದನ್ನು ಹೇಳುತಾ ಇದ್ದೇನೆ. ಈಗ ನಮ್ಮ ತಾಲ್ಲೂಕಿಗೆ ಸಕ್ಕರೆ ಕಾರ್ಖಾನೆ ಆಗುವ ಸಂಭವ ಇದೆ. ಗೌರೀಬಿದನೂರು ತಾಲ್ಲೂಕಿಗೆ ಸಂಬಂಧಪಟ್ಟ ಈ ಕೆರೆ ಮಾಡುತ್ತಿದ್ದರೆ ಖಂಡಿತವಾಗಿಯೂ ಅಲ್ಲಿ ಕಬ್ಬು ಬೆಳೆಯುವುದಕ್ಕೆ ಬಹಳ ತೊಂದರೆಯಾಗುತ್ತದೆ. ಕೋಲಾರ ಜಿಲ್ಲೆ ಹೆಚ್ಚು ಕೆರೆಗಳನ್ನೇ ನಂಬಿಕೊಂಡು ಜೀವನ ಮಾಡುತ್ತಾ ಇರುವ ಒಂದು ಜಿಲ್ಲೆ. ಅಂಥಾ ಜಿಲ್ಲೆಯಲ್ಲಿ ಕೆರೆಗಳ ದುರಸ್ತು ಅಷ್ಟು ಚೆನ್ನಾಗಿ ನಡೆಯುತ್ತಿಲ್ಲ. ಮಾನ್ಯ ಸ್ಪೀಕರ್ ಅವರ ಮೂಲಕ P. W. ಮಿನಿಸ್ಟರಿಗೆ ಕೇಳಿಕೊಳ್ಳುತ್ತೇನೆ. ಕೋಲಾರ ಜಿಲ್ಲೆಯಲ್ಲಿ ಯಾವ ಕೆಲಸ ನಿಧಾನವಾದರೂ ಕೂಡ

(ಶ್ರೀ ಕೆ. ಹೆಚ್. ವೆಂಕಟರೆಡ್ಡಿ)

ಕೆರೆಗಳ ವಿಚಾರದಲ್ಲಿ ಮಾತ್ರ ಹೆಚ್ಚಿನ ಆಸಕ್ತಿ ತೆಗೆದುಕೊಂಡು ಕೆಲಸ ನಡೆಸಬೇಕೆಂದು ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಳ್ಳಿಗಳಲ್ಲಿ ಸಿಕ್ಕಾಪಟ್ಟೆ ರಸ್ತೆ ಮಾಡುವುದನ್ನು ಬಿಟ್ಟು ಕೆರೆಗಳ ಕಡೆಗೆ ಗಮನ ಕೊಡಿ. ಅಕಸ್ಮಾತ್ತಾಗಿ ಮಳೆ ಬಂದರೆ ಬೆಳೆ ಆಗುವುದಕ್ಕೆ ಸಾಧ್ಯವಾಗುತ್ತದೆ. ಎಷ್ಟೋ ಸಲ ಕಮಿಟಿ ಮೀಟಿಂಗ್ ಸೇರಿದಾಗ ಇಂಜನಿಯರಿಂಗ್ ಡಿಪಾರ್ಟ್‌ಮೆಂಟಿನವರನ್ನು ಕೇಳಿಕೊಂಡಿದ್ದೇನೆ. ಆದರೂ ಕೂಡ ಕೆರೆಗಳ ವಿಚಾರದಲ್ಲಿ ಖಂಡಿತವಾಗಿಯೂ ಏನೊಂದು ಸ್ಕೀಂನ್ನು ಹಾಕಿಕೊಂಡು ಕೆಲಸ ಮಾಡಿಲ್ಲ. ಇವತ್ತಿಗೂ ಕೂಡ ಕೆಲಸ ನಡೆಸುತ್ತಿಲ್ಲ. ರಸ್ತೆ ಜೊತೆಗೆ ಕೆರೆ ಕೆಲಸ ಮಾಡಬಹುದಾಗಿತ್ತು, ಮಾಡಿಲ್ಲ ಎಂದು ಹೇಳುತ್ತಾ ಇದ್ದೇನೆ. 4 ವರ್ಷದಿಂದ ನಾನು ನೋಡುತ್ತಾ ಇದ್ದೇನೆ. ನಮ್ಮ ತಾಲ್ಲೂಕಿನಲ್ಲಿ 3–4 ಕೆರೆಗಳು, ಸುಮ್ಮನೆ ಹೆಸರು ಇದೆ ದುಡ್ಡು ಹೋದ ವರ್ಷ ಎಷ್ಟಿತ್ತೋ ಅಷ್ಟೇ ಈ ವರ್ಷ, ಅಥವಾ ಒಂದು 5,000 ರೂಪಾಯಿ ಜಾಸ್ತಿ ಹಾಕಿರುತ್ತಾರೆ. ಖರ್ಚು ಮಾತ್ರ 3 ಕಾಸು ಕೂಡ ಆಗಿಲ್ಲ.

ಚಾನಲ್ಸ್ ಮಾಡುವುದಕ್ಕೂ ಕೂಡ ತಾವು ಹಣ ಪ್ರೊವೈಡ್ ಮಾಡಿದ್ದೀರಿ. ಒಂದು ಚಾನಲ್ ಕೂಡ ತೆಗೆದಿಲ್ಲ. ಮೊದಲನೇ ವರ್ಷ ನಾನು ಬಂದಾಗ ಬಡ್ಜೆಟ್ ತೆಗೆದುಕೊಂಡು ಹೋಗಿ ನಮ್ಮ ತಾಲ್ಲೂಕಿನಲ್ಲಿ ತೋರಿಸಿದೆ ಸರ್ಕಾರದವರು ಈ ಚಾನಲ್ ಮಾಡಿಸುತ್ತಾರಂತೆ. ಬಡ್ಜೆಟ್ಟಿನಲ್ಲಿ ಹಾಕಿದ್ದಾರೆಂದು ಹೇಳಿದೆ. ನಿಜವಾಗಿಯೂ ಮಾಡಿಸುತ್ತಾರೆ ಎಂದು ತಿಳಿದುಕೊಂಡಿದ್ದೆ. ತಿರುಗಿ ಮೂರನೇ ವರ್ಷ ಹಾಗೆಯೇ ಇದೆ. ಟೆಂಡರ್ಸ್ ಕರೆಯಲಿಲ್ಲ, ಕೆಲಸ ಷುರು ಮಾಡಲಿಲ್ಲ. ಈ ರೀತಿ ಸರ್ಕಾರದವರು 3 ಅಲ್ಲ 4 ಅಲ್ಲ 5 ಪಂಚವಾರ್ಷಿಕ ಯೋಜನೆಗಳನ್ನು ಹಾಕಿಕೊಂಡು, ಬಡ್ಜೆಟ್‌ನಲ್ಲಿ ಸುಮ್ಮನೆ ಖರ್ಚು ಮಾಡುತ್ತೇವೆ ಎಂದು ಅಂಕಿಗಳನ್ನು ತೋರಿಸುತ್ತಾ ಹೋದರೆ ಖಂಡಿತವಾಗಿಯೂ ಪ್ರಗತಿ ಸಾಧಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಸುಮ್ಮನೆ ಬಡ್ಜೆಟ್ ಫಿಗರ್ಸ್ ನೋಡಬಹುದು. ಮೆಂಬರ್‌ಗಳು ಇಲ್ಲಿ ಸ್ವಲ್ಪ ಹೊತ್ತು ಗಲಾಟೆ ಮಾಡಿಕೊಂಡು ಊರುಗಳಿಗೆ ಹೋಗಬಹುದು. ಅಷ್ಟೇ ಹೊರತು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಮಾತ್ರ ಸಾಧಿಸಿದ್ದೀರಿ ಎಂಬುದಕ್ಕೆ ಈ ಒಂದೇ ಒಂದು ಉದಾಹರಣೆ ಸಾಕಾಗಿದೆ. ಬೇಕಾದರೆ ಬಡ್ಜೆಟ್ ಕಾಪಿ ತರುತ್ತೇನೆ. ಯಾವುದಾದರೂ ಒಂದು ಕೆಲಸ ತೆಗೆದುಕೊಂಡು ಪೂರೈಸಿದ್ದರೆ ದೇಶದಲ್ಲಿ ನಿಜವಾಗಿಯೂ ಪ್ರಗತಿ ಸಾಧಿಸಿದ್ದಾರೆಂದು ಒಪ್ಪಿಕೊಳ್ಳುತ್ತೇನೆ. ಹಿಂದೆ ವೀರಣ್ಣಗೌಡರು ಇಂಜನಿಯರಿಂಗ್ ಇಲಾಖಾ ಮಂತ್ರಿಗಳಾಗಿದ್ದಾಗ ''ಇಟ್ಟಿಪುಟ್ಟಿನ ವಾಲ್ಮೀಕಿ ಇಂಜನಿಯರಿಂಗ್ ಇಲಾಖೆ'' ಎಂಬಂತೆ ನಮ್ಮ ಈ ಇಲಾಖೆಯ ಪರಿಸ್ಥಿತಿಯಿದೆ ಎಂದು ಉತ್ತರ ಕೊಡುವಾಗ ಒಂದು ದಿವಸ ಹೇಳಿದರು. ಈ ಇಲಾಖೆಯಲ್ಲಿ ಆ ಪರಿಸ್ಥಿತಿಯಿದ್ದುದನ್ನು ಕಡಮೆ ಮಾಡುವುದಕ್ಕೆ ಏನು ಕ್ರಮ ಸರ್ಕಾರ ತೆಗೆದುಕೊಂಡಿದೆ ಎಂದು ಅವರನ್ನು ಈಗ ಕೇಳುತ್ತೇನೆ. ಅದು ಬರೀ ಬಾಯಿಮಾತೋ ಅಥವಾ ಇರುವ ತೊಂದರೆ ಕಡಿಮೆ ಮಾಡುವ ಕ್ರಮ ತೆಗೆದುಕೊಂಡಿದ್ದಾರೋ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಈಗ ಲೋಕೋಪಯೋಗಿ ಇಲಾಖೆಯಲ್ಲಿ ಖಂಡಿತವಾಗಿಯೂ ಎಲ್ಲಿ ಕೆಲಸ ತೆಗೆದುಕೊಳ್ಳಬೇಕು. ಎಲ್ಲಿ ಪರ್ಸೆಂಟೇಜ್ ಜಾಸ್ತಿ ಗಿಟ್ಟುತ್ತದೆ ಎಂದು ನೋಡಿ ತೆಗೆದುಕೊಳ್ಳುವ ಭಾವನೆ ಮೂಡಿದೆ. ಒಟ್ಟಾಗಿ ಎಲ್ಲರಮೇಲೂ ಈ ರೀತಿ ಆರೋಪ ಮಾಡುತ್ತಿಲ್ಲ. ಕೆಲವರ ವಿಚಾರ ಹೇಳುತ್ತಿದ್ದೇನೆ. ಇದನ್ನು ತನಿಖೆ ಮಾಡಿ ಕ್ರಮ ತೆಗೆದುಕೊಳ್ಳಬೇಕು. ಪೂರ್ಣವಾಗಿ ಈ ಅಕ್ರಮವನ್ನು ನಿಲ್ಲಿಸುವುದಕ್ಕಾಗದಿದ್ದರೂ ಸಾಧ್ಯವಾದಷ್ಟು ಕಡಮೆ ಮಾಡಬೇಕು. ಗಿಟ್ಟಲಿ, ಗಿಟ್ಟದಿರಲಿ ದೇಶದಲ್ಲಿ ಅಗತ್ಯವಾಗಿ ಆಗಬೇಕಾಗಿರುವ ಕೆಲಸಗಳನ್ನು ತೆಗೆದುಕೊಳ್ಳಲೇಬೇಕು.

ಇನ್ನೊಂದು ಎಗ್ಜಿಕ್ಯೂಟಿವ್ ಇಂಜನಿಯರ್, ಸೂಪರಿಂಟೆಂಡಿಂಗ್ ಇಂಜನಿಯರು ಮತ್ತು ಚೀಫ್ ಇಂಜನಿಯರು ಹತ್ತು–ಇಪ್ಪತ್ತು ಸಾವಿರ ರೂಪಾಯಿಗಳ ಕೆಲಸವನ್ನು ಟೆಂಡರಿಲ್ಲದೆ ಕೊಡುವ ಹೊಸ ಪದ್ಧತಿ ಜಾರಿಗೆ ಬಂದಿರುವುದು, ಎಷ್ಟೋ ಒಳ್ಳೆಯವರು ಬಂದರೂ ಟೆಂಡರ್

ಕರೆಯದೆ ಕೆಲಸ ಕೊಡಕೂಡದೆಂದು ನಾನು ಸಲಹೆ ಕೊಡುತ್ತೇನೆ. ಈಗ ಪ್ರಭಾವ ಬೀರಿ ಬೇಕಾದಷ್ಟು ಕೆಲಸಗಳನ್ನು ಟೆಂಡರಿಲ್ಲದೆ ಕೊಟ್ಟಿದ್ದಾರೆ. ಇದರಿಂದ ಬೇರೆ ಕಂಟ್ರಾಕ್ಟರುಗಳಿಗೆ ಮತ್ತು ದೇಶಕ್ಕೆ ನಿಜವಾಗಿಯೂ ನಷ್ಟವಾಗುತ್ತದೆ. ನೂರು ರೂಪಾಯಿಗಳ ಕೆಲಸವನ್ನು ಎಪ್ಪತ್ತೈದು ರೂಪಾಯಿಗಳಿಗೆ ಮಾಡುವವರಿದ್ದರೂ ನೂರು ರೂಪಾಯಿಗಳಿಗೇ ಕೊಟ್ಟಿರುತ್ತಾರೆ. ಕೆಲವು ಕಡೆ ಆ ಕೆಲಸಕ್ಕೆ 125 ರೂಪಾಯಿಗಳಾಗಬಹುದು. ಆದರೆ ಕಡಮೆ ಖರ್ಚಿನಲ್ಲಿ ಆಗುವಂತಿದ್ದರೂ ಅಧಿಕಾರವಿರುವುದರಿಂದ ಟೆಂಡರ್ ಕರೆಯದೆ ಬೇಕಾದಷ್ಟು ಕೆಲಸಗಳನ್ನು ಹೆಚ್ಚು ಖರ್ಚಿನಲ್ಲಿ ಬೇಕಾದವರಿಗೆ ಕೊಟ್ಟು ಮಾಡಿಸುತ್ತಿದ್ದಾರೆ. ಈ ರೀತಿ ಟೆಂಡರ್ ಇಲ್ಲದೆ ಖಂಡಿತ ಯಾವ ಕೆಲಸವನ್ನೂ ಕೊಡಕೂಡದೆಂದು ಸರ್ಕ್ಯುಲರ್ ಹೊರಡಿಸಬೇಕು. ನಿಧಾನವಾದರೂ ಟೆಂಡರ್ ಕರೆದು ಕೆಲಸ ವಹಿಸಬೇಕು. ನಮ್ಮ ತಾಲ್ಲೂಕಿನಲ್ಲಿ 30 ಸಾವಿರ ರೂಪಾಯಿಗಳ ಕಾಸ್‌ವೇ ಕೆಲಸವನ್ನು ಟೆಂಡರ್ ಕರೆಯುತ್ತಾರೆಂದು ಕಾದಿದ್ದ ಅನೇಕರಿಗೆ ಅವಕಾಶ ಕೊಡದೆ ಟೆಂಡರ್ ಕರೆಯದೆ ಕೊಟ್ಟಿದ್ದಾರೆ. ಟೆಂಡರ್ ಬಾರದಿದ್ದರೆ ಪರವಾಗಿಲ್ಲ. ಬೇರೆಯವರು ಟೆಂಡರ್ ಹಾಕುವುದಕ್ಕೆ ಸಿದ್ಧವಾಗಿರುವಾಗ ಹಾಗೇಕೆ ಮಾಡಬೇಕು? ಟೆಂಡರ್ ಕೊಡಲು ಜನರು ಮುಂದೆ ಬರುವಾಗ ಕಡಮೆ ಟೆಂಡರ್ ಇರುವವರಿಗೆ ಕೊಡಲಿ. ಟೆಂಡರ್ ಇಲ್ಲದೆ ಕೊಡುವುದರಿಂದ ಬಡ ಜನರ ಹಣ ಕೊಳ್ಳೆ ಹೊಡೆದಂತಾಗುತ್ತದೆ. ಇದೊಂದು ಬಹು ಮುಖ್ಯವಾದ ವಿಷಯ. ಅಂಥ ಪ್ರಾಣಹೋಗುವ ಕಾಲ ಬಂದರೆ, ರಸ್ತೆಗಳಲ್ಲಿ ಮೋರಿ, ಸೇತುವೆ ವಗೈರೆ ತಕ್ಷಣ ಮಾಡಬೇಕಾದರೆ ಆಗ ಟೆಂಡರಿಲ್ಲದೆ ಕೊಡಲಿ. ಆದೇ ಕಾಸ್‌ವೇ, ಕಾಲುವೆ ವಗೈರೆ ಮಾಡುವಾಗ ಟೆಂಡರ್ ಮೂಲಕವೇ ಕೆಲಸ ಕೊಡಬೇಕು. ಈಗ ಹೆಚ್ಚು ಹಣ ಖರ್ಚಾಗಬೇಕು, ದೇಶಕ್ಕೆ ಉಪಕಾರವಾಗಬೇಕು ಎಂದಿರುವಾಗ ಒಂದು ಕ್ರಮ ಅನುಸರಿಸಿ ಕೆಲಸ ಮಾಡಬೇಕು; ಸಾಧ್ಯವಿಲ್ಲದಿರುವಾಗ ಹೇಗೆ ಬೇಕಾದರೂ ಮಾಡೋಣ. ಅದರಲ್ಲಿ ತಪ್ಪಿಲ್ಲ.

ಮೂರನೆಯದಾಗಿ ಕಂಟ್ರಾಕ್ಟರುಗಳನ್ನು ರಿಜಿಸ್ಟರ್ ಮಾಡುತ್ತಿದ್ದೀರಿ. ಇದರಿಂದ ಹೊಸದಾಗಿ ಕಂಟ್ರಾಕ್ಟ್ ಕೆಲಸ ಮಾಡುವವರಿಗೆ ತೊಂದರೆಯಾಗುತ್ತದೆ. ಹೊಸಬರಿಗೆ ಮೊದಲು ಬಂದಾಗ 5 ಸಾವಿರ ರೂಪಾಯಿಗಳೊಳಗಿರುವ ಕೆಲಸಗಳನ್ನು ಕೇಳಿದರೆ ಕೊಡಬೇಕು. ಈಗ ಹಿಂದಿನಿಂದ ಮಾಡುತ್ತಿದ್ದವರೇ ಕೆಲಸ ಮಾಡುತ್ತಿದ್ದಾರೆ. ಹೊಸ ಕಂಟ್ರಾಕ್ಟರುಗಳು ಆಸೆಪಟ್ಟು ಅಸಿಸ್ಟೆಂಟ್ ಇಂಜನಿಯರು ಅಥವಾ ಎಗ್ಸಿಕ್ಯೂಟಿವ್ ಇಂಜನಿಯರ್ ಬಳಿಹೋಗಿ ಕೆಲಸ ಕೇಳಿದರೆ "ನೀನು ರಿಜಿಸ್ಟರ್ ಮಾಡಿಕೊಂಡಿಲ್ಲ, ಕೆಲಸ ಕೊಡುವುದಿಲ್ಲ" ಎಂದು ಹೇಳಿಬಿಡುತ್ತಾರೆ. ಕಾನೂನು ಪ್ರಕಾರ ರಿಜಿಸ್ಟರ್ ಮಾಡಿಕೊಳ್ಳಲೇಬೇಕೆಂದಿದ್ದರೂ ಸಣ್ಣ ಕೆಲಸಗಳ ವಿಚಾರದಲ್ಲಿ ಈ ನಿರ್ಬಂಧವಿರುವುದು ಸರಿಯಲ್ಲ. ಚನ್ನಬಸಪ್ಪನವರು ಈ ಇಲಾಖೆ ಮಂತ್ರಿಗಳಾಗಿದ್ದಾಗ ಕೇಳಿದರೆ ಸಣ್ಣ ಕೆಲಸ ರಿಜಿಸ್ಟರ್ ಮಾಡಿಕೊಂಡಿಲ್ಲದಿರುವವರಿಗೆ ಕೊಡಬಹುದೆಂದು ಹೇಳಿದರು. ಆದರೆ ಇಂಜನಿಯರುಗಳು ಕೊಡುವುದಿಲ್ಲ, ರಿಜಿಸ್ಟರ್ ಮಾಡಿಕೊಂಡು ಬಾ ಎಂದು ಹೇಳುತ್ತಾರೆ. ಹೊಸಬರು ಲೈಸೆನ್ಸ್ ಇಲ್ಲದೆ ಸ್ವಲ್ಪ ದಿವಸ ಕೆಲಸ ಮಾಡಲು ಅವಕಾಶ ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಸಣ್ಣ ಕಂಟ್ರಾಕ್ಟ್ ಕೆಲಸ ಮಾಡುವವರು 10–15 ರೂಪಾಯಿಗಳನ್ನು ಕೊಟ್ಟು ಲೈಸೆನ್ಸ್ ತೆಗೆದುಕೊಳ್ಳುವುದಕ್ಕೆ ತೊಂದರೆಯೇನು?

ಶ್ರೀ ಕೆ. ಎಚ್. ವೆಂಕಟರೆಡ್ಡಿ.—ಅದಕ್ಕೆ ತೊಂದರೆಯಿದೆ. ಹಳ್ಳಿಗಳ ಕಡೆ ಅಲ್ಲಿನವರಿಗೆ ನಮ್ಮ ಪಕ್ಕದ ಕೆಲಸ ನಾವೇ ಮಾಡೋಣ ಎಂಬ ಒಂದು ಆಸಕ್ತಿಯಿರುತ್ತದೆ. ಅವರಿಗೆ ಲೈಸೆನ್ಸ್ ತೆಗೆದುಕೊಳ್ಳಬೇಕೆಂಬುದು ಗೊತ್ತಿರುವುದಿಲ್ಲ. ಆದರೆ ಇಲಾಖೆಯವರು ಲೈಸೆನ್ಸ್ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಾರೆ. ನಮ್ಮ ಹಳ್ಳಿ ಕೆಲಸ ನಾವು ಚೆನ್ನಾಗಿ ಮಾಡುತ್ತೇವೆ. ಕೊಡಿ ಎಂದರೆ, ನಿನಗೆ ಲೈಸೆನ್ಸ್ ಇಲ್ಲ, ಕೊಡುವುದಿಲ್ಲ ಎಂದು ಎಂದು ಹೇಳಿ ಬೇರೆಯವರಿಗೆ ಕೊಡುತ್ತಾರೆ. ಇದರಿಂದ ಆಸಕ್ತಿವಹಿಸಿ ಕೆಲಸ ಮಾಡಬೇಕೆಂದಿರುವವರಿಗೆ ತೊಂದರೆ

(ಶ್ರೀ ಕೆ. ಎಚ್. ವೆಂಕಟರೆಡ್ಡಿ)

ಯಾಗುತ್ತದೆ. ಲೈಸೆನ್ಸ್ ತೆಗೆದುಕೊಳ್ಳಬಾರದೆಂದು ಹೇಳುತ್ತಿಲ್ಲ. ಅದು ಬೇರೆಮಾತು. ಆದರೆ ಯಾವುದಾದರೂ ಕೆಲಸ ಮಾಡಬೇಕೆಂದು ಇಷ್ಟಪಡುವವರಿಗೆ ಸಣ್ಣ ಕೆಲಸ ಕೊಡುವುದು ಒಳ್ಳೆಯದು. ಅದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಆರ್. ಕರಿಸಿದ್ದಪ್ಪ.—ಹಾಗಾದರೆ ಕಂಟ್ರಾಕ್ಟರುಗಳ ರಿಜಿಸ್ಟ್ರೇಷನ್ ತೆಗೆದು ಹಾಕಬೇಕೆಂಬುದು ತಮ್ಮ ಅಭಿಪ್ರಾಯವೆ ?

ಶ್ರೀ ಕೆ. ಎಚ್. ವೆಂಕಟರೆಡ್ಡಿ.— ತೆಗೆದುಬಿಟ್ಟರೆ ಬಹಳ ಒಳ್ಳೆಯದು. ಏಕೆಂದರೆ ರಿಜಿಸ್ಟ್ರೇಷನ್‌ನಲ್ಲಿ ವಶೀಲಿಬಾಜಿ ಕೆಲಸ ನಡೆಯುತ್ತಿದೆ. ಆದರೆ ಸರ್ಕಾರ ತೆಗೆಯಲು ಒಪ್ಪುತ್ತಿಲ್ಲ. ಆದುದರಿಂದ ಈಗ ನದ್ಯಕ್ಕೆ ನಾನು ಹೇಳಿದಂತೆ ಮಾಡಿದರೆ ರೈತರಿಗೆ ಮತ್ತು ಬಡವರಿಗೆ ಸ್ವಲ್ಪ ಅನುಕೂಲವಾಗುತ್ತದೆ. ಹಾಗೆ ಮಾಡಬೇಕು ಎಂದು ಸಲಹೆ ಮಾಡುತ್ತೇನೆ.

ಇನ್ನು ವಿದ್ಯುಚ್ಛಕ್ತಿ ವಿಚಾರ ಹೇಳುವುದಾದರೆ ಹೋದ ವರ್ಷ ಬೇಕಾದಷ್ಟು ನೀರಾವರಿ ಬಾವಿಗಳಿಗೆ ಹಣ ಕೊಟ್ಟರು, ಬೇಕಾದಷ್ಟು ಬಾವಿಗಳನ್ನು ದೇಶದಲ್ಲಿ ಮಾಡಿದರು. ಆದರೂ ಕೂಡ ಇದರಿಂದ ಹೆಚ್ಚಿನ ಅನುಕೂಲ ಪಡೆಯುವುದಕ್ಕೆ ಈಗ ಸಾಧ್ಯವಾಗುತ್ತಿಲ್ಲ. ಏಕೆಂದರೆ ವಿದ್ಯುಚ್ಛಕ್ತಿ ಪಂಪ್‌ಸೆಟ್ಸ್ ಒದಗಿಸುತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿ 180 ಬಾವಿಗಳಿಗೆ ಹಣ ಕೊಟ್ಟಿರುವುದರಲ್ಲಿ ಈಗ 140 ಅಥವಾ 150 ಬಾವಿಗಳ ಕೆಲಸವಾಗಿದೆ. ಆದರೆ ವ್ಯವಸಾಯಕ್ಕೆ ಕರೆಂಟ್ ಒದಗಿಸಬೇಕಾಗಿದೆ. ಗೌರಿಬಿದನೂರು ತಾಲ್ಲೂಕು ಲಿಫ್ಟ್ ಇರಿಗೇಷನ್‌ಗೆ ಪ್ರಖ್ಯಾತಿ ಪಡೆದಿದೆ. ಅಂಥ ತಾಲ್ಲೂಕಿನಲ್ಲಿ ಕರೆಂಟ್ ಇಲ್ಲದೆ ಬಹಳ ತೊಂದರೆಯಾಗಿದೆ. ಕರೆಂಟ್ ಒದಗಿಸ ಬೇಕೆಂದು ಕೇಳಿದರೆ ಪೋಲ್ಸ್ ಇಲ್ಲ, ವೈರ್ ಇಲ್ಲ, ಸ್ವಲ್ಪ ನಿಧಾನ ಮಾಡಿ ಎಂದು ಹೇಳುತ್ತಾರೆ.

4-30 P.M.

ನೀವು ಈ ಕೂಡಲೇ ಏನಾದರೂ ಮಾಡಿ ಕೊಟ್ಟರೆ ಅನುಕೂಲವಾಗುತ್ತದೆ. 150 ಬಾವಿ ಗಳನ್ನು ಅಲ್ಲಿ ತೆಗೆಸಿರುವುದರಲ್ಲಿ 120 ಬಾವಿಗಳಿಗೆ ಮಾತ್ರ ಈಗ ವಿದ್ಯುಚ್ಛಕ್ತಿ ಕೊಟ್ಟಿದ್ದಾರೆ. ಮಿಕ್ಕಿದ್ದಕ್ಕೂ ಕೊಟ್ಟು ಸರ್ಕಾರದವರು ರೈತಾಪಿ ಜನಗಳಿಗೆ ಉಪಕಾರ ಮಾಡಿದ ಪುಣ್ಯಕ್ಕೆ ಭಾಗಿಗಳಾಗಬೇಕೆಂದು ಹೇಳುತ್ತೇನೆ. ಸರ್ಕಾರದವರು ಕೊಟ್ಟ ದುಡ್ಡಿಗೆ ಪ್ರತಿಫಲ ಬಂದಂತಾಗುತ್ತದೆಂದು ಹೇಳುತ್ತೇನೆ.

†ಶ್ರೀ ಬಿ. ರಾಚಯ್ಯ.—ಮಾನ್ಯ ಸಭಾಪತಿಗಳೇ, ಸಭೆಯ ಮುಂದಿರತಕ್ಕ ಈ ಡಿಮ್ಯಾಂಡನ್ನು ಅನುಮೋದಿಸುತ್ತಾ ಸಿವಿಲ್ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಕೆಲವು ವಿಷಯಗಳನ್ನು ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಸುಮಾರು ಸಂಸ್ಥಾನದ 2/3 ಭಾಗದಷ್ಟು ಹಣವನ್ನು ಈ ಇಲಾಖೆಯಲ್ಲಿ ಖರ್ಚು ಮಾಡಬೇಕೆಂದು ಉದ್ದೇಶಿಸಿದ್ದರೂ, ಒಂದೇ ದಿವಸದಲ್ಲಿ ಇದರ ಚರ್ಚೆಯನ್ನು ಪೂರೈಸಬೇಕೆಂದು ನಿರ್ಧಾರ ಮಾಡಿರುವುದನ್ನು ನೋಡಿದರೆ, ಇದರ ಕಡೆಗೆ ತಾವು ಹೆಚ್ಚು ಗಮನ ಕೊಡುತ್ತಿಲ್ಲವೋ ಏನೋ ಎಂದು ನಾನು ಹೇಳಬೇಕಾಗಿದೆ.

ಈ ಬಗ್ಗೆ ಈ ವರ್ಷದ ಆಯವ್ಯಯದ ಅಂದಾಜಿನಲ್ಲಿ ಬಹುಭಾಗವನ್ನು ದೊಡ್ಡ ನೀರಾವರೀ ಕಾಮಗಾರಿಗಳಿಗೆ, ಮಿಕ್ಕದ್ದನ್ನು ಸಣ್ಣ ನೀರಾವರಿ ಮತ್ತು ಮಾಡಿಯಂ ಸೈಸ್ಡ್ ಕಾಮಗಾರಿಗಳಿಗೆಂದು ಎಂಗಡಿಸಿಕೊಂಡಿದ್ದಾರೆ. ಇದರಲ್ಲೂ ಸಹ, ಯಾವುದು ಲಾಭದಾಯಕ ವಾಗಿದೆ, ಯಾವುದು ಲಾಭದಾಯಕವಾಗಿಲ್ಲವೆಂಬುದನ್ನು ನೋಡಿ ಸೇರಿಸಿಕೊಂಡು ಇಷ್ಟಿಷ್ಟು ಮೊಬಲಗು ಖರ್ಚು ಮಾಡಬೇಕೆಂದು ಇಟ್ಟಿದ್ದೀರಿ.

ನಾನು ಈ ಸಂದರ್ಭದಲ್ಲಿ, ದೊಡ್ಡ ದೊಡ್ಡ ಕಾಮಗಾರಿಗಳ ಕಡೆಗೆ ಗಮನ ಕೊಡುವುದು ಅತ್ಯಾವಶ್ಯಕವೆಂದು ಹೇಳಬಯಸುತ್ತೇನೆ. ಇದರಿಂದ ದೇಶದಲ್ಲಿ ವಿದ್ಯುದುತ್ಪಾದನೆ ಜಾಸ್ತಿ ಮಾಡುವುದಕ್ಕೇ ಅಲ್ಲದೆ, ಕೈಗಾರಿಕೆ, ವ್ಯವಸಾಯ ಮುಂತಾದುವುಗಳನ್ನು ಕೂಡ ಅಭಿವೃದ್ಧಿ

ಮಾಡುವುದಕ್ಕೆ ಅವಕಾಶವಾದಂತಾಗುತ್ತದೆ. ಈ ದೃಷ್ಟಿಯಿಂದ ಶರಾವತಿ ವ್ಯಾಲಿ ಪ್ರಾಜೆಕ್ಟನ್ನು ತೆಗೆದುಕೊಂಡು ಅತಿ ಶೀಘ್ರದಲ್ಲಿಯೇ ಪೂರೈಸಿ ವಿದ್ಯುಚ್ಛಕ್ತಿ ಮತ್ತು ನೀರಾವರಿ ಸೌಲಭ್ಯಗಳನ್ನು ಬೇಗ ದೊರೆಯುವಂತೆ ಮಾಡಬೇಕೆಂದು ಹೇಳುತ್ತೇನೆ. ಅದರಂತೆಯೇ ಕಾಳೀನದಿಯ ಯೋಜನೆಯನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಂಡು ಪೂರೈಸುವುದಾದರೆ, ನಮ್ಮ ಸಂಸ್ಥಾನದ ವಿದ್ಯುಚ್ಛಕ್ತಿಯ ಅವಶ್ಯಕತೆ ಪೂರೈಸಿದಂತಾಗುತ್ತದೆಂದು ಹೇಳುತ್ತೇನೆ.

ಆಮೇಲೆ, ನನ್ನ ಹಿಂದೆ ಮಾತನಾಡಿದ ಮಾನ್ಯ ಸದಸ್ಯರಾದ ವೀರಪ್ಪನವರು ಮತ್ತು ಮಂಜಯ್ಯಶೆಟ್ಟರು ಹೇಳಿದ ಹಾಗೆ, ಕಾವೇರಿ ಬೇಸಿನ್‌ನಲ್ಲಿ 192 ರ ಒಪ್ಪಂದದ ಪ್ರಕಾರ 1974ನೆಯ ಇಸವಿಯ ಒಳಗೆ ಕಾವೇರಿಯ ಉಪನದಿಗಳಿಂದ ಎಷ್ಟರಮಟ್ಟಿಗೆ ಉಪಯೋಗ ಪಡೆಯಬೇಕೋ ಅಷ್ಟನ್ನೂ ಪಡೆಯಬೇಕೆಂದಿದ್ದರೂ ನಾವು ಅಷ್ಟಾಗಿ ಉಪಯೋಗಿಸಿಕೊಂಡಿಲ್ಲವೆನ್ನಬಹುದು. ಏಕೆಂದರೆ, ಕಂಬದಕಡ, ಹಾರಂಗಿ, ಈ ಪ್ರಾಜೆಕ್ಟನ್ನು ಇದುವರೆಗಾಗಲೇ ನೀವು ಮಾಡಬೇಕಾಗಿತ್ತು. ಇನ್ನಾದರೂ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಬೇಕೆಂದು ಹೇಳುತ್ತೇವೆ. ಆಮೇಲೆ ಸುವರ್ಣಾವತಿ ಯೋಜನೆ ಬೇರೆ ಇದೆ. ಚಾಮರಾಜನಗರ, ಯಳಂದೂರಿನಲ್ಲಿ ಹರಿದುಹೋಗುವ ಈ ನದಿಯ ಪ್ರಾಜೆಕ್ಟನ್ನು ತಯಾರಿಸಿದ್ದರೂ, ಹಣವಿಲ್ಲದೆ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿಲ್ಲದಿರುವುದು ವಿಷಾದಕರ. ಯಾವ ಪ್ರದೇಶ ಸಾಮಾನ್ಯವಾಗಿ ಕ್ಷಾಮಕ್ಕೆ ತುತ್ತಾಗುತ್ತಿರುತ್ತದೋ, ಅಲ್ಲಿ ಪ್ರಾಜೆಕ್ಟುಗಳನ್ನು ಲಾಭದಾಯಕವಾಗಿಲ್ಲದಿದ್ದರೂ ತೆಗೆದುಕೊಂಡು, ಆ ಜನರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲಿಕ್ಕೆ ಅವಕಾಶ ಮಾಡಿಕೊಡಬೇಕೆಂಬುದು ನ್ಯಾಯ. ಈ ದೃಷ್ಟಿಯಿಂದ ಈಗಲೂ ಸುವರ್ಣಾವತಿ ಯೋಜನೆಯನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ ಆ ಭಾಗವನ್ನು ಅಭಿವೃದ್ಧಿಪಡಿಸಬೇಕೆಂದು ಹೇಳುತ್ತೇನೆ.

ಆಮೇಲೆ, ಚಿಕ್ಕಹೊಳೆ ಪ್ರಾಜೆಕ್ಟ್ (ನಮ್ಮ ತಾಲ್ಲೂಕಿನಲ್ಲಿರುವುದು). ಇದು ಎರಡನೆಯ ಹಾಗೂ ಒಂದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲ್ಪಟ್ಟು 46 ಲಕ್ಷ ರೂಪಾಯಿಗಳನ್ನು ಕೊಡಲಾಗಿದ್ದರೂ ಕೇವಲ ಆರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಮಾನ್ಯ ಸಚಿವರನ್ನು ಕೇಳಿದ್ದಕ್ಕೆ 1962ನೆಯ ಇಸವಿಯಲ್ಲಿ ಖಂಡಿತ ಪೂರೈಸುತ್ತಾರೆಂದು ಹೇಳಿದರು. ಆದರೆ ಈಗ ಅಲ್ಲಿ ನಡೆಯುತ್ತಿರುವ ಕೆಲಸದ ಧೋರಣೆಯನ್ನು ನೋಡಿದರೆ, ಇದು ಅಷ್ಟು ಹೊತ್ತಿಗೆ ಪೂರೈಸುವುದಕ್ಕಾಗುವುದಿಲ್ಲವೆಂದು ಕಾಣುತ್ತೆ.

ಇನ್ನು ಕೆರೆಗಳ ವಿಷಯ. ತಾವು ಯಾವುದೇ ಹೊಸ ಕೆರೆಗಳನ್ನು ಕೈಕೊಳ್ಳಬೇಕಾಗಿರಲಿ, ಅಥವಾ ಹಣ್ಣ ಕೆರೆಗಳನ್ನು ಕೈಕೊಳ್ಳಬೇಕಾಗಿರಲಿ, ಮೊದಲೇ Valleywise ಆಗಿ ಒಂದು ಯೋಜನೆಯನ್ನು ತಯಾರು ಮಾಡುವುದನ್ನು ಏರ್ಪಾಡು ಮಾಡಬೇಕು. ನಮ್ಮ ದೇಶದಲ್ಲಿ ಇರತಕ್ಕ ನೀರನ್ನೇ ಎಷ್ಟೋ ಮಟ್ಟಿಗೆ ಹೆಚ್ಚು ಉಪಯೋಗವಾಗುವಂತೆ ಮಾಡುವುದಕ್ಕೆ ಅವಕಾಶವಿದೆ. ಈ ದೃಷ್ಟಿಯಿಂದ ಈ ಕೆರೆ ಕಾಮಗಾರಿಗಳನ್ನು ತೆಗೆದುಕೊಳ್ಳುವ ಮುನ್ನ Valleywise ಆಗಿ Investigation ನಡೆಸಬೇಕೆಂದು ಹೇಳುತ್ತೇನೆ.

ಹೊಸ ಪ್ರಾಜೆಕ್ಟುಗಳನ್ನು ಕಟ್ಟುವ ಸಂದರ್ಭದಲ್ಲಿ ನನ್ನದೊಂದು ಸೂಚನೆ. ಕೆಲವು ಕಡೆ ಹೊಸ ಕೆರೆಗಳನ್ನು ಕಟ್ಟುವಾಗ ಟೆಂಡರು ಕರೆದು, ಕೆಲಸ ಶುರುವಾದ ಮೇಲೆ ಸೈಟುಗಳನ್ನು ಬದಲಾವಣೆ ಮಾಡಿಬಿಡುತ್ತಾರೆ. ಏನೇ ಆಗಲಿ, ಟೆಂಡರು ಕರೆಯುವ ಮುಂಚೆಯೇ ಸೈಟನ್ನು ಕರಾರುವಾಕ್ಕಾಗಿ ನಿಗದಿ ಮಾಡಬೇಕು. ಅದನ್ನು ಬದಲಾವಣೆಯೇ ಮಾಡಕೂಡದು. ಈ ರೀತಿ ಮಾಡಿದರೆ ಕಾಲವಿಳಂಬವಾಗಿ ಪ್ರಾಜೆಕ್ಟ್ ಖರ್ಚೂ ಹೆಚ್ಚುತ್ತದೆ ಮತ್ತು ನಿಗದಿಯಾದ ಕಾಲದಲ್ಲಿ ಕೆಲಸ ಪೂರೈಸುವುದಿಲ್ಲ. ಈ ದೃಷ್ಟಿಯಿಂದ ಯಾವ ಕೆರೆಯನ್ನು ಕಟ್ಟುವುದಾಗಲೀ, ಕಾಲುವೆ ಮಾಡುವುದಾಗಲೀ, ಮೊದಲೇ ಸರಿಯಾಗಿ ತನಿಖೆ ಮಾಡಿ ಪ್ರಾಜೆಕ್ಟ್ ತಯಾರಿಸಬೇಕು. ಮತ್ತು

(ಶ್ರೀ ಬಿ. ರಾಚಯ್ಯ)

ಮುಳುಗಡೆ ಪ್ರದೇಶವೆಷ್ಟು ಎಂಬುದನ್ನು ನಿರ್ಧರಿಸಿ ಪರಿಹಾರವನ್ನು ಮೊದಲೇ ಹೇಳಬೇಕು. ಈಗಲೂ ಕೂಡ ಕೃಷ್ಣರಾಜಸಾಗರದ ಕೆಳಗಿನ ಜನರಿಗೆ ಪರಿಹಾರ ಸಂದಾಯವಾಗಿಲ್ಲವೆಂದು ಕೇಳಿ ತಿಳಿದಿದ್ದೇನೆ. ಇದನ್ನು ಮಾಡದೆ ಇದ್ದರೆ, ಜನರು ನೊಂದ ಮನಸ್ಸಿನಿಂದ ಜೀವನ ನಡೆಸುತ್ತಿರುತ್ತಾರೆ. ಆದ್ದರಿಂದ ಮುಳುಗಡೆಯಾಗುವುದಿದ್ದರೆ, ಆ ಜನರಿಗೆ ಮೊದಲು ಪರಿಹಾರ ಕೊಟ್ಟು, ಅವರ ಪುನರ್ವ್ಯವಸ್ಥೆಯ ಕಡೆಗೆ ಪ್ರಥಮತಃ ಗಮನ ಕೊಡಬೇಕು. ಈ ಪ್ರಕಾರ ದೊಡ್ಡ ಪ್ರಾಜೆಕ್ಟ್‌ಗಳ ಸಂದರ್ಭದಲ್ಲಿ ಮಾಡುವ ಹಾಗೆ ಸಣ್ಣ ಪುಟ್ಟ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳುವಾಗಲೂ ಅದೇ ಕ್ರಮವನ್ನು ಅನುಸರಿಸಬೇಕೆಂದು ಹೇಳುತ್ತೇನೆ.

ಇನ್ನೊಂದು ಸಲಹೆ. ತಾವು ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ಕಟ್ಟಿ ನೀರನ್ನೇನೋ ಒದಗಿಸುವುದಕ್ಕೆ ಏರ್ಪಾಡು ಮಾಡುತ್ತೀರಿ. ಆದರೂ ವಾಸ್ತವವಾಗಿ ರೈತರು ಅದರ ಅನುಕೂಲವನ್ನು ಪಡೆದುಕೊಳ್ಳುವುದು ಬಹಳ ಸಾವಕಾಶವಾಗುತ್ತದೆ. ಆತನು ತನ್ನ ಖುಷ್ಕಿ ಜಮೀನನ್ನು ಮಟ್ಟಮಾಡಿಕೊಂಡು ಸರಿಪಡಿಸಿಕೊಳ್ಳುವುದಕ್ಕೆ ಬಹಳ ಕಾಲ ಹಿಡಿಯುತ್ತದೆ. ಆ ಕಾಲದವರೆಗೂ ಅನೇಕ ಸಂದರ್ಭಗಳಲ್ಲಿ ನೀರು ಸುಮ್ಮನೆ ವ್ಯಯವಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ.

ಈಗ ನಮ್ಮ ಜಿಲ್ಲೆಗಳಲ್ಲಿ ನೋಡುವುದಾದರೆ ನುಗು ಪ್ರಾಜೆಕ್ಟಿನಲ್ಲಿ ನೀರನ್ನು ಕೊಡುತ್ತಿದ್ದೀರಿ. ಆದರೆ ಜಾಗ್ರತೆ ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ತಯಾರಾಗಿಲ್ಲ. ಆ ಪರಿಸ್ಥಿತಿಯಲ್ಲಿ ಭೂಮಿಯನ್ನು ಮಟ್ಟ ಮಾಡಬೇಕೆಂದು ನೀವು ನಿಗದಿಮಾಡಿಕೊಳ್ಳುವಂತಹ ಕಾಲದಲ್ಲಿ ನೀರನ್ನು ಅವರು ಉಪಯೋಗಿಸಿಕೊಳ್ಳುವುದಕ್ಕಾಗುವುದಿಲ್ಲ. ಈ ದೃಷ್ಟಿಯಿಂದ ಎಷ್ಟು ವರ್ಷಗಳಲ್ಲಿ ಯಾವ ಕಾಲದಲ್ಲಿ ನೀರನ್ನು ಒದಗಿಸುವುದಕ್ಕೆ ಸಾಧ್ಯ ಎಂಬುದನ್ನು ಆಯಾಪ್ರಾಂತದ ರೈತರಿಗೆ ಮುನ್ಸೂಚನೆಯನ್ನು ಕೊಡಬೇಕೆಂದು ನಾನು ನಿವೇದಿಸಿಕೊಳ್ಳುತ್ತೇನೆ.

ಇನ್ನು ಕಂಟ್ರಾಕ್ಟುಗಳನ್ನು ಕೊಡುವ ವಿಷಯದಲ್ಲಿ ಈಗ ಸರ್ಕಾರದವರು ಒಂದು, ಎರಡು, ಮೂರು, ನಾಲ್ಕನೇ ದರ್ಜೆಯೆಂದು ಮಾಡಿರುವ ಉದ್ದೇಶ ಎಲ್ಲ ಕೆಲಸಗಳು ಚುರುಕಾಗಿ ನಡೆಯಲಿ ಎಂದು ಮಾಡಿದ್ದಾರೆ. ಆದರೆ ಇದರಿಂದ ಏನಾಗುತ್ತದೆಂದರೆ ದೇಶದಲ್ಲಿ ಆ ಒಂದು ಟೆಂಪೊ ಜಾಸ್ತಿಯಾಗಿದೆ. ಪ್ರತಿವರ್ಷವೂ ಈಚೀಚೆಗೆ ಸಿವಿಲ್ ಕಾಮಗಾರಿಗಳು ಅದಕ್ಕೆ ಸಂಬಂಧಪಟ್ಟ ಇತರೇ ಕೆಲಸಕಾರ್ಯಗಳು ದಿನೇದಿನೇ ಹೆಚ್ಚಾಗುತ್ತಿವೆ. ಈಗ ಇರತಕ್ಕ ಕೆಲಸ ಕಾರ್ಯಗಳ ಬಗ್ಗೆ ಕೆಲವೇ ಜನ ಮನಾಪಲಿ ಮಾಡಿಕೊಂಡಿದ್ದಾರೆ. 'ಎ' ಕ್ಲಾಸ್ ಕಂಟ್ರಾಕ್ಟರ್ಸ್ ಕೆಲವು ಕಂಟ್ರಾಕ್ಟ್‌ಗಳನ್ನು ತೆಗೆದುಕೊಂಡು ಸಬ್ ಕಂಟ್ರಾಕ್ಟ್ ಮಾಡುವುದರ ವಿಷಯದಲ್ಲಿ ಎಷ್ಟೋಸಾರಿ ಈ ಅಸೆಂಬ್ಲಿಯಲ್ಲಿಯೇ ನಿದರ್ಶನಗಳು ಬಂದಿರುವುದನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಈ ದೃಷ್ಟಿಯಿಂದ ಸಣ್ಣಪುಟ್ಟ ಕಂಟ್ರಾಕ್ಟರ್ಸ್ ದೊಡ್ಡದೊಡ್ಡ ಕಾಮಗಾರಿಗಳಿಗೆ ಟೆಂಡರ್ ಕರೆಯುವಾಗ ಅದನ್ನು ಬ್ರೇಕಪ್ ಮಾಡುತ್ತಾರೆ. ಆದರೆ ಸಣ್ಣ ಪುಟ್ಟ ಅನುಭವ ಕಂಟ್ರಾಕ್ಟರ್ಸ್ ಮಾತ್ರ ಕೆಲವು ವೇಳೆ ಆ ಕಾಮಗಾರಿಗಳನ್ನು ತೆಗೆದುಕೊಂಡು ನಿಗದಿಯಾದ ಕಾಲದಲ್ಲಿ ನಿಮ್ಮ ನಿರೀಕ್ಷಣೆಗೆ ಮೊದಲೇ ಕೆಲಸಮಾಡಿ ಕೊಡುತ್ತಾರೆ. ಅಂತಹವರೂ ಸಹ ಈಗ ಇದ್ದಾರೆ. ಸರ್ಕಾರದವರು ಹೀಗೆ ಮಾಡುವುದರಿಂದ ಕೆಲವೇ ಜನರ ಕೈಯಲ್ಲಿ ಮಾತ್ರ ಹಣ ಕೇಂದ್ರೀಕೃತವಾಗುವುದಕ್ಕೆ ಅವಕಾಶಮಾಡಿ ಕೊಡುತ್ತಿದ್ದಾರೆ. ಇದರಿಂದ ಕೆಲವರು ಜವಾಬ್ದಾರಿ ಇಲ್ಲದೆ ಸುಮ್ಮನೆ ಲಾಭಪಡೆಯುತ್ತಿದ್ದಾರೆಂದು ನಾನು ತಿಳಿಸುತ್ತೇನೆ. ಕೆಲವು ಸಂದರ್ಭಗಳಲ್ಲಿ ಒಬ್ಬೊಬ್ಬ ಕಂಟ್ರಾಕ್ಟ್‌ದಾರನೇ ನಿಂತು ಕೆಲಸಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ, ಸೊಸೈಟಿಗಳಿಗಾದರೂ ಉತ್ತೇಜನವನ್ನು ಕೊಡಬೇಕು. ಆದ್ದರಿಂದ ಯಾರ್ಯಾರಿಗೆ ತಾಂತ್ರಿಕ ನೆರವು ಬೇಕೋ ಅವರಿಗೆ ಆ ನೆರವನ್ನು ಕೊಡಬೇಕು. ಅವರಿಗೆ ಇರತಕ್ಕ ಹಣದ ಕೊರತೆಯನ್ನು ನೀವೇ ನೋಡಿ ಅಂತಹವರಿಗೆ ಹಣಸಹಾಯವನ್ನೊದಗಿಸಬೇಕು. ಅನುಭವವುಳ್ಳ ಸಣ್ಣಪುಟ್ಟ ಕಂಟ್ರಾಕ್ಟರುಗಳು ತಮ್ಮ ಆರ್ಥಿಕಮುಗ್ಗಟ್ಟನ್ನು ನೀಗಿಸುವುದಕ್ಕೆ ಇದರಿಂದ ಹೆಚ್ಚು ಅವಕಾಶವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಇನ್ನು ಬಿಲ್ಡಿಂಗುಗಳ ವಿಚಾರವಾಗಿ ಹೇಳುವುದಾದರೆ ಇನ್ನೆಷ್ಟುಸಾರಿ ಎಸ್ಟಿಮೇಟ್ಸ್ ರಿವೈಸ್ ಆಗಬೇಕೋ ನಾನು ಹೇಳುವುದಕ್ಕಾಗುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಈ ರೀತಿ ಆಗಿರುವುದು ಎಲ್ಲರಿಗೂ ಗೊತ್ತಿದೆ. ನನ್ನದೇ ಒಂದು ಉದಾಹರಣೆಯನ್ನು ಹೇಳುವುದಾದರೆ 1957ನೇ ಇಸವಿಯಲ್ಲಿ ಕಟ್ಟಲಿಕ್ಕೆ ಷುರುವಾದ ಹಾಸ್ಟಲ್ ಇನ್ನೂ ಅರ್ಧದಲ್ಲಿಯೇ ಉಳಿದಿದೆ.

Sri C. M. ARUMUGHAM.—I think it is a very big hostel.

ಶ್ರೀ ಬಿ. ರಾಚಯ್ಯ.—ಅದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಒಂದುಸಾರಿ ಇಲಾಖೆಯಲ್ಲಿ ಗೌರ್ನ್‌ಮೆಂಟ್ ಆರ್ಕಿಟೆಕ್ಟ್‌ನಿಂದ ಅಪ್ರೂವ್ ಆಗಿ ಬಂದಿರತಕ್ಕ ಒಂದು ಡಿಸೈನ್ ಕೊಟ್ಟ ಮೇಲೆ ಅದರ ಪ್ರಕಾರ ಎಗ್ಸಿಕ್ಯೂಟ್ ಮಾಡತಕ್ಕದ್ದು ಸ್ಥಳೀಯ ಅಧಿಕಾರಿಗಳಿಗೆ ಸಂಬಂಧಪಟ್ಟದ್ದು. ಆದ್ದರಿಂದ ಅವರು ಒಂದು ತೀರ್ಮಾನವನ್ನು ಆ ಬಗ್ಗೆ ತೆಗೆದುಕೊಂಡು (ಅನಂತರ) ಸರ್ಕಾರದವರೂ ಸಹ ಒಂದು ತೀರ್ಮಾನವನ್ನು ತೆಗೆದುಕೊಂಡು ಮಂಜೂರಾತಿ ಕೊಟ್ಟಮೇಲೆ ಪುನಃ ಅದು ಹಾಗಲ್ಲ, ಹೀಗಿರಬೇಕು, ಹಾಗಿರಬೇಕು ಎಂದು ಬದಲಾವಣೆ ಮಾಡುತ್ತಾ ರಿವೈಜ್ಡ್ ಎಸ್ಟಿಮೇಟ್ ಕಳುಹಿಸುವುದು ಸರಿಯೇ ಅದು ತಪ್ಪು. ಇನ್ನು ಚಾಮರಾಜನಗರ ಹರಿಜನ ವಿದ್ಯಾರ್ಥಿನಿಲಯ ಕಟ್ಟಡಕ್ಕಾಗಿ ಬ್ರಿಕ್ಸ್ ಮತ್ತು ಗಾರೆ ಇತ್ಯಾದಿಗಳನ್ನು ಜಾಗ್ರತೆ ಸಪ್ಲೈಮಾಡಬೇಕು. ಮತ್ತು ಅ ಕಟ್ಟಡವನ್ನು ಈಗ ಸ್ವಲ್ಪ ಬದಲಾವಣೆ ಮಾಡಬೇಕು ಎಂದು ಕೇಳಿದರೆ ಅದು ಸಾಧ್ಯವಿಲ್ಲ ವೆಂದು ಹೇಳಿದರು.

Sri C. M. ARUMUGHAM.—Last time during his speech on the budget he said something about the Minister for Social Welfare for having issued a stay order. Now he is attacking the poor local officials.

ಶ್ರೀ ಬಿ. ರಾಚಯ್ಯ.— ಇನ್ನು ಹಾಸ್ಟಲಿಗೆ ಆರ್. ಸಿ. ಸಿ. ರೂಫಿಂಗ್ ಹಾಕಬೇಕು, ಮಂಗಳೂರು ಟೈಲ್ಸ್ ಹಾಕಬೇಕು ಎಂದು ಕೇಳಿದಾಗ ಒಂದು ಜನರಲ್ ಸರ್ಕ್ಯುಲರ್ ಆಗಿದೆ. ಹಿಂದೆ ಅಪ್ರೂವ್ ಆದ ಮೇಲೆ ಒಂದು ಸಾರಿ ಈ ಬಗ್ಗೆ ಟೆಂಡರ್ ಸಹ ಕೊಟ್ಟಿತ್ತು ಎಂದು ಹೇಳಿದರು.

Sri H. M. CHANNABASAPPA.—With your permission, if he yields, I may inform the Honourable Member that Government have passed orders to put only cement concrete roofing.

ಶ್ರೀ ಬಿ. ರಾಚಯ್ಯ.—ಆಗಾಗ್ಗೆ ಈ ಬಗ್ಗೆ ಈ ರೀತಿ ಬದಲಾವಣೆಯಾಗುತ್ತಿರುವುದರಿಂದ ಈ ಕೆಲಸ ಇಷ್ಟು ನಿಧಾನವಾಗುತ್ತಿದೆಯೆಂದು ನಾನು ಹೇಳುತ್ತಿದ್ದೇನೆಯೇ ಹೊರ್ತು ಮತ್ತೇನು ಇಲ್ಲ. ಈ ಬಗ್ಗೆ ಮಾನ್ಯ ಸಚಿವರಿಗೆ ವರ್ಣನೆ ಕೊಡುತ್ತಿದ್ದೇನೆ.

ಇನ್ನು ರಸ್ತೆಸಾರಿಗೆ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಕೆಲವು ಗ್ರಾಮಾಂತರ ರಸ್ತೆಗಳನ್ನು ನ್ಯಾಷನಲ್ ಹೈವೇರೋಡ್‌ಗಳನ್ನಾಗಿಯೂ, ಮತ್ತು ಸ್ಟೇಟ್ ಫಂಡ್‌ರೋಡ್‌ಗಳನ್ನಾಗಿಯೂ ಮಾಡಬೇಕಾಗಿದೆ. ಈಗ ಸರ್ಕಾರದವರು ಏಳು ಸಾವಿರ ಮೈಲಿಗಳಷ್ಟು ರಸ್ತೆಯನ್ನು ಉಚ್ಚ ರಸ್ತೆಯನ್ನಾಗಿ ಮಾಡಬೇಕೆಂದು ನಿರ್ಣಯಿಸಿದ ಮೇಲೆ ಸಂಬಂಧಪಟ್ಟ ಇಲಾಖೆಯವರು ರಸ್ತೆಯ ದುರಸ್ತು ಕೆಲಸವನ್ನು ಜಾಗ್ರತೆಯಾಗಿ ತೆಗೆದು ಕೊಂಡಿರುವುದು ಬಹಳ ಸ್ವಾಗತಾರ್ಹವಾದ ವಿಷಯವಾಗಿದೆ. ಆದರೆ ಅವರು ಈ ಬಾಬಿಗೆ ಒದಗಿಸಿರುವ ಹಣವನ್ನು ನೋಡಿದರೆ, ರಸ್ತೆಗಳನ್ನು ರಿಪೇರಿಮಾಡುವುದಕ್ಕೆ ಖಂಡಿತವಾಗಿ ಆ ಮೊಬಲಗಿನಿಂದ ಆಗುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಅದರಲ್ಲೂ ಕೂಡ ಕೆಲವು ಕಡೆ ಸುಮಾರು 50 ಮೈಲಿಗಳಷ್ಟು ಹೊಸರಸ್ತೆಗಳನ್ನು ಬೇರೆ ನಿರ್ಮಾಣ ಮಾಡಬೇಕು. ಹಳೆಯ ರಸ್ತೆಗಳನ್ನು ದುರಸ್ತು ಮಾಡಬೇಕು ಮತ್ತು ಹೊಸ ರಸ್ತೆಗಳನ್ನು ನಿರ್ಮಾಣಮಾಡಬೇಕು. Re-conditioning of the roads and formation of naw roads ಎಂದು ನಿಗದಿಮಾಡಿದ್ದಾರೆ. ಇನ್ನೊಂದು ವಿಷಯ ಎಲ್ಲಿ ಪ್ರಾಮುಖ್ಯವಾಗಿದೆಯೋ ಅಂತಹಕಡೆ ರಸ್ತೆಯ ಕೆಲಸವನ್ನು ತೆಗೆದು ಕೊಂಡಿಲ್ಲ. ಈ ದೃಷ್ಟಿಯಿಂದ ಸರ್ಕಾರದವರು ಆ ಬಾಬಿಗೆ ಹೆಚ್ಚಿಗೆ ಹಣವನ್ನೊದಗಿಸಿಕೊಟ್ಟು ಗ್ರಾಮಾಂತರ ರಸ್ತೆಗಳು ಬೇಗ ರಿಪೇರಿಯಾಗುವಂತೆ ವ್ಯವಸ್ಥೆ ಜನಗಳ ಸೌಕರ್ಯಕ್ಕೆ

(ಶ್ರೀ ಬಿ. ರಾಚಯ್ಯ)
ಅವಕಾಶಮಾಡಿಕೊಡಬೇಕು. ಈ ಗ್ರಾಮಾಂತರ ರಸ್ತೆಗಳನ್ನು ಸ್ಟೇಟ್ ಫಂಡ್‌ರೋಡ್ ನ್ಯಾಷನಲ್ ಹೈವೇ ರೋಡ್‌ಗಳನ್ನಾಗಿ ಮಾಡಬೇಕಾದರೆ ಅದರಲ್ಲೂ ಏಳು ಸಾವಿರ ಮೈಲಿಗಳಷ್ಟು ರಸ್ತೆ ರಿಪೇರಿ ಕೆಲಸವಾಗಲು ಐದು ವರ್ಷಗಳ ಪ್ಲಾನ್ ಇಟ್ಟುಕೊಡಿರುವುದರಿಂದ, ಅದು ಸ್ವಲ್ಪಕಾಲಹಿಡಿಯುತ್ತದೆ. ಸರ್ಕಾರದವರು ಗ್ರಾಮಾಂತರ ಪ್ರದೇಶಗಳ ಕಡೆ ಹೆಚ್ಚಿನ ಗಮನ ವನ್ನು ಕೊಡಬೇಕು. ಈಗ ಒದಗಿಸಿರುವ ಹಣ ಏನೇನು ಸಾಕಾಗುವುದಿಲ್ಲ. ಆದ್ದರಿಂದಲೇ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗಾಗಿ ಹೆಚ್ಚಿನ ಮೊಬಲಗನ್ನು ತಾವು ಬಡೆಟ್ಟಿನಲ್ಲಿ ಒದಗಿಸಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಮತ್ತೊಮ್ಮೆ ಮನವಿಯನ್ನು ಸಲ್ಲಿಸುತ್ತೇನೆ. ಇನ್ನು ವಿದ್ಯುಚ್ಛಕ್ತಿ ಸರಬರಾಯಿ ಈಗ ಬಹಳ ಕಡಮೆಯಾಗಿದೆ. ರಾತ್ರಿಕಾಲದಲ್ಲಿ, ನೀರಾವರಿ ಪಂಪು ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿದ್ದಾರೆ. ಕೆಲವು ಸಣ್ಣಪುಟ್ಟ ಕೈಗಾರಿಕೆಗಳನ್ನು ಮಾತ್ರ ರಾತ್ರಿಯ ಹೊತ್ತು ನಡೆಸುವುದಕ್ಕೆ ವ್ಯವಸ್ಥೆಮಾಡಿ, ಕೆಲವನ್ನಾದರೂ ಹಗಲಿನಲ್ಲಿ ನಡೆಸುವುದಕ್ಕೆ ಏರ್ಪಾಡುಮಾಡಬೇಕು. ಒಟ್ಟಿನಲ್ಲಿ ದೇಶಕ್ಕೆ ಅಗತ್ಯವಾಗಿ ಬೇಕಾದ ಆಹಾರ ಸಾಮಗ್ರಿಗಳನ್ನು ಬೆಳೆಯುವುದಕ್ಕೆ ರೈತರಿಗೆ ಹೆಚ್ಚಿಗೆ ನೀರಾವರಿ ಪಂಪು ಸೆಟ್ಟುಗಳಿಗೋಸ್ಕರ ವಿದ್ಯುಚ್ಛಕ್ತಿಯನ್ನು ಒದಗಿಸುವುದು ಒಳ್ಳೆಯದಾಗಿದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಕೆಲವು ಎಲೆಕ್ಟ್ರಿಕ್ ಮೆಟೀರಿಯಲ್ಸ್ ಸ್ಟಾಕ್ ಇಲ್ಲವೇಇಲ್ಲ. ಎಲೆಕ್ಟ್ರಿಕ್ ಕಂಬಗಳೇ ಇಲ್ಲ ಅದಕ್ಕೆ ಸಂಬಂದಪಟ್ಟ ಕೆಲವು ವೈರಗಳೂ ಸಹ ಸಿಕ್ಕುತಿಲ್ಲ. ಈಗಾಗಲೇ 107 ಅಂದಾಜುಗಳು ನಮ್ಮ ತಾಲ್ಲೂಕಿನಲ್ಲಿ ಮಂಜೂರು ಆಗಿದ ರೂ ಕೇವಲ 27 ಅಂದಾಜುಗಳ ಕೆಲಸ ಕಾರ್ಯಗಳನ್ನು ಮಾತ್ರಮಾಡಿದ್ದಾರೆ. ಇದರಿಂದ ರೈತರಿಗೆ ಮೂರು-ನಾಲ್ಕು ವರ್ಷಗಳಿಂದ ಬಹಳ ಕಷ್ಟವಾಗುತ್ತಿದೆ. ಒಟ್ಟಿನಲ್ಲಿ ರೈತ ತಾನು ಬೆಳೆದ ಪದಾರ್ಥಗಳಿಗೆ ಒಳ್ಳೆಯ ಬೆಲೆಸಿಗುವುದಕ್ಕೆ ತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ನಾನು ತಮ್ಮ ಮೂಲಕ ತಿಳಿಸಬಯಸುತ್ತೇನೆ. ಈಗಿನ ಯೋಜನೆಯಲ್ಲಿ ಗ್ರಾಮಾಭಿವೃದ್ಧಿಗೆ ಅಳವಡಿಸಿರತಕ್ಕ ಪ್ರತಿಯೊಂದು ಕೆಲಸವನ್ನು ಆದಷ್ಟು ಜಾಗ್ರತೆ ಪೂರೈಸಬೇಕೆಂದು ಈ ಸಂದರ್ಭದಲ್ಲಿ ನಾನು ತಿಳಿಸುತ್ತಾ ಈಗ ನಮ್ಮ ಮುಂದಿರತಕ್ಕ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ ನಾನು ಈಗಾಗಲೇ ಹೇಳಿರುವ ಕೆಲವು ಸಲಹೆಗಳನ್ನು ಖಂಡಿತವಾಗಿ ಜಾಗ್ರತೆ ಕಾರ್ಯಗತಮಾಡಬೇಕೆಂದು ಮತ್ತೊಮ್ಮೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಜಿ. ವೆಂಕಟೇಗೌಡ (ಪಾಳ್ಯಂ).—ಅಧ್ಯಕ್ಷರೆ, ಲೋಕೋಪಯೋಗಿ ಮತ್ತು ಇತರ ಶಾಖೆಗಳ ಬೇಡಿಕೆಗಳು ಮಂಜೂರಾತಿ ಪಡೆಯುವುದಕ್ಕೆ ನಮ್ಮ ಮುಂದಿವೆ. ಈಗ ಒದಗಿಸುವ ಹಣದ ಪ್ರತಿಯೊಂದು ಕಾಸೂ ಸದ್ವಿನಿಯೋಗವಾಗಬೇಕು. ಈಗ ನಾಲ್ಕು ವರ್ಷಗಳಿಂದ ಹಣ ವೆಚ್ಚಮಾಡಿರುವದರಲ್ಲಿ, ಅದು ಸದ್ವಿನಿಯೋಗದೆ ಇರತಕ್ಕಂಥ ಕೆಲವು ನಿದರ್ಶನಗಳಿವೆ. ಎಲ್ಲಿ ವೇಸ್ಟ್ ಆಫ್ ಎಕ್ಸ್‌ಪೆಂಡಿಚರ್ ಅವಾಯಿಡ್ ಮಾಡಹುದೇ ಅಲ್ಲಿ ಆದಷ್ಟು ಮಟ್ಟಿಗೆ ಮಾಡಿ, ಉಳಿಯುವ ಹಣವನ್ನು ಸದ್ವಿನಿಯೋಗ ಮಾಡಬೇಕು, ಅಂದರೆ, ಎರಡನೆಯ ಯೋಜನೆಯಲ್ಲಿ ಏನೊಂದು ಖರ್ಚುಮಾಡಿದ್ದೇವೆಯೋ ಅದಕ್ಕೆ ಅನುಗುಣವಾದಂಥ ಪಡೆದಿಲ್ಲ ಎಂದು ಈ ಸಂಧರ್ಭದಲ್ಲ ಹೇಳುವುದಕ್ಕೆ ಇಚ್ಛಿಸುತ್ತೇನೆ. ಲೋಕೋಪಯೋಗಿ ಶಾಖೆಯಲ್ಲಿ 4-5 ವಿಭಾಗವಾಗಿ, ಪ್ರತಿಯೊಂದು ಕೆಲಸವನ್ನೂ ನೋಡಬಹುದು.

ಕಳೆದ ವರ್ಷ ಇಂಟರ್‌ವಿಲೇಜ್ ಕಮ್ಯೂನಿಕೇಶನ್ನುಗಳಿಗೆ ಹೆಚ್ಚಿಗೆ ಪ್ರಾಶಸ್ತ್ಯ ಕೊಡಬೇಕೆಂದು ಸರ್ಕಾರದವರು ಆಜ್ಞೆಮಾಡಿದರು. ಅದರಂತೆ ಎಕ್ಸಿಕ್ಯೂಟೀವ್ ಇಂಜಿನಿಯರುಗಳು ಆಯಾ ತಾಲ್ಲೂಕಿನಲ್ಲಿ ಎಷ್ಟು ಮೈಲಿಗಳ ತೆಗೆದುಕೊಳ್ಳಲಿಕ್ಕೆ ಸಾಧ್ಯವೆಂದು ಗೊತ್ತುಮಾಡಿ, ಅಷ್ಟು ರಸ್ತೆಗಳ ಕೆಲಸಗಳನ್ನು ತೆಗೆದುಕೊಳ್ಳಲಿಕ್ಕೆ ಮಂಜೂರಾತಿ ಕೊಟ್ಟರು. ಆದರೆ, ಆ ಮೇಲೆ ಸರ್ಕಾರದವರು 50 ಮೈಲಿಗಳು ಮೀರದ ಹಾಗೆ ಆ ಕೆಲಸವಿರಬೇಕು. ಎಂದು ಆಜ್ಞೆ

ಮಾಡಿದರು, ಒಂದೊಂದು ತಾಲ್ಲೂಕಿನಲ್ಲಿ 100-200 ಮೈಲಿಯಾದರೂ ಕೆಲಸ ತೆಗೆದುಕೊಳ್ಳುತ್ತೇವೆಂದು ಅಶ್ವಾಸನೆ ಕೊಟ್ಟು ಕೆಲಸ ತೆಗೆದುಕೊಳ್ಳುವ ಸಮಯದಲ್ಲ, ಇಂಥ ಅಜ್ಞೆ ಹೊರಡಿಸಿದ್ದು ಸರಿಯಲ್ಲ. ಐದು ವರ್ಷಗಳಲ್ಲಿ ಒಂದೊಂದು ತಾಲ್ಲೂಕಿನಲ್ಲಿ 50 ಮೈಲಿಗಳಂತೆ ರಸ್ತೆ ಮಾಡಬೇಕೆಂದು ಅಜ್ಞೆ ಹೊರಡಿಸಿದ್ದಾರೆಂದು ನನಗೆ ತಿಳಿದಿದೆ. ಇದು ನಿಜವಾಗಿದ್ದರೆ ಹಾಸ್ಯಾಸ್ಪದ. ಒಂದೊಂದು ತಾಲ್ಲೂಕಿನಲ್ಲಿ 500-600 ಮೈಲಿಯಷ್ಟು ರಸ್ತೆ ಕೂಡ ಮಾಡಬೇಕಾದ ಅವಶ್ಯಕತೆ ಇರುವಾಗ, ಮುಂದಿನ ಐದು ವರ್ಷಗಳಲ್ಲಿ 50 ಮೈಲಿಗಳಷ್ಟೇ ಮಾಡಬೇಕೆಂಬ ಒಂದು ನೀತಿಯನ್ನು ಹಾಕಿಕೊಂಡರೆ, ಇನ್ನೆಷ್ಟು ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಈ ರಸ್ತೆ ಕೆಲಸವನ್ನು ಸಾಧನೆ ಮಾಡುವುದಕ್ಕೆ ಸಾಧ್ಯ? ಆದ್ದರಿಂದ ಈ 50ಮೈಲಿ ಪರಮಾವಧಿಯನ್ನು ರಸ್ತೆ ಕೆಲಸಕ್ಕೆ ನಿಗದಿಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ರಸ್ತೆ ಹಾಕಿದಮೇಲೆ, ಮಳೆ ಬಂದರೆ, ಅದು ಕೊಚ್ಚಿಕೊಂಡು ಹೋಗಿ ದುಡ್ಡು ವ್ಯಯವಾಗುತ್ತದೆ. ರಸ್ತೆಯನ್ನು ಹಾಕಿದ ಮೇಲೆ ಮೆಟಲ್‌ಮಾಡಲಿಕ್ಕೆ ವ್ಯವಸ್ಥೆ ಮಾಡಬೇಕು. ಮೆಟಲ್ ಮಾಡಿದಮೇಲೆ ಅದನ್ನು ಸ್ಥಳೀಯ ಸಂಸ್ಥೆಗಳಿಗೆ ವಹಿಸಿ ಮೆಂಟೇನ್ ಮಾಡುವ ವ್ಯವಸ್ಥೆ ಮಾಡಬೇಕು. ಕೊನೆಯ ಪಕ್ಷ ಒಂದು ವರ್ಷಕ್ಕೆ ಒಂದು ತಾಲ್ಲೂಕಿನಲ್ಲಿ 50 ಮೈಲಿಯಷ್ಟಾದರೂ ಇಂಟರ್ ವಿಲೇಜ್ ಕಮ್ಯೂನಿಕೇಶನ್ಸ್ ರಸ್ತೆ ಹಾಕಿ ಮೆಟಲ್ ಮಾಡುವ ವ್ಯವಸ್ಥೆಮಾಡಬೇಕು. ಅಮೇಲೆ, ರಸ್ತೆಗಳಿಗೆ ಒದಗಿಸಿರುವ ಹಣ ಬಹಳ ಕಡಿಮೆ. 3 ನೆಯ ಯೋಜನೆಯ ಔಟ್‌ಲೇಯಲ್ಲಿ, ಬಿಲ್ಡಿಂಗ್‌ಗಳಿಗೆ ಒದಗಿಸಿರುವ ಹಣ 3.19 ಕೋಟಿ ರೂಪಾಯಿ. ಅದರೆ ರಸ್ತೆಗಳಿಗಾಗಿ ಒದಗಿಸಿರುವುದು 1.92 ಕೋಟಿ ರೂಪಾಯಿ. ಇದು ನಿಜವಾಗಿಯೂ ಸಮರ್ಪಕವಾಗಿಲ್ಲ ಎಂದು ಹೇಳಲಿಕ್ಕೆ ಇಚ್ಛಿಸುತ್ತೇನೆ. ಈ ಪ್ಲಾನ್ ಔಟ್‌ಲೇಯಲ್ಲಿ ಕೊನೆಯ ಪಕ್ಷ ಶೇಕಡ 50ರಷ್ಟಾದರೂ ಇನ್ನೂ ಹೆಚ್ಚಿಗೆ ಒದಗಿಸಿದ್ದರೆ ಚೆನ್ನಾಗಿರುತ್ತಿತ್ತು. ಆದಷ್ಟು ದೊಡ್ಡ ಪ್ರಮಾಣದಲ್ಲಿ ಈ ರಸ್ತೆ ಕೆಲಸವನ್ನು ಮಾಡತಕ್ಕಂಥ ಕೆಲಸಮಾಡಬೇಕು. ಅಲ್ಲದೆ ನ್ಯಾಷನಲ್ ಹೈವೇಸನ್ನೂ ಸರ್ಕಾರ ಹೆಚ್ಚಾಗಿ ಮಾಡಬೇಕು. ಮೈಸೂರು ದೇಶದಲ್ಲಿ 500 ಮೈಲಿಗಳು ಮಾತ್ರ ಮಾಡಲಾಗಿದೆ. ಅದರೆ ಮದ್ರಾಸ್ ಪ್ರಾಂತ್ಯದಲ್ಲಿ 1500 ಮೈಲಿ ಮಾಡಿದ್ದಾರೆ. ಮೂರನೆಯ ಯೋಜನೆ ಅವಧಿ ಮುಗಿಯುವದರೊಳಗೆ ಇನ್ನೊಂದು 500 ಮೈಲಿ ಮಾಡುವಹಾಗೆ ಮೈಸೂರು ಸರ್ಕಾರ ಯೋಜನೆಯಲ್ಲಿ ಸೇರಬೇಕು.

ಈ ಸಣ್ಣ ನೀರಾವರಿ ಯೋಜನೆ ಯಶಸ್ವಿಯಾಗಿ ನಡೆದಿದೆ ಎಂದು ಹೇಳಲಿಕ್ಕೆ ನಾನು ತಯಾರಿಲ್ಲ. ಶ್ರೀ ವೆಂಕಟರೆಡ್ಡಿಯವರು ಇದಕ್ಕೆ ಉದಾಹರಣೆಗಳನ್ನು ಕೊಟ್ಟರು. ಸಣ್ಣ ನೀರಾವರಿಯೋಜನೆ ಸಂಬಂಧದಲ್ಲಿ ಅನೇಕ ಕಡೆ ಅಧಿಕಾರಿಗಳ ಜೊತೆಗೆ ಹೋಗಿ ಆಸಕ್ತಿ ವಹಿಸಿದೆವು. ಸುಮಾರು 15 ಪ್ರಪೋಸಲ್ಸುಗಳನ್ನು ಕಳುಹಿಸಿದೆವು. ಇವತ್ತಿನದಿವಸ ಅವುಗಳಲ್ಲಿ ಒಂದರ ಕೆಲಸ ನಡೆಯುತ್ತಾಇದೆ, ಇನ್ನೊಂದು ಮಂಜೂರಾಗಿದೆ ಎಂದು ನಾನು ಕೇಳಿದ್ದೇನೆ. ಇಷ್ಟು ವೇಗದಿಂದ ಸಣ್ಣ ನೀರಾವರಿ ಯೋಜನೆ ಕೆಲಸ ನಡೆಯುತ್ತಾಇದೆ! ಪ್ಲಾನಿನಲ್ಲಿ ಸಣ್ಣ ನೀರಾವರಿಗೆ ಒದಗಿಸಿರುವ ಹಣ 44ಲಕ್ಷ ರೂಪಾಯಿ. ಇದರಲ್ಲಿ 1961–62ಕ್ಕೆ construction of new tanks, restoration of tanks, desilting, ಪರ್‌ಕೊಲೇಶನ್—ನಾಲ್ಕು ಐಟಮ್ಮುಗಳು ಸೇರಿವೆ. ಮೇಜರ್ ಮತ್ತು ಮೀಡಿಯಂ ಪ್ರಾಜೆಕ್ಟುಗಳಿಗೆ 8·21ಲಕ್ಷ ರೂಪಾಯಿ ಒದಗಿಸಿದೆ. ಆದಷ್ಟು ಮಟ್ಟಿಗೆ ಸರ್ಕಾರ ಸಣ್ಣ ನೀರಾವರಿ ಯೋಜನೆಯಲ್ಲಿ ತೀವ್ರಾಸಕ್ತಿ ವಹಿಸಿ, ಜಾಗ್ರತೆಯಾಗಿ ಕಾರ್ಯಗತ ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ. ಇವತ್ತಿನದಿವಸ 1 ಕೋಟಿ ರೂಪಾಯಿ ದೊಡ್ಡ ಜಲಾಶಯಕ್ಕೆ ಖರ್ಚು ಮಾಡಿ 10 ಸಾವಿರ ಎಕರೆ ಜಮೀನನ್ನು ನೀರಾವರಿಗೆ ತರುತ್ತಿದ್ದೀರಿ. ಅದನ್ನು ಬಾವಿಗಳಿಂದ ಅಗುವ ಉಪಯುಕ್ತತೆಗೆ ಕಂಪೇರ್ ಮಾಡೋಣ. ಒಂದು ಭಾವಿಗೆ ಮೂರು ಸಾವಿರ ರೂಪಾಯಿ ಖರ್ಚು ಮಾಡಿ, ಅದರಿಂದ 5ಎಕರೆ ವ್ಯವಸಾಯ ಮಾಡಲಿಕ್ಕೆ ಸಾಧ್ಯ. ಈ ಲೆಕ್ಕದ ಪ್ರಕಾರ

(ಶ್ರೀ ಜಿ. ವೆಂಕಟೇಗೌಡ)

ಬಾವಿಗಳಿಗೆ 1 ಕೋಟಿ ರೂಪಾಯಿ ಖರ್ಚುಮಾಡಿದರೆ, 33 ಸಾವಿರ ಎಕರೆ ಸಾಗುವಳಿಗೆ ಬರುತ್ತದೆ. ಅದೇ ನೀವು 1 ಕೋಟಿ ರೂಪಾಯಿಯನ್ನು ದೊಡ್ಡ ಜಲಾಶಯಕ್ಕೆ ಖರ್ಚುಮಾಡಿದರೆ, ಕೇವಲ 10 ಸಾವಿರ ಎಕರೆ ಸಾಗುವಳಿಗೆ ಬರುತ್ತದೆ. ಆದ್ದರಿಂದ ಸಣ್ಣ ನೀರಾವರಿ ಯೋಜನೆಗೆ ಅದಷ್ಟು ಪ್ರಾಶಸ್ತ್ಯವನ್ನು ಸರ್ಕಾರದವರು ಕೊಡಬೇಕು. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಮಾಡಲು ಪ್ರಯತ್ನಮಾಡುತ್ತಿದ್ದೀರೆಂದು ನಂಬಿದ್ದೇನೆ

ಸಣ್ಣ ನೀರಾವರಿ ಯೋಜನೆ ಮಾಡುತ್ತೀರ. ಆದರೆ ಎಲ್ಲ ಭಾವಿಗಳನ್ನು ತೆಗೆದು ರೈತರಿಗೆ ವಿದ್ಯುಚ್ಛಕ್ತಿಯನ್ನು ಕೊಡಲಿಕ್ಕೆ ಅವಕಾಶವಿದೆಯೋ, ಅಲ್ಲಿ ಸಕಾಲದಲ್ಲಿ ಒದಗಿಸದಿದ್ದರೆ ಅವರಿಗೆ ಪ್ರಯೋಜನವಾಗುವುದಿಲ್ಲ. ಸ್ವಲ್ಪ ಮಟ್ಟಿಗೆ ಚಾರ್ಜ್ ಕಡಿಮೆಯಾದರೂ ಪರವಾಗಿಲ್ಲ, ರೈತರಿಗೆ ವಿದ್ಯುಚ್ಛಕ್ತಿಯನ್ನು ರಾತ್ರಿ ಕೊಡುವುದರ ಬದಲು, ಬೆಳಗಿನ ಜಾವ ಕೊಡುವ ವ್ಯವಸ್ಥೆ ಮಾಡಿದರೆ, ಅವರು ಉತ್ಸಾಹದಿಂದ ಆಹಾರೋತ್ಪತ್ತಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡಲಿಕ್ಕೆ ಸಾಧ್ಯ. ಕೊನೆಯ ಪಕ್ಷ ಬೆಳಗಿನ ಜಾವ 4 ಘಂಟೆಯಿಂದ ಬೆಳಗ್ಗೆ 9 ಘಂಟೆಯವರೆಗಾದರೂ ವಿದ್ಯುಚ್ಛಕ್ತಿ ಸರಬರಾಜು ಮಾಡುವಂತೆ ಸರ್ಕಾರದವರು ಮಾಡಿದರೆ ರೈತರಿಗೆ ಉಪಕಾರ ಮಾಡಿದಂತಾಗುತ್ತದೆ.

ಮೀಡಿಯಂ ಪ್ರಾಜೆಕ್ಟುಗಳಿಗೆ 10 ಕೋಟಿ ರೂಪಾಯಿಯನ್ನು ಮೂರನೆಯ ಯೋಜನೆಯಲ್ಲಿ ಖರ್ಚುಮಾಡುತ್ತೀರ ಎಂದು ನಮಗೆ ಕೊಟ್ಟಿರುವ ಕರಡು ಪ್ಲಾನಿನಲ್ಲಿ ಹೇಳಿದ್ದೀರಿ. ಅದರಲ್ಲಿ ಪ್ರಾಜೆಕ್ಟುಗಳನ್ನು ಸೇರಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆಂದು ಎಂದಿದ್ದೀರಿ. ಇವತ್ತಿನ ದಿವಸ ಕೇವಲ ಹತ್ತನ್ನೂ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ನನಗೆ ಗೊತ್ತಿದೆ. ಪ್ಲಾನ್ ಔಟ್‌ಲೇಯನ್ನು 300 ಕೋಟಿ ರೂಪಾಯಿಯಿಂದ-250 ಕೋಟಿ ರೂಪಾಯಿಗೆ ಕಡಿಮೆಮಾಡಿದ ಪರಿಣಾಮವಾಗಿ, ಅವುಗಳನ್ನು ಕಡಿಮೆಮಾಡುವ ಒಂದು ನಿರ್ಧಾರವನ್ನು ಸರ್ಕಾರ ತೆಗೆದುಕೊಂಡ ಹಾಗೆ ಇದೆ. ಆದ್ದರಿಂದ ಮಧ್ಯಮ ತರಗತಿ ಜಲಾಶಯಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕು. ಉದಾಹರಣೆಗೆ ಕೊಳ್ಳೇಗಾಲ ಮದ್ರಾಸ್ ಪ್ರಾಂತ್ಯದಲ್ಲಿದ್ದಾಗ, ಪೆರಿನಿಯಲ್ ಸ್ಕೀಮಿನ ಜಲಾಶಯಗಳ ನಿರ್ಮಾಣವಾಗಿಲ್ಲ; ಈಗಲೂ ಇಲ್ಲಿಯವರೆಗೆ ಆಗಿಲ್ಲ. ಅಲ್ಲಿ ಪೆರಿನಿಯಲ್ ಸ್ಕೀಮುಗಳು ಹರಿಯುತ್ತಾ ಇವೆ. ನಾಲ್ಕು ಮಧ್ಯಮ ತರಗತಿಯ ಪ್ರಾಜೆಕ್ಟುಗಳನ್ನು ಮಾಡುವುದು ಸಾಧ್ಯ. ಆ ವಿಚಾರದಲ್ಲಿ ತನಿಖೆ ಮಾಡುವ ಅಗತ್ಯವಿದೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಜಲಾಶಯಗಳನ್ನು ನಿರ್ಮಾಣ ಮಾಡಬೇಕೆಂದು ಮಾನ್ಯ ಸಚಿವರನ್ನು ಕೇಳುತ್ತಾ ಇದ್ದೇನೆ. ಗುಂಡಲ ಮತ್ತು ಎಡುತೊರೆ ಬಳಿ ಇವುಗಳನ್ನು ಮಾಡಿದರೆ ನಿಮಗೆ ಖರ್ಚಾಗುವುದಕ್ಕಿಂತ ಹೆಚ್ಚು ರಿಟರ್ನ್ ಬರುತ್ತದೆ; ಇವುಗಳಿಗೆ ಡಿಪಾರ್ಟ್‌ಮೆಂಟಿನ ಅಭಿಪ್ರಾಯವೂ ಆಗಿದೆ. ಆದ್ದರಿಂದ ಈ ಎರಡು ಜಲಾಶಯಗಳನ್ನು ನಿರ್ಮಾಣಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಸುಮಾರು ಹತ್ತು ಸಾವಿರ ಎಕರೆ ಸಾಗಿಗೆ ಬರುತ್ತದೆ.

ರಸ್ತೆಯ ವಿಚಾರದಲ್ಲಿ ಒಂದು ಮಾತು ಹೇಳಬೇಕು. ನಮ್ಮ ತಾಲ್ಲೂಕು ಬಹಳ ದೊಡ್ಡದಾದ ತಾಲ್ಲೂಕು ನಮ್ಮ ರಾಜ್ಯದಲ್ಲಿ ಇಷ್ಟೊಂದು ವಿಸ್ತಾರವಾದ ತಾಲ್ಲೂಕು ಇನ್ನಾವುದೂ ಇಲ್ಲ. ಅಲ್ಲಿಗೆ ಹೆಚ್ಚಿಗೆ ರಸ್ತೆಗಳನ್ನು ಮಾಡಿ, ಸಂಚಾರ ಸೌಲಭ್ಯಗಳನ್ನು ಒದಗಿಸಿ ಕೊಡಬೇಕೆಂದು ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಇವತ್ತಿನ ದಿವಸ ನಮ್ಮ ಕೊಳ್ಳೇಗಾಲದಲ್ಲಿ ಮಹದೇಶ್ವರ ದೇವಸ್ಥಾನಕ್ಕೆ ರಸ್ತೆ ಹಾಕಲು 19 ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ; ಆದರೆ ಸರ್ಕಾರದ ಹುಕುಂ ಆಗಿಲ್ಲ. ಇವಾಗದಿರುವುದರ ಪರಿಣಾಮವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗಿಲ್ಲ ಸರ್ಕಾರದ ಆಜ್ಞೆಯನ್ನು ಶೀಘ್ರದಲ್ಲಿ

ಹೊರಡಿಸಿ, ಈ ಒಂದು ರಸ್ತೆಯನ್ನು ನ್ಯಾಷನಲ್ ಹೈವೆ ಮಾಡುವುದಾದರೆ, ಸೇಲಂಗೆ ಬಹಳ ಹತ್ತಿರ ರಸ್ತೆಯಾಗುತ್ತದೆ. ಈಗ ಬೆಂಗಳೂರು ಮಾರ್ಗವಾಗಿ ಸೇಲಂಗೆ ಹೋಗುವ ಬದಲು ನೇರವಾಗಿ ಪ್ರಯಾಣ ಮಾಡಬಹುದು ಎಂದು ಈ ಸಂದರ್ಭದಲ್ಲಿ ತಿಳಿಸುತ್ತಿದ್ದೇನೆ.

5-00 P. M.

ಈ ಹಿಂದೆ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಸಣ್ಣ ನೀರಾವರಿ ಯೋಜನೆಗಳ ಬಗ್ಗೆ ಎಷ್ಟು ಮುತವರ್ಜಿ ವಹಿಸಲಾಗಿತ್ತೋ ಅಷ್ಟನ್ನು ಸಹ ಈ ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ವಹಿಸಿಲ್ಲವೆಂಬುದನ್ನು ನಾನು ತಿಳಿಸಲು ವ್ಯಸನಪಡುತ್ತೇನೆ. ಆ ಯೋಜನೆಯಲ್ಲಿ 610 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿತ್ತು. ಆದರೆ ಈಗ 285 ಲಕ್ಷವನ್ನು ಮಾತ್ರ ಖರ್ಚು ಮಾಡುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಆದರೆ ಈಗಿನ ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಇನ್ನೂ ಹೆಚ್ಚು ಹಣವನ್ನು ಖರ್ಚುಮಾಡಲು ಅವಕಾಶವಿತ್ತು: ಸಾಧ್ಯವೂ ಇತ್ತು. ಆದರೆ ಈ ದಿವಸ ನಮ್ಮ ಸರ್ಕಾರ ಹಾಗೆ ಮಾಡದೆಯಿರುವುದರಿಂದ ಈಗ ಸಣ್ಣ ನೀರಾವರಿ ಯೋಜನೆಗಳಿಗೆ ತುಂಬಾ ಧಕ್ಕೆ ಬಂದಿದೆಯೆಂದು ವಿಧಿಯಿಲ್ಲದೆ ತಿಳಿಸಬೇಕಾಗಿದೆ. ಇಷ್ಟೇ ಅಲ್ಲದೆ ಈಗ ನಮ್ಮ ಸರ್ಕಾರದವರು ಈ ಡಿಮ್ಯಾಂಡ್ 51 ರಲ್ಲಿ Capital Accounts on Civil Works ಈ ಬಾಬಿಗೆ ಏನು ಹಣವನ್ನೊದಗಿಸಿದ್ದಾರೋ ಅಷ್ಟು ಸಾಲದೆಂದು ಹೇಳುತ್ತೇನೆ. ಈ ದಿವಸ ದೇಶಾದ್ಯಂತವೂ ಇರತಕ್ಕ ಅನೇಕ ಡಿಸ್ಪೆನ್ ಸರಿಗಳಲ್ಲಿ ಬಹಳ ಶಿಥಿಲವಾಗಿವೆ ಇವುಗಳನ್ನು ಮುಂದಕ್ಕೆ ತಾಲ್ಲೂಕ್ ಬೋರ್ಡುಗಳಿಗೆ ವಹಿಸಬೇಕೆಂಬ ಆಲೋಚನೆ ಸರ್ಕಾರಕ್ಕಿರುತ್ತೆಂದು ನಾನು ಕೇಳುತ್ತಿದ್ದೇನೆ. ಈಗಾಗಲೇ ಈ ಬಗ್ಗೆ ತೀರ್ಮಾನ ಸಹ ತೆಗೆದುಕೊಂಡಿದ್ದಾರೆಂದು ಕೇಳುತ್ತೇನೆ. ಹೀಗೆ ಮಾಡಿದರೆ ಮುಂದೆ ಬಹಳ ಅನ್ಯಾಯವಾಗುತ್ತೆ, ನಾನಾದರೂ ಹೇಳುತ್ತೇನೆ ಮುಂದಕ್ಕೆ ಈ ಎಲ್. ಎಫ್. ಡಿಸ್ಪೆನ್ ಸರಿಗಳ ಆಡಳಿತವನ್ನೆಲ್ಲ ಸಂಪೂರ್ಣವಾಗಿ ಸರ್ಕಾರದವರೇ ವಹಿಸಿಕೊಳ್ಳಬೇಕು ಎಂದು ಇದರಿಂದ ಜನರಿಗೆ ಹೆಚ್ಚು ಸೌಕರ್ಯವಾಗುತ್ತೆ. ಹೀಗೆ ಮಾಡದೆ ಇವುಗಳನ್ನು ತಾಲ್ಲೂಕ್ ಬೋರ್ಡಿಗೆ ವಹಿಸಿದರೆ ಬಹಳ ಅನ್ಯಾಯವಾಗುತ್ತೆ. ಆದ್ದರಿಂದ ಇವುಗಳನ್ನು ಸರ್ಕಾರದವರೇ ವಹಿಸಿಕೊಳ್ಳಬೇಕು. ಬೇಕಾದರೆ ಲೋಕಲ್ ಬಾಡೀಸ್‌ಗಳಿಂದ ಸರ್ಕಾರದವರು ಕಂಟ್ರಿಬ್ಯೂಷನ್ ಪಡೆಯಲಿ, ಅದಕ್ಕೆ ನಾನು ಬೇಡವೆಂತ ಹೇಳುವುದಿಲ್ಲ. ತಾಲ್ಲೂಕ್ ಬೋರ್ಡುಗಳಿಗೆ ಈ ಕೆಲಸ ನಿರ್ವಹಿಸಲು ಖಂಡಿತ ಸಾಧ್ಯವಿಲ್ಲವೆಂದು ಹೇಳುತ್ತೇನೆ.

ಇನ್ನು ಈ ಲೋಕೋಪಯೋಗಿ ಶಾಖೆಯಲ್ಲಿ ದುಂದು ವೆಚ್ಚಗಳನ್ನು ಕಡಿಮೆ ಮಾಡಬೇಕೆಂದು ನಾವು ಪದೇ ಪದೇ ಇಲ್ಲಿ ಒತ್ತಾಯ ಮಾಡುತ್ತಲೇ ಬಂದಿದ್ದೇವೆ. ಅಲ್ಲಿ ಈಗ ಸಿಬ್ಬಂದಿ ಇರುವುದು ಜಾಸ್ತಿ ಆಗಿದೆ ಅಷ್ಟು ಸೂಪರ್‌ಫ್ಲೂಯಸ್ ಆಗಿರುತ್ತೆ. ಆ ಇಲಾಖೆಯಲ್ಲಿ ಈಗ ಇರತಕ್ಕ ಸೂಪರಿಂಟೆಂಡಿಂಗ್ ಇಂಜಿನಿಯರುಗಳೇನಿದ್ದಾರೆ ಅವರೆಲ್ಲ ಸೂಪರ್‌ಫ್ಲೂಯಸ್ ಎಂತ ನಾವು ಎಷ್ಟೋ ಸಾರ್ತಿ ಹೇಳಿದ್ದೇವೆ. ಈಗ ಕೆಲವು ಎಗ್ಸಿಕ್ಯೂಟಿವ್ ಇಂಜಿನಿಯರುಗಳನ್ನು ಡೆಪ್ಯುಟಿ ಚೀಫ್ ಇಂಜಿನಿಯರುಗಳನ್ನಾಗಿ ಮಾಡಿದ್ದಾರೆ. ಅವರಿಗೇ ಬೇಕಾದರೆ ಮತಿಷ್ಟು ಅಧಿಕಾರಗಳನ್ನು ಜಾಸ್ತಿಮಾಡಿ ಈ ಸೂಪರಿಂಟೆಂಡಿಂಗ್ ಇಂಜಿನಿಯರುಗಳ ಹುದ್ದೆಯನ್ನು ರದ್ದು ಮಾಡಬಹುದು. ಸೂಪರಿಂಟೆಂಡಿಂಗ್ ಇಂಜಿನಿಯರಿಗೆ ಸಾಸಮಾನವಾದ ಅಧಿಕಾರಗಳನ್ನು ಗೊತ್ತು ಮಾಡಿ ಅಂಥವರನ್ನು ಡೆಪ್ಯುಟಿ ಚೀಫ್ ಇಂಜಿನಿಯರ್‌ಗಳಾಗಿ ಪೋಸ್ಟ್ ಮಾಡಬಹುದು, ತಪ್ಪಾಗುವುದಿಲ್ಲ. ಹೀಗೆ ಮಾಡದೆ ಈಗ ಇಟ್ಟುಕೊಂಡಿರತಕ್ಕ ಸೂಪರಿಂಟೆಂಡೆಂಟರುಗಳ ಹುದ್ದೆಯಿಂದ ಎಕ್ಸ್‌ಚೆಕರಿಗೆ ಒಂದು ದೊಡ್ಡ ಹೊರೆಯಾಗಿದೆ. ಕೆಲಸಕ್ಕೆಷ್ಟು ಜನ ಬೇಕೋ ಅಷ್ಟಿದ್ದರೆ ಸಾಕು. ಜನ ಜಾಸ್ತಿ ಆದರೆ ಕೆಲಸ ಬೇಗ ಆಗುವುದಕ್ಕೆ ಖಂಡಿತ ಸಾಧ್ಯವಿಲ್ಲ. ರೆವಿನ್ಯೂ ಸೈಡಿನಲ್ಲೂ ಸಹ ನಾವು ಆ ಡಿವಿಜನಲ್ ಕಮಿಷನರುಗಳನ್ನು ಹೀಗೇ ತೆಗೆಯಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಡೆಪ್ಯುಟಿ ಚೀಫ್ ಇಂಜಿನಿಯರೂ ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರು ಇಬ್ಬರೂ ಇದ್ದಾರೆಂದು ಏನು ಶ್ರೀ ಜಿ. ವೆಂಕಟೇಗೌಡರು ಹೇಳಿದರೋ ಅದು ಸರಿಯಲ್ಲ. ಶ್ರೀ ಆರೋಗ್ಯಂರವರು ಹೇಳಿದ್ದು ಸರಿ.

ಶ್ರೀ ಜಿ. ವೆಂಕಟೇಗೌಡ.—ಹಾಗೆ ಅವರನ್ನು ಅಸಿಸ್ಟೆಂಟ್ ಆಗಿ ಮಾಡಲು ಸಾಧ್ಯವಾಗದೆ ಇದ್ದರೆ ಈ ಸೂಪರಿಂಟೆಂಡಿಂಗ್ ಇಂಜಿನಿಯರುಗಳ ಹುದ್ದೆಯನ್ನು ರದ್ದು ಮಾಡಿದರೆ ಅದರಿಂದಾಗ ತಕ್ಕ ತೊಂದರೆಯಾದರೂ ಏನು ? ಆದಷ್ಟು ಈ ಇಲಾಖೆಯ ಮೇಲ್ವಿಚಾರಣೆಗೆ ತಕ್ಕ ಶಿಬ್ಬಂದಿಯನ್ನಿಟ್ಟುಕೊಂಡು ಇಲಾಖೆಯಲ್ಲಿ ಆಗತಕ್ಕದ್ದು ದುಂದು ವೆಚ್ಚಗಳನ್ನು ಕಡಮೆ ಮಾಡಬೇಕೆಂದು ಕೆಲಸ ಕಾರ್ಯಗಳು ಚುರುಕಾಗಿ ನಡೆಯುವಂತೆ ಏರ್ಪಾಡುಗಳನ್ನು ಮಾಡಬೇಕೆಂದು ಹೇಳುತ್ತೇನೆ. ಈ ದಿವಸ ಈ ಲೋಕೋಪಯೋಗಿ ಶಾಖೆಯಿಂದ ನಮ್ಮ ತಾಲ್ಲೂಕಿನಲ್ಲಿ ಹೆಚ್ಚಿನ ಕೆಲಸ ಕಾರ್ಯಗಳು ಬೇಕಾಗಿರುತ್ತೆ. ನಮ್ಮಲ್ಲಿ ಹಾಲಿ ಒಂದೇ ಒಂದು ಇಂಜಿನಿಯರಿಂಗ್ ಸಬ್ ಡಿವಿಜನ್ ಇರುತ್ತೆ. ಅಲ್ಲಿಗೆ ಮತ್ತೊಂದು ಸಬ್ ಡಿವಿಜನ್ನನ್ನು ಮಂಜೂರು ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದರೂ ಸರ್ಕಾರ ಈ ವಿಚಾರಕ್ಕೆ ಗಮನ ಕೊಟ್ಟಿಲ್ಲ. 1,100 ಮೈಲಿ ವಿಸ್ತೀರ್ಣವುಳ್ಳ ಒಂದು ದೊಡ್ಡ ತಾಲ್ಲೂಕಿಗೆ ಇಂಥ ಒಂದು ದೊಡ್ಡ ತಾಲ್ಲೂಕ್ ಇಡೀ ಮೈಸೂರು ರಾಜ್ಯದಲ್ಲೇ ಇನ್ನೊಂದಿಲ್ಲ, ಒಂದು ಸಬ್ ಡಿವಿಜನ್ ಏತಕ್ಕೂ ಸಾಲದು. ಕೆಲಸಗಳು ಬೇಗ ಆಗುತ್ತಿಲ್ಲ. ಒಬ್ಬ ಅಸಿಸ್ಟೆಂಟ್ ಇಂಜಿನಿಯರಿಂದ ಇಷ್ಟು ಹೆಚ್ಚಿನ ವಿಸ್ತೀರ್ಣವುಳ್ಳ ಪ್ರದೇಶದಲ್ಲಿ ಪ್ರತಿಯೊಂದು ಕೆಲಸ ಮಾಡಲು ಸಾಧ್ಯವೇ ಇಲ್ಲ. ಹಾಗೊಂದು ವೇಳೆ ಸರ್ಕಾರ ಈ ವಿಸ್ತೀರ್ಣ ಕೂಡ ಕಡಮೆ ಎಂತ ಭಾವಿಸುವುದಾದರೆ ನಮ್ಮ ತಾಲ್ಲೂಕಿಗೆ ಆ ಯಳಂದೂರು ತಾಲ್ಲೂಕನ್ನಾದರೂ ಸೇರಿಸಿ ಇಲ್ಲಿಗೆ ಇನ್ನೊಂದು ಸಬ್ ಡಿವಿಜನ್ ಕೂಡಲೇ ಬೇಕೆಂದು ಹೇಳುತ್ತೇನೆ. ಇಲ್ಲಿಗೆ ಇನ್ನೊಬ್ಬ ಅಸಿಸ್ಟೆಂಟ್ ಇಂಜಿನಿಯರನ್ನು ನೇಮಿಸಲೇ ಬೇಕೆಂದು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ರೈತರು ಹೆಚ್ಚಿನ ಉತ್ಸಾಹದಿಂದ ಕೆಲಸ ಮಾಡುವ ರೀತಿಯಲ್ಲಿ ಸರ್ಕಾರದವರು ಅನುಕೂಲ ಕಲ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ಆದರೆ ಈ ಬಾಬಿನಲ್ಲಿ ಇನ್‌ವೆಸ್ಟಿಗೇಷನ್ ಡಿವಿಜನ್ ಎಂತ ಬೇರೆ ಬಂದಿದೆ. ಆದರೆ ಇದರಿಂದ ದೇಶದಲ್ಲಿ ಎಷ್ಟರ ಮಟ್ಟಿಗೆ ಕೆಲಸಕಾರ್ಯಗಳಾಗಿವೆಯೋ ಅದೊಂದೂ ನಮಗೆ ಗೊತ್ತಿಲ್ಲ. ಆ ಡಿವಿಜನ್ ಆದ ಮೇಲೆ ದೇಶದಲ್ಲಿ ಎಷ್ಟು ಜಲಾಶಯಗಳ ಬಗ್ಗೆ ಇನ್‌ವೆಸ್ಟಿಗೇಷನ್ ನಡೆಸಲಾಯಿತು, ಎಷ್ಟು ಅಂದಾಜುಗಳನ್ನು ತಯಾರು ಮಾಡಲಾಯಿತು ಎನ್ನುವ ವಿಚಾರಗಳೊಂದೂ ಗೊತ್ತಾಗಲಿಲ್ಲ. ನಾನು ಇಷ್ಟು ವಿಚಾರಗಳನ್ನು ಹೇಳಿ ಮಾನ್ಯ ಮಂತ್ರಿಗಳು ಇವುಗಳನ್ನೆಲ್ಲಾ ಪರಿಶೀಲನೆ ಮಾಡಿ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾರೆಂದು ನಂಬಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಇ. ಪುಂಡಲೀಕಪ್ಪ (ಕುಷಗಿ).—ಸ್ವಾಮಿ ನಾನೀಗ ಲೋಕೋಪಯೋಗಿ ಶಾಖೆ ವಿಚಾರದಲ್ಲಿ ಸರ್ಕಾರದವರಿಗೆ ಕೆಲವು ಸೂಚನೆಗಳನ್ನು ತರುತ್ತ ಈ ಶಾಖೆಯಿಂದ ಜನರಿಗೆಷ್ಟು ಅನುಕೂಲವಾಗಿದೆ ಎಂಬುದನ್ನು ನಾನೀಗ ತಮ್ಮೆಲ್ಲರ ಗಮನಕ್ಕೂ ತರಬಯಸುತ್ತೇನೆ. ನಮ್ಮ ಹೈದರಬಾದ್ ಕರ್ನಾಟಕ ಬಹಳ ಮಹತ್ವಪೂರ್ಣ ಆಗಿದೆ. ತಗ್ಗಿದ್ದ ಕಡೆಗೆ ನೀರು ಹೋಗಿ ನಿಲ್ಲುವಂತೆ ಅನಕೂಲತೆಗಳೆಲ್ಲ ಈ ದಿವಸ ಎಲ್ಲಿ ಶ್ರೀಮಂತರಾದ ಜನರಿದ್ದಾರೋ ಅತ್ತ ಕಡೆಗೆ ಹೋಗಿಬಿಡುತ್ತವೆಂಬುದು ಈ ಬಜೆಟ್ಟಿನ ಮೇಲಿನಿಂದಲೇ ಕಾಣುತ್ತಿದೆ. ಆದರೆ ಸರ್ಕಾರದವರು ಆ ನಮ್ಮ ಹೈದ್ರಬಾದ್ ಕರ್ನಾಟಕಕ್ಕೆ ಲಕ್ಷ್ಯ ಕೊಟ್ಟಿಲ್ಲ ಎಂತ ಹೇಳುವುದಿಲ್ಲ. ಆದರೆ ಈಗ ಕೊಟ್ಟಿರುವುದು ಸಾಲದು ಎಂದು ಹೇಳುತ್ತೇನೆ. ನಾನೀಗ ಕೇವಲ ನಮ್ಮ ತಾಲ್ಲೂಕು ಒಂದರ ಸುದ್ದಿಯನ್ನೇ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲೆಲ್ಲಾ ಬಹಳ ಕಡಮೆ ರಸ್ತೆ ಇರುತ್ತೆ. ನಮ್ಮಲ್ಲಿ ಒಂದೊಂದು ಇಡೀ ತಾಲ್ಲೂಕಕ್ಕೆ 30 ರಿಂದ 50 ಮೈಲಿ ಯೊಳಗೆ ರಸ್ತೆ ಕಾಂಗಾರಿ ನಡೆಸುತ್ತಿದ್ದಾರೆ. ಇನ್ನು ಬೇರೆ ಕಡೆಗಳಲ್ಲಾದರೆ ಈಗ ಇಲ್ಲಿ ಅನೇಕ ಸದಸ್ಯರು ಹೇಳುತ್ತಿರುವುದನ್ನು ನೋಡಿದರೆ 50 ರಿಂದ 200 ಮೈಲಿಗಳ ತನಕ ರಸ್ತೆ ಕೆಲಸ ತೆಗೆದುಕೊಂಡಿದ್ದಾರೆಂತ ತಿಳಿಯಬರುತ್ತೆ. ಆದರೆ ಒಂದು ತಾಲ್ಲೂಕ

ದಲ್ಲಿ ಕೇವಲ 50 ಮೈಲಿನ ರಸ್ತೆ ಇನ್ನೊಂದು ತಾಲ್ಲೂಕದಲ್ಲಿ 200 ಮೈಲುಗಳ ರಸ್ತೆ ಮತ್ತೊಂದು ಕಡೆ 300 ಮೈಲುಗಳ ರಸ್ತೆ ಹೀಗೆಲ್ಲ ಮಾಡುತ್ತಾ ಹೋಗುವುದು ಸರಿಯಲ್ಲ. ಹಳ್ಳಿಗಾಡಿನಲ್ಲಿ ರಸ್ತೆಗಳು ಹೇಗಿವೆ ಎಂಬುದು ಪ್ರಧಾನ ಕೈಗೊಂಡಂಥ ಮಂತ್ರಿಗಳಿಗೆ ಗೊತ್ತು. ರಸ್ತೆಗಳೇ ಕಡಿಮೆಯಾಗಿವೆ. ಚಿಕ್ಕ ಚಿಕ್ಕ ರಸ್ತೆಗಳನ್ನು ರಚನೆ ಮಾಡುವುದಕ್ಕಿಂತ ಇಪ್ಪತ್ತು ಮೈಲಿ ಗಿಂತ ಕಡಿಮೆಯಾಗಿರತಕ್ಕ ರಸ್ತೆಗಳನ್ನು ಹೆಚ್ಚು ಉದ್ದ ಮಾಡಬೇಕು. ಎಲ್ಲಿ ರಸ್ತೆಗಳು ಇರುವು ದಿಲ್ಲವೋ ಅಂಥ ಪ್ರದೇಶಗಳಲ್ಲಿ ಮೊದಲು ರಚನೆ ಮಾಡುವದಕ್ಕೆ ಗಮನ ಕೊಡಬೇಕು. ನಮ್ಮ ಭಾಗದಲ್ಲಿ ಕುಷ್ಟಗಿ ರೋಡ್ ರಸ್ತೆ ಮಂಜೂರಾಗಿ ಏಳು ವರ್ಷವಾಯಿತು. ಆದರೆ ಇನ್ನೂವರೆಗೆ ಏನೂ ಪ್ರಗತಿಯಾಗಿಲ್ಲ. ಆದುದರಿಂದ ಈ ರಸ್ತೆಯ ರಚನೆಯ ಬಗ್ಗೆ ಮನಸ್ಸು ಹಾಕಿ ಬೇಗನೆ ರಸ್ತೆ ರಚನೆಯಾಗುವ ಹಾಗೆ ಮಾಡಬೇಕಾಗಿ ಸೂಚಿಸುತ್ತೇನೆ. ಈ ರಸ್ತೆ ರಚನೆಯಾಗುವುದರಿಂದ ರಾಯಚೂರು ಧಾರ್ವಾಡ ವಿಜಾಪುರ ಈ ಮೂರು ಜಿಲ್ಲೆಗಳಿಗೆ ನೇರವಾದ ಸಂಪರ್ಕ ಅನುಕೂಲ ಉಂಟಾಗುತ್ತದೆ. ಈ ಬಗ್ಗೆ ಅನೇಕ ಸಾರಿ ಬರೆದು ಸಹ ಕೊಟ್ಟಿದ್ದೇವೆ. ಈ ವರ್ಷ ಈ ರಸ್ತೆ ರಚನೆ ತೆಗೆದುಕೊಂಡು ಪೂರ್ತಿ ಮಾಡಬೇಕು.

ಇನ್ನು ಗಜೇಂದ್ರಗಡ ಇಳಕಲ್ ರಸ್ತೆಯ ಬಗ್ಗೆ ಬಜೆಟ್ಟಿನಲ್ಲಿ ಹಣ ಒದಗಿಸಿದ್ದಾರೆ. ಆದರೆ ಎಲ್ಲಿ ಈ ರಸ್ತೆ ರಚನೆಯ ಕೆಲಸ ನಡೆಯುತ್ತಿದೆ ಎಂಬುದು ಗೊತ್ತಿಲ್ಲ. ಹಣಮಸಾಗರ ಇನ್ನೊಂದು ನೇಕಾರರ ದೊಡ್ಡ ಕೇಂದ್ರವಾಗಿದೆ. ಅಲ್ಲಿ ರಸ್ತೆ ರಚನೆಗೆ ಒಳ್ಳೇ ಅವಕಾಶವಿದೆ. ಇದು ಮೂರು ಜಿಲ್ಲೆಗಳ ನಡುವಿನ ರಸ್ತೆಯಾಗಿರುವ ಮೂಲಕ ಈ ಕೆಲಸ ಬೇಗ ನಡೆಯಬೇಕು. ಇದನ್ನು ತೀವ್ರ ಮುಗಿಸಬೇಕು. ರಸ್ತೆ ರಚನೆಯ ಕೆಲಸ ಸರಿಯಾಗಿ ನಡೆಯುವದಕ್ಕೆ ಸಾಮಾನುಗಳನ್ನು ಸಕಾಲ ದಲ್ಲಿ ಒದಗಿಸಬೇಕು. ಅಲ್ಲಿಯ ಎಂಜಿನಿಯರ್ ಅವರಿಗೆ ಒಂದು ಜೀಪ್ ಗಾಡಿಯನ್ನು ಕೊಡಬೇಕು. ಒಂದು ಜೀಪ್ ವ್ಯವಸ್ಥೆಯನ್ನು ಮಾಡಿದರೆ ಅವರು ಹೆಚ್ಚಿನ ಸಮಯ ತೆಗೆದುಕೊಳ್ಳುವುದಿಲ್ಲ. ಮತ್ತು ಅನಾನುಕೂಲವಾಗುವುದು ಮುಖ್ಯವಾಗಿ ಇಳಕಲ್–ಕುಷ್ಟಗಿ ರಸ್ತೆ ರಚನೆಯಾಗ ಬೇಕಾದುದು ಸ್ಪೀಕರ್ ಅವರಿಗೂ ಕೂಡ ಗೊತ್ತಿದೆ. ಕೆಲಸ ಮಾತ್ರ ಇನ್ನೂ ಆಗಿಲ್ಲ. ದಯವಿಟ್ಟು ಈ ಕೆಲಸ ತೀವ್ರ ತೆಗೆದುಕೊಳ್ಳಬೇಕು. ಇದಕ್ಕೆ ಹೆಚ್ಚು ಗಮನ ಕೊಡಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಗಂಗಾವತಿ ಮತ್ತು ಲಿಂಗಸುಗೂರು ನಡುವೆ ಒಂದು ಹಳ್ಳ ಇದೆ. ಈ ರಸ್ತೆಯಾಗಿ 15 ವರ್ಷವಾಯಿತು. ಈಗ ಈ ರಸ್ತೆ ಕೆಟ್ಟುಹೋಗಿದೆ. ಈ ಹಳ್ಳಕ್ಕೆ ಸೇತುವೆಯನ್ನು ಕಟ್ಟಿಸಬೇಕು. ನಾಗಪ್ಪ ಹಳ್ಳ ಸೇತುವೆಯ ಬಗ್ಗೆ ಎಸ್ಟಿಮೇಟನ್ನು ರೀ ಎಸ್ಟಿಮೇಟು ಮಾಡುವದಕ್ಕೆ ತಿಳಿಸಿದ್ದಾರೆ. ಹೆಚ್ಚಿನ ಲಕ್ಷ ಕೊಟ್ಟು ಈ ಕೆಲಸ ತೀವ್ರ ಮಾಡಿಸಬೇಕು. ಎಂದು ಪ್ರಾರ್ಥಿಸುತ್ತೇನೆ. ಎಲ್ಲೆಲ್ಲಿ ರಸ್ತೆ ಬೇಕಾಗಿದೆ ಎಂಬುದನ್ನು ಪರಿಶೀಲನೆ ಮಾಡಿ, ಅದಕ್ಕೆ ಹಣ ಒದಗಿಸಿ ಕೆಲಸ ಪೂರ್ತಿ ಮಾಡಬೇಕು ಎಂದು ಮತ್ತೊಮ್ಮೆ ಹೇಳುತ್ತೇನೆ. ಈ ರೀತಿ ಮಾಡುತ್ತಾರೆಂದು ನನಗೆ ವಿಶ್ವಾಸ ಇದೆ. ಕೊನೆಯದಾಗಿ ಅಧ್ಯಕ್ಷರನ್ನು ವಂದಿಸಿ ನಾನು ಭಾಷಣ ಮುಗಿಸುತ್ತೇನೆ.

† ಶ್ರೀ ಬಿ. ಚಾಮಯ್ಯ (ಪಾಂಡವಪುರ).—ಸ್ವಾಮಿ, ಇವತ್ತಿನ ದಿವಸ ಈ ಸಭೆಯಲ್ಲಿ ಪ್ರಾಮುಖ್ಯವಾದ ವಿಷಯವನ್ನು ಚರ್ಚೆ ಮಾಡುತ್ತಿದ್ದೇವೆ. ಲೋಕೋಪಯೋಗಿ ಇಲಾಖೆಯು ದೇಶದಲ್ಲಿ ಬಹು ಮುಖ್ಯವಾದುದು. ನಮ್ಮ ಮೈಸೂರು ರಾಜ್ಯದ ಎಂಜಿನಿಯರುಗಳು ಬಹಳ ದಕ್ಷರು ಎಂದು ಹೆಸರುವಾಸಿಯಾಗಿದ್ದಾರೆ. ಆದುದರಿಂದ ಅವರ ದಕ್ಷತೆಯನ್ನು ಚೆನ್ನಾಗಿ ಕೆಲಸ ಮಾಡಲು ಉಪಯೋಗಿಸಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನೀರಾವರಿ ಯೋಜನೆ ಗಳು ಮತ್ತು ಇತರ ಕಾಂಗಾರಿಗಳು ಪ್ರಾಮುಖ್ಯವಾದುವು ಆಗಿವೆ. ಶರಾವತಿ ತುಂಗಭದ್ರಾ ಘಟಪ್ರಭಾ, ಮಲಪ್ರಭಾ ಹೀಗೆ ಅನೇಕ ದೊಡ್ಡ ದೊಡ್ಡ ಕಾಂಗಾರಿಗಳನ್ನು ಮಾಡಿಸುತ್ತಿದ್ದಾರೆ. ಇಂಥ ದೊಡ್ಡ ಕಾಂಗಾರಿಗಳು ಬೇಗನೆ ಆಗುವದಿಲ್ಲ. ನಿಧಾನವಾಗುತ್ತದೆ. ಆದುದರಿಂದ ಮೈನರ್ ಇರಿಗೇಷನ್ ಕಡೆಗೆ ಹೆಚ್ಚು ಗಮನ ಕೊಡಬೇಕು. ಯಾಕೆಂದರೆ ಇವುಗಳಿಂದ ಜಾಗ್ರತೆ

(ಶ್ರೀ ಬಿ. ಚಾಮಯ್ಯ)

ಲಾಭ ಸಿಕ್ಕುತ್ತದೆ. ದೇಶದಲ್ಲಿರುವ ಅನೇಕ ಕೆರೆಗಳನ್ನು ದುರಸ್ತಿ ಮಾಡಿಸಿದರೆ ಇನ್ನೂ ಹೆಚ್ಚು ಅನುಕೂಲ ಉಂಟಾಗುತ್ತದೆ. ಆಹಾರ ಉತ್ಪಾದನೆ ಜಾಸ್ತಿಯಾಗುತ್ತದೆ. ಈಗ 1.5 ಲಕ್ಷ ಎಕರೆ ಜಮೀನು ಸಾಗುವಳಿಗೆ ಬಂದುದು ತೃಪ್ತಿಕರವಾಗಿಲ್ಲ, ಮೂರು ಲಕ್ಷ ಎಕರೆ ಭೂಮಿ ನೀರಾವರಿಯಾಗಬೇಕು. ಈಗ ಆಹಾರದ ಕೊರತೆಯಿದೆ. ಆದುದರಿಂದ ಈ ವಿಚಾರದ ಬಗ್ಗೆ ಹೆಚ್ಚು ಮುತವರ್ಜಿ ವಹಿಸಬೇಕೆಂದು ಸರಕಾರದ ಗಮನಕ್ಕೆ ತರಲು ಇಚ್ಛೆ ಪಡುತ್ತೇನೆ.

ನಮ್ಮ ತಾಲ್ಲೂಕಿನ ವಿಷಯ, ನನ್ನ ಕ್ಷೇತ್ರದ ವಿಷಯವನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ನನ್ನ ಕ್ಷೇತ್ರದಲ್ಲಿ ಈಗ ನಾಲ್ಕು ವರ್ಷಗಳಿಂದ ಒಡೆದುಹೋದ ಕೆರೆಗಳನ್ನು ಜೀರ್ಣೋದ್ಧಾರ ಮಾಡಿದ್ದಾರೆ. ಅದಕ್ಕೆ 70-80 ರೂಪಾಯಿಗಳು ಖರ್ಚಾಗಿರಬಹುದು. ಅದು ಬೆಂಗಾಡು ಪ್ರದೇಶ. ಪಾಂಡವಪುರದ ಎರಡು ಹೋಬಳಿಗಳಂತೂ ಪೂರಾ ಬೆಂಗಾಡು ಪ್ರದೇಶ. ಅಲ್ಲಿ ರಸ್ತೆ ಸೌಕರ್ಯವಿಲ್ಲ, ನೀರಿನ ವಸತಿ ಇಲ್ಲ, ಅನೇಕಸಾರಿ ಈ ಬಗ್ಗೆ ಮನವಿಮಾಡಿಕೊಂಡರೂ ಕೆಲಸ ಸರಿಯಾಗಿ ಆಗಲಿಲ್ಲವೆಂದು ಈ ಸಂದರ್ಭದಲ್ಲಿ ಹೇಳಲು ವ್ಯಸನವಾಗುತ್ತದೆ. ಈಗಲಾದರೂ ನಮ್ಮಲ್ಲಿರುವ ಕೆರೆಗಳನ್ನು ದುರಸ್ತು ಮಾಡುವುದಲ್ಲದೆ ಹೊಸ ಕೆರೆಗಳನ್ನೂ ಸಹ ಕಟ್ಟಿಸಿ ಅಲ್ಲಿರುವ ಜನಗಳಿಗೆ ಪ್ರಯೋಜನವುಂಟುಮಾಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಮಂಡ್ಯ ಜಿಲ್ಲೆಯಲ್ಲಿರುವ ಏಳು ಸಬ್ ಡಿವಿಷನ್‌ಗಳಿಗೂ ಒಂದೇ ಒಂದು ಡಿವಿಷನ್ ಇದೆ. ಇದರಿಂದ ಕೆಲಸಗಳು ಬಹಳ ನಿಧಾನವಾಗುತ್ತಿವೆ. ಈಗಿರುವ ಡಿವಿಷನ್ನನ್ನು ಎರಡು ಮಾಡಿ, ಪಾಂಡವಪುರ, ಶ್ರೀರಂಗಪಟ್ಟಣ, ನಾಗಮಂಗಲ ಮತ್ತು ಕೃಷ್ಣರಾಜಪೇಟೆ ತಾಲ್ಲೂಕುಗಳನ್ನು ಸೇರಿಸಿ ಒಂದು ಡಿವಿಷನ್ ಪಾಂಡವಪುರದಲ್ಲಿ ಸ್ಥಾಪನೆ ಮಾಡಬೇಕು. ಇದರಿಂದ ಜನಗಳಿಗೆ ಪ್ರಯೋಜನವಾಗಿ, ಕೆಲಸ ತ್ವರಿತ ನಡೆಯುತ್ತದೆ. ಅದಷ್ಟು ಜಾಗ್ರತೆ ಜನಗಳು ಕುಂದುಕೊರತೆಗಳ ನಿವಾರಣೆಗಾಗಿ ಪಾಂಡವಪುರದಲ್ಲಿ ಒಂದು ಡಿವಿಷನ್ ಸ್ಥಾಪನೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ಬೋಳೇನಹಳ್ಳಿ ಅಣೆಕಟ್ಟನ್ನು ಕಟ್ಟಲು ಪ್ರಾರಂಭ ಮಾಡಿ ಹತ್ತು ವರ್ಷವಾಯಿತು. ಮೊದಲು ಇದರ ಅಂದಾಜು ಮೂರುವರೆ ಲಕ್ಷ ರೂಪಾಯಿ ಇದ್ದುದು ಆರು ಲಕ್ಷವಾಗಿ ಅಲ್ಲಿಂದ ಒಂಬತ್ತು ಲಕ್ಷಕ್ಕೆ ಏರಿತು, ಈಗ ಹನ್ನೆರಡು ಲಕ್ಷಕ್ಕೆ ಅಂದಾಜಾಗಿದೆ ಎಂದು ಹೇಳುತ್ತೇನೆ. ಇದರ ಕೆಲಸ ನಿಂತುಹೋಗಿ ಎರಡು ವರ್ಷವಾಯಿತು. ಈಗ ಇದಕ್ಕಾಗಿ ಖರ್ಚು ಮಾಡಿರುವ ಹಣ ಬಹಳವಾಗಿದ್ದರೂ, ಅದರಿಂದ ಜನಗಳಿಗೆ ಯಾವ ಪ್ರಯೋಜನವೂ ಆಗಿಲ್ಲ. ಸರ್ಕಾರಕ್ಕೂ ಏನೂ ಪ್ರಯೋಜನವಿಲ್ಲ. ಸರ್ಕಾರಕ್ಕೆ ಕಂದಾಯದ ಮೂಲಕ ಪ್ರಯೋಜನವಾಗಿಲ್ಲ. ಜನಗಳಿಗೆ ಅದರಿಂದ ನೀರನ್ನೂ ತೆಗೆದುಕೊಂಡು, ಜಮೀನಿನಲ್ಲಿ ವ್ಯವಸಾಯ ಮಾಡಿಸಲು ತೆಗೆದುಕೊಳ್ಳಲು ಪ್ರಯೋಜನವಾಗಿಲ್ಲ. ಇಷ್ಟು ತಾತ್ಸಾರದಿಂದ ಕೆಲಸ ನಡೆಯುತ್ತಿದೆಯೆಂದು ಹೇಳಲು ಬಹಳ ವ್ಯಸನವಾಗುತ್ತದೆ. ಜನಗಳಿಗೆ ಪ್ರಯೋಜನವಾಗುವ ಕೆಲಸವನ್ನು ಮಾಡಬೇಕು. ನಾವೆಲ್ಲರೂ ದೇಶಕ್ಕೆ ಸಲ್ಲಿಸುವುದಕ್ಕೆ ಇದ್ದೇವೆ. ಈ ಅಣೆಕಟ್ಟಿನ ಕೆಲಸ ಪೂರ್ತಿಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಮಾಡುತ್ತಿದ್ದೇನೆ.

ಈ ಇಲಾಖೆಯಲ್ಲಿ ಕೆಲಸಗಳು ಬಹಳ ಜರೂರಾಗಿ ನಡೆಯುತ್ತಿಲ್ಲ. ಇದಕ್ಕೆ ರಿಕಾರ್ಡ್‌ಗಳು ಮೇಲಿನಿಂದ ಕೆಳಕ್ಕೆ ಮತ್ತು ಕೆಳಗಿನಿಂದ ಮೇಲಕ್ಕೆ ಓಡಾಡುವದೇ ಕಾರಣ. ಇದರಿಂದ ನಾಲ್ಕಾರು ವರ್ಷವಾದರೂ ಒರಡು ಎಸ್ಟಿಮೇಟ್ ಮಂಜೂರಾಗದೆಯಿರುವುದನ್ನು ನೋಡಬಹುದು. ನಾನು ಇಂಟರ್‌ಪೆಲೇಷನ್ ಮೂಲಕ ಒಂದು ಕೆರೆಯ ವಿಷಯ ಕೇಳಿದ್ದೆ. ಅದರ ಅಂದಾಜು ತಯಾರಾಗಿ ಆರು ವರ್ಷವಾಗಿದೆ. ಇನ್ನೂ ಮಂಜೂರಾಗಿಲ್ಲ. ಈಗ ಅದು ಸರ್ಕಾರಕ್ಕೆ ಬಂದಿದೆಯೆಂದು ವರ್ತಮಾನ ಕೇಳಿದ್ದೇನೆ. ಇದನ್ನು ಆದಷ್ಟು ಜಾಗ್ರತೆ ಮಾಡಿಸಿಕೊಡ

ಬೇಕೆಂದು ಕೇಳುತ್ತೇನೆ. ರಿಕಾರ್ಡ್‌ಗಳು ಏಕೆ ಸರಿಯಾಗಿ ಮುಂದಕ್ಕೆ ಹೋಗುವುದಿಲ್ಲವೆನ್ನುವುದು ತಮಗೆಲ್ಲ ಗೊತ್ತು. ಅಲ್ಲಿರುವ ಲಂಚಕೋರತನವನ್ನು ಮುಖ್ಯವಾಗಿ ಹೋಗಲಾಡಿಸಬೇಕು. ಇಲ್ಲದೆ ಹೋದರೆ ಕೆಲಸ ಸಲೀಸಾಗಿ ನಡೆಯುವುದಿಲ್ಲ. ಇದನ್ನು ಸರ್ಕಾರ ಮನಸ್ಸಿಗೆ ತೆಗೆದುಕೊಂಡು ಲಂಚಗುಳಿತನವನ್ನು ನಿಲ್ಲಿಸಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ.

ಸಣ್ಣ ನೀರಾವರಿ ಕಾರ್ಯಗಳನ್ನೆಲ್ಲ ತಾಲ್ಲೂಕು ಬೋರ್ಡ್‌ಗಳಿಗೆ ವಹಿಸುತ್ತಾರೆಂಬ ಸಮಾಚಾರವನ್ನು ನಾನು ಪತ್ರಿಕೆಗಳಲ್ಲಿ ಓದಿದೆ. ತಾಲ್ಲೂಕು ಬೋರ್ಡ್‌ಗಳಿಗೆ ಈ ಕೆಲಸವನ್ನು ವಹಿಸಿದರೆ. ದೇಶಕ್ಕೆ ಅದಕ್ಕಿಂತ ಹೆಚ್ಚಿನ ಅನ್ಯಾಯ ಬೇರೆ ಇಲ್ಲ. ಈಗಲೇ ಇಷ್ಟೊಂದು ತೊಂದರೆಯಿದೆ. ಇನ್ನು ತಾಲ್ಲೂಕು ಬೋರ್ಡಿಗೆ ವಹಿಸಿದರೆ ಏನೇನೂ ಕೆಲಸವಾಗುವುದಿಲ್ಲ- ಎಲ್ಲ ಹಾಳಾಗಿ ಹೋಗುತ್ತದೆ. ದಯವಿಟ್ಟು ಆ ರೀತಿ ಮಾಡಬಾರದು. ಸರ್ಕಾರದ ವಶದಲ್ಲಿಯೇ ಇರಬೇಕು ಎಂದು ಹೇಳುತ್ತೇನೆ.

ಕಣ್ಣೂರು ಕೆರೆಗೆ ನೀರನ್ನು ನಾಲೆಯಿಂದ ತಂದು ಒದಗಿಸಿದರು. ಕೆರೆಯಲ್ಲಿ ನೀರು ನಿಂತುದರಿಂದ ಎರಡು ಮೂರು ಗ್ರಾಮಗಳಿಗೆ ಸೇರಿದ ಜಮೀನು ಮುಳುಗಡೆಯಾಯಿತು. ಹತ್ತು ಹನ್ನೆರಡು ವರ್ಷವಾದರೂ ಆ ಗ್ರಾಮದ ಜನಗಳಿಗೆ ಕಾಂಪೆನ್‌ಸೇಷನ್ ಕೊಟ್ಟಿಲ್ಲ. ಅವರು ಬೇರೆ ಕಡೆ ಜಮೀನನ್ನೂ ಕೇಳಿದರೂ ಕೊಟ್ಟಿಲ್ಲ. ಸುಮಾರು 200 ಎಕರೆ ಜಮೀನು ಮುಳುಗಡೆಯಾಗಿದೆ. ಇಷ್ಟು ತ್ವರಿತವಾಗಿ ಕೆಲಸಕಾರ್ಯಗಳು ನಡೆಯುತ್ತಿವೆಯೆಂದು ಹೇಳಬೇಕಾದರೆ ಬಹಳ ವ್ಯಸನವಾಗುತ್ತದೆ.

ರೂರಲ್ ಕಮ್ಯುನಿಕೇಷನ್ಸ್ ವಿಚಾರ ಹೇಳಬೇಕಾದರೆ ಎಲ್ಲ ಕಡೆಯೂ ರಸ್ತೆಗಳನ್ನು ಮಾಡಿಸಿದ್ದಾರೆ. ಬರೀ ಮಣ್ಣು ರಸ್ತೆಗಳನ್ನು ಮಾಡಿಸಿದ್ದಾರೆ. ಈ ವಿಚಾರದಲ್ಲಿ ಹಿಂದೆ ಮಾತನಾಡಿದ ಮಹನೀಯರು ಹೇಳಿದ್ದಾರೆ. ಮಳೆ ಬಂದರೆ ಎಲ್ಲ ಕೊಚ್ಚಿಕೊಂಡು ಹೋಗುತ್ತದೆ. ರೈತರ ಜಮೀನುಗಳಲ್ಲಿ ಈ ರಸ್ತೆಗಳನ್ನು ಮಾಡಿಸಿರುವುದರಿಂದ ಅವರು ಉತ್ತುಬಿಟ್ಟರೆ ರಸ್ತೆ ಹಾಳಾಗುತ್ತದೆ. ಇಂಥ ರಸ್ತೆಗಳಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ, ಜನಗಳಿಗೂ ಅನುಕೂಲವಾಗುವುದಿಲ್ಲ ಆದುದರಿಂದ ಪಕ್ಕ ರಸ್ತೆಗಳನ್ನು ಮಾಡಲು ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮನ್ನು ಕೇಳಿಕೊಳ್ಳುತ್ತೇನೆ.

ಗೊರೂರು ಅಣೆಕಟ್ಟು ಕಟ್ಟಿದರೆ ಪಾಂಡವಪುರ ಮತ್ತು ಕೃಷ್ಣರಾಜಪೇಟೆ ತಾಲ್ಲೂಕುಗಳಿಗೆ ಪ್ರಯೋಜನವಾಗುತ್ತದೆ ಎಂದು ಕೇಳಿದ್ದೆವು. ಇವೊತ್ತು ಏನಾಗಿದೆ ಎಂದರೆ ಇದರ ಎತ್ತರವನ್ನು 133 ಅಡಿಗಳಿಂದ 121 ಅಡಿಗಳಿಗೆ ಇಳಿಸಿದ್ದಾರೆ ಎಂದು ಕೇಳುತ್ತಿದ್ದೇವೆ. ಎತ್ತರವನ್ನು ಕಡಮೆ ಮಾಡಿದರೆ ನಮ್ಮ ಪ್ರಾಂತಕ್ಕೆಲ್ಲ ಬಹಳ ತೊಂದರೆಯಾಗುತ್ತದೆ ಮತ್ತು ನೀರು ಬಂದಿತೇ ನೀರು ಬಂದಿತೇ ಎಂದು ಕಾದು ನೋಡುತ್ತಿರುವ ಆ ಪ್ರಾಂತದ ರೈತರಿಗೆಲ್ಲ ಬಹಳ ವ್ಯಸನವಾಗುತ್ತದೆ. ಆದುದರಿಂದ ಗೊರೂರು ಅಣೆಕಟ್ಟಿನ ಎತ್ತರವನ್ನು 133 ಅಡಿಗಳಿಗೆ ಇಟ್ಟುಕೊಂಡು ಪಾಂಡವಪುರ ಮತ್ತು ಕೃಷ್ಣರಾಜಪೇಟೆ ತಾಲ್ಲೂಕುಗಳಿಗೆ ನೀರನ್ನೊದಗಿಸುವುದಕ್ಕೆ ಏರ್ಪಾಡು ಮಾಡಬೇಕು. ಹಾಗೆಯೇ ಕಣ್ಣೂರು ಕೆರೆಗೆ ನೀರು ಸರಬರಾಜು ಆದರೆ, ಅದರ ಕೆಳಗಡೆ ಜಮೀನಿರುವ ರೈತರಿಗೆ ಅನುಕೂಲವಾಗುತ್ತದೆ. ಆದರೂ ಹೆಚ್ಚು ಬೆಳೆ ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಇದನ್ನೆಲ್ಲ ಮಾನ್ಯ ಮಂತ್ರಿಗಳು ಗಮನದಲ್ಲಿಟ್ಟುಕೊಂಡು ಆ ಭಾಗದ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಕೆಲಸ ಮಾಡಬೇಕು ಎಂದು ಈ ಸಂದರ್ಭದಲ್ಲಿ ತಮ್ಮನ್ನು ಕೇಳುತ್ತೇನೆ.

ಪಾಂಡವಪುರ ಟೌನಿಗೆ ನೀರು ಸರಬರಾಜು ಸರಿಯಾಗಿಲ್ಲ ಜನ ಬಹಳ ತೊಂದರೆ ಪಡುತ್ತಿದ್ದಾರೆ. ಈ ಕಾರ್ಯವನ್ನು ಆದಷ್ಟು ಬೇಗ ಮಾಡುವುದಕ್ಕೆ ಸರ್ಕಾರದವರು ಕೊಡತಕ್ಕ ಗ್ರಾಂಟನ್ನು ಕೊಟ್ಟು, ಪಾಂಡವಪುರದ ಜನರಿಗೆ ಕುಡಿಯುವ ನೀರನ್ನು ಒದಗಿಸಲು ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮನ್ನು ಕೇಳುತ್ತಿದ್ದೇನೆ.

(ಶ್ರೀ ಬಿ. ಚಾಮಯ್ಯ)

ನೀರಾವರಿ ಪಂಪ್‌ಗಳಿಗೆ ರಾತ್ರಿಯವೇಳೆ ಮಾತ್ರ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆಂದು ಹೇಳುತ್ತಾರೆ, ರಾತ್ರಿವೇಳೆ ಕೊಡುವುದರಿಂದ ಜನಗಳಿಗೆ ಬಹಳ ತೊಂದರೆಯಾಗುತ್ತದೆ. ರಾತ್ರಿ ಹೊತ್ತು ಜಮೀನನ್ನು ಕಾದುಕೊಂಡಿದ್ದು ನೀರನ್ನು ಹಾಯಿಸಿ ಫಸಲನ್ನು ಬೆಳೆಯಬೇಕಾದರೆ ಬಹಳ ತೊಂದರೆಯಾಗುತ್ತದೆ. ಬೆಳಗ್ಗೆ ನಾಲ್ಕು ಗಂಟೆಯಿಂದ ವಿದ್ಯುಚ್ಛಕ್ತಿಯನ್ನು ಕೊಟ್ಟು ವ್ಯವಸಾಯಕ್ಕೆ ಅನುಕೂಲ ಮಾಡಿಕೊಡಬೇಕು.

ಶ್ರೀ ಎಚ್. ಕೆ. ವೀರಣ್ಣಗೌಡ.—ಮೂರು ನಾಲ್ಕು ಜನ ಸದಸ್ಯರು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈ ವಿಚಾರ ಸರ್ಕಾರದವರ ತೀವ್ರಾಲೋಚನೆಯಲ್ಲಿದೆ. ಬೆಳಗ್ಗೆ ನಾಲ್ಕು-ನಾಲ್ಕುವರೆ ಗಂಟೆಯಿಂದ ಒಂಬತ್ತು ಗಂಟೆಯವರೆಗೆ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಸಾಧ್ಯವಿಲ್ಲವೇ ಎಂದು ನಾವು ವಿದ್ಯುಚ್ಛಕ್ತಿ ಮಂಡಳಿಯವರನ್ನು ಕೇಳಿದ್ದೇವೆ. ಚೀಫ್ ಇಂಜಿನಿಯರ್ ಸಂಗಡ ಆಲೋಚನೆ ಮಾಡಿ ಉತ್ತರ ಕೊಡುವವರಾಗಿದ್ದಾರೆ. ಬಹುತಃ ಅದು ಸಾಧ್ಯವಾಗಬಹುದು ಎಂದು ಅಂದಾಜಿನ ಮೇಲೆ ಹೇಳಿದ್ದಾರೆ. ಬಹುಶಃ ಆ ರೀತಿ ಮಾಡುವುದಕ್ಕೆ ಸಾಧ್ಯವೆನ್ನಿಸುತ್ತದೆ.

ಶ್ರೀ ಬಿ. ಚಾಮಯ್ಯ.—ಬಹಳ ಸಂತೋಷ ಸ್ವಾಮಿ.

ಈಗ ನಮ್ಮ ತಾಲ್ಲೂಕಿನಲ್ಲಿ ಕೃಷ್ಣರಾಜಸಾಗರದಿಂದ ಮುಳುಗಡೆಯಾಗಿರುವ ಪ್ರದೇಶದ ಜನರು ಬಂದು ಸೇರಿದ್ದಾರೆ. ಅವರಿಗೆ ಏನೂ ಸೌಕರ್ಯಗಳಿಲ್ಲ. ಅದು ಒಣ ಪ್ರದೇಶವಾಗಿದೆ. ಇಲ್ಲಿ Lift irrigation ಮಾಡಬೇಕೆನ್ನುವ ವಿಷಯ ಪರ್ಯಾಲೋಚನೆಯಲ್ಲಿದೆ. ಆ ಕಡೆಯ ಜನರೆಲ್ಲ ಬಹಳ ಕಾತುರದಿಂದ ಈ ಯೋಜನೆ ಜಾರಿಗೆ ಬರುವುದನ್ನು ನೋಡುತ್ತಿದ್ದಾರೆ. ಆ ಜನರು ತಮಗೆ ಉತ್ತಮವಾದ ಜಮೀನು ತೋಟ ಇವನ್ನೆಲ್ಲ ಕಳೆದುಕೊಂಡು ಬಂದು ಒಣ ಪ್ರದೇಶದಲ್ಲಿದ್ದಾರೆ. ಇವರಿಗೆ lift irrigation ಸೌಲಭ್ಯವನ್ನು ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿ ಈ ಅವಕಾಶವನ್ನು ಕೊಟ್ಟಿದ್ದಕ್ಕೋಸ್ಕರ ಅಧ್ಯಕ್ಷರಿಗೆ ಮಂಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-30 P.M.

†ಶ್ರೀ. ಜಿ. ಬಿ. ಶಂಕರರಾವ್.—(ಹಿರೇಕರೂರು) ಮಾನ್ಯಸಭಾಧ್ಯಕ್ಷರೇ, ಸಿವಿಲ್ ಕಾಮಗಾರಿಗಳು ಮತ್ತು ಇದರ ಉಪಯೋಗಕ್ಕೆ ಸಂಬಂಧಪಟ್ಟ ಬೇಡಿಕೆಗಳಿಗೆ ಅನುಮೋದನೆಯನ್ನು ನೀಡುತ್ತಾ ಈ ಇಲಾಖೆಗೆ ಸಂಬಂಧಿಸಿದ ಕೆಲವು ವಿಚಾರಗಳನ್ನು ಈ ಸಭೆಯ ಮುಂದೆ ಇಡಬೇಕೆಂದಿದ್ದೇನೆ.

ಈ ಸಭೆಯಲ್ಲಿ ಅನೇಕ ಮಾನ್ಯ ಸದಸ್ಯರು ಈ ಇಲಾಖೆಯ ಪ್ರಗತಿಯ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಲೋಕೋಪಯೋಗಿ ಶಾಖೆ ಮೂರು ನಾಲ್ಕು ವರ್ಷಗಳ ಅವಧಿಯಲ್ಲಿ ಇತರ ರಾಜ್ಯಗಳಿಗೆ ಹೋಲಿಸಿನೋಡಿದರೆ ಹೆಚ್ಚಿನ ಪ್ರಮಾಣದಲ್ಲಿ ಪ್ರಗತಿಯನ್ನು ಸಾಧಿಸಿರುವುದು ನಮ್ಮ ರಾಜ್ಯದಲ್ಲಿ ಕಂಡುಬರುತ್ತದೆ. ಅದರಲ್ಲೂ ವಿಶೇಷವಾಗಿ ರಸ್ತೆಯ ವಿಚಾರದಲ್ಲಿ ನಮ್ಮ ರಾಜ್ಯ ಸರಕಾರದವರು ನೆರೆಯ ರಾಜ್ಯಗಳಿಗಿಂತ ವಿಶೇಷವಾಗಿ ಹೆಮ್ಮೆ ಪಡುವಂತೆ ಕೆಲಸಮಾಡಿದ್ದಾರೆ. ಅದರಲ್ಲೂ ಹೋದವರ್ಷ ಲೋಕೋಪಯೋಗಿ ಶಾಖೆಯವರು "Rural Communication Programme" ಎಂದು ಯೋಜನೆಯನ್ನು ಹಾಕಿಕೊಂಡು ಈ ದೇಶದಲ್ಲಿ ಹಿಂದುಳಿದ ಭಾಗಗಳಿಗೆ ರಸ್ತೆಯ ಸೌಕರ್ಯವನ್ನು ಒದಗಿಸಿಕೊಟ್ಟಿದ್ದಾರೆ. ಹಿಂದೆ ಎಂದೂ ಸಾಧಿಸದಷ್ಟು ಪ್ರಗತಿ ನಿಜವಾಗಿಯೂ ನಮ್ಮ ದೇಶದ ಜನಗಳಿಗೆ ಅತ್ಯಂತ ಪ್ರಗತಿಯುತವಾದ ಮೆಚ್ಚಿಕೆಯನ್ನು ತರುವಂತಹ ಪ್ರಗತಿ ಈ ಇಲಾಖೆ ಸಾಧಿಸಿದೆ. ರಸ್ತೆ, ಕುಡಿಯುವ ನೀರಿನ ಬಾವಿ, ಶಾಲೆ, ಇವೆಲ್ಲಾ ನಮ್ಮ ದೇಶದ ಜನಗಳಿಗೆ ಬೇಕಾದ ಬೇಡಿಕೆಗಳು. ಇವನ್ನೆಲ್ಲಾ ನಮ್ಮ ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಪೂರ್ತಿಯಾಗಿ ಆಗುತ್ತದೆ ಎಂದು ಹೇಳುತ್ತಿದ್ದಾರೆ. ಅದರಲ್ಲೂ ರಸ್ತೆ

ನಮ್ಮ ದೇಶದಲ್ಲಿ ಹೋದವರ್ಷ ಮಾಡಿದುದಕ್ಕಿಂತಲೂ ಇನ್ನೂ ಹೆಚ್ಚಿನ ಪ್ರಮಾಣದಲ್ಲಿನ ನಮ್ಮ ಜಿಲ್ಲೆಗಳಿಗೆ ಬೇಕಾಗಿವೆ. ಈಗಾಗಲೇ ಹೆಚ್ಚಿಗೆ ರಸ್ತೆಗಳಿದರೆ ಅಂತಹ ಕಡೆಗಳಲ್ಲಿ ರಸ್ತೆಗಳು ಬೇಕಿಲ್ಲದಿದ್ದರೂ ಹಿಂದುಳಿದ ಪ್ರದೇಶಗಳಿಗೆ ಇನ್ನೂ ಹೆಚ್ಚಿನ ರಸ್ತೆಗಳು ಬೇಕಾಗಿರುತ್ತದೆ. ಈ ರೂರಲ್ ಕಮ್ಯೂನಿಕೇಷನ್ಸ್ ಪ್ರೋಗ್ರಾಂ ಎನ್ನುವುದನ್ನು ಇನ್ನು ಮುಂದುರಿಸಿಕೊಂಡು ಜನಗಳಿಗೆ ಅಗತ್ಯವಾದ ಮತ್ತು ತೀವ್ರವಾಗಿ ಬೇಕಾಗಿರುವ ಶಾಲೆಗಳು, ಇವನ್ನೆಲ್ಲಾ ನಮ್ಮ ಜನರಿಗೆ ಇನ್ನೂ ಹೆಚ್ಚಾಗಿ ಮಾಡಿಕೊಳ್ಳು ಜನರ ಮೆಚ್ಚಿಕೆಯನ್ನು ಪಡೆಯುತ್ತಾರೆಂದು ನಾನು ಆಶಿಸುತ್ತೇನೆ. ಇನ್ನು ಕೆಲವು ಕಡೆಗೆ, ಇಲಾಖೆಗೆ ಬೇಕಾದ ಹಣವನ್ನು ಒದಗಿಸಿದ್ದರೂ ಕೂಡ, ಸರಕಾರದವರು ಕೆಲಸಗಳಿಗೆ ಮಂಜೂರಾತಿಯನ್ನು ಕೊಟ್ಟಿದ್ದರೂ ಕೂಡ ಕೆಲಸಗಳು ಪ್ರಗತಿಯಿಂದ ಆಗದೆ ಇವೆ. ಇದಕ್ಕೆ ಅತಂಹ ಅಡ್ಡಿಗಳೇನೂ ಅಲ್ಲ. ನಾನೂ ಈ ವಿಚಾರದಲ್ಲಿ ಇಲಾಖೆಯ ಅಧಿಕಾರಿಗಳೊಡನೆ ಆಲೋಚನೆಮಾಡಿದೆ ಮತ್ತು ಕೆಲಸ ನಡೆಸುವ ಕಂಟ್ರಾಕ್ಟರುಗಳೊಡನೆಯೂ ಆಲೋಚನೆ ಮಾಡಿದ್ದೇನೆ. ಕೆಲವು ಕಡೆ ಮಾಡಿರುವ ಅಂದಾಜುಗಳಲ್ಲಿ ದೋಷವಿದೆ ಎಂದು ಕೆಲ ಕೆಲವು ಕಂಟ್ರಾಕ್ಟರುಗಳು ಅವರಿಗೆ ಬಂದಿರುವ ಅಂದಾಜುಗಳು ಮಂಜೂರಾಗಿ ಬಂದು ಎರಡು ವರ್ಷಗಳಾಗಿದ್ದರೂ ಕೆಲಸ ಪ್ರಾರಂಭವಾಗಿಲ್ಲ ಎಂದು ಹೇಳಿದರು. ಇದಕ್ಕೆ ದೋಷಯುಕ್ತವಾದ ಅಂದಾಜುಗಳೇ ಕಾರಣವೆಂದು ಹೇಳುತ್ತಾರೆ. ಸರಕಾರದವರು ಇದನ್ನು ಪರಿಶೀಲನೆಮಾಡಬೇಕು. ಕಂಟ್ರಾಕ್ಟರುಗಳು ದೋಷಯುಕ್ತವಾದ ಅಂದಾಜುಗಳನ್ನು ಮಾಡಿದರೆ ನಷ್ಟವಾಗುತ್ತದೆ. ಸರಕಾರದ ಮಂಜೂರಾತಿ ದೊರೆತಿದ್ದರೂ ಅದರಂತೆ ಕೆಲಸ ವಾಗದೇ ಇರುವುದು ಬಹಳ ವಿಷಾದದ ಸಂಗತಿ. ಇದರ ಕಡೆ ತೀವ್ರವಾದ ಗಮನವನ್ನು ಸರಕಾರ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ಬಡ್ಜೆಟ್ಟನ್ನು ತಯಾರುಮಾಡುವುದರಲ್ಲಿ ಸರಕಾರ ಸರ್ವೇ ಸಾಮಾನ್ಯವಾದ ಒಂದು ನೀತಿಯನ್ನು ಅನುಸರಿಸಬೇಕಾಗಿತ್ತು ಎಂದು ಈ ಸಭೆಯಲ್ಲಿ ಹೇಳುತ್ತೇನೆ. ಈ ಸಾಲದ ಬಡ್ಜೆಟ್ಟಿನಲ್ಲಿ ಕೆಲಸವನ್ನು ಮಾಡದೇ ಇದ್ದರೂ ಅಂತಹ ಒಂದು ದೊಡ್ಡ ಲಿಸ್ಟು ಬಡ್ಜೆಟ್ಟಿನಲ್ಲಿ ಸೇರಿಸಲಾಗಿದೆ. ಇದು "List of unsanctioned works" ಎಂದು ಬರುತ್ತದೆ. ಕೆಲವು ಡಿವಿಜನ್ನುಗಳಲ್ಲಿ ಎಕ್ಸಿಕ್ಯೂಟೀವ್ ಇಂಜನೀಯರುಗಳು ಕೆಲಸಮಾಡದಿದ್ದರೆ ಅಂತಹ ಕೆಲಸಗಳು ಆಗಿಲ್ಲ ಎಂದು ಈ ರೀತಿಯಾಗಿ ಬಡ್ಜೆಟ್ಟಿನಲ್ಲಿ ಹಾಕಿ ಬಿಟ್ಟಿದ್ದಾರೆ. ಇದೇ ಮುಂದಿನ ಸಾಲಿನ ಬಡ್ಜೆಟ್ಟಿನಲ್ಲಿಯೂ ಬರುತ್ತಿರುತ್ತವೆ ಅದುದರಿಂದ ಸರಕಾರದವರು ಇಂತಹ ಡಿವಿಜನ್ನುಗಳಲ್ಲಿ ಸರಿಯಾದ ಪ್ರಮಾಣದಲ್ಲಿ ಇಷ್ಟು ಕೆಲಸ ಪೂರ್ತಿಯಾಗಬೇಕು ಎಂದು ಒತ್ತಾಯವನ್ನು ಮುಂಜಾಗರೂಕತೆಯಿಂದ ಆಜ್ಞೆ ಮಾಡಿದರೆ ಎಷ್ಟೋ ಕೆಲಸಗಳು ಪೂರ್ತಿಯಾಗಬಹುದು. ಹಾಗಿಲ್ಲದೇ ಹೋದರೆ, ಜನರಿಗೆ ಈ ಲೋಕೋಪಯೋಗಿ ಖಾತೆಯ ಕೆಲಸಗಳು ಸರಿಯಾದ ಪ್ರಮಾಣದಲ್ಲಿ ನಡೆಯಲಾರದು. ದೋಷಯುತವಾದ ಅಂದಾಜುಗಳು ಇರುವುದರಿಂದ ದೇಶದ ಪ್ರಗತಿ ಸರಿಯಾದ ಪ್ರಮಾಣದಲ್ಲಿ ಸಾಧಿಸಲು ಆಗುತ್ತಿಲ್ಲ. ಇದನ್ನು ಸರಕಾರ ತೀವ್ರವಾಗಿ ಗಮನ ಕೊಟ್ಟು ಪರಿಶೀಲಿಸಬೇಕೆಂದು ನಾನು ವಿನಯದಿಂದ ಕೇಳಿಕೊಳ್ಳುತ್ತೇನೆ.

ಇದೂ ಅಲ್ಲದೆ ಈವರ್ಷದ ಬಡ್ಜೆಟ್ಟಿನಲ್ಲಿ ಮೂರನೆ ಪಂಚವಾರ್ಷಿಕ ಯೋಚನೆಯಲ್ಲಿ, ಯೋಜನೆಯ ಕರಡಿನಲ್ಲಿದ್ದ ಮೀಡಿಯಂ ಇರಿಗೇಷನ್ ಪ್ರಾಜೆಕ್ಟ್ ಕೆಲವು ಇದ್ದದ್ದು ಈ ಬಡ್ಜೆಟ್ಟಿನಲ್ಲಿ ಬಂದಿಲ್ಲ. ಇದಕ್ಕೆ ಕಾರಣವೂ ಇರಬಹುದು. ಎರಡನೇ ಪಂಚವಾರ್ಷಿಕ ಯೋಜನೆಯ ಕೆಲಸ ಪ್ರಾರಂಭವಾಗಿ ಇನ್ನು ಮುಗಿಯದೇ ಇರುವಾಗ ಮೀಡಿಯಂ ಇರಿಗೇಷನ್ ಪ್ರಾಜೆಕ್ಟ್‌ಗಾಗಿ ಇನ್ನೂ ಪ್ರಾತಿನಿಧ್ಯವನ್ನು ಕೊಡಲಿಕ್ಕೆ ಆಗದೇ ಇರುವುದು ಒಂದು ದೋಷ ಎಂದು ಸರಕಾರಕ್ಕೆ ಹೇಳುತ್ತೇನೆ. ಮುಂದಿನ ವರ್ಷದಿಂದ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಮೀಡಿಯಂ ಇರಿಗೇಷನ್ನು ಪ್ರಾಜೆಕ್ಟುಗಳ ಕೆಲಸವನ್ನು ತ್ವರಿತದಿಂದ ಮಾಡಿಸಬೇಕೆಂದು ನಾನು ಸರಕಾರಕ್ಕೆ ಕೇಳಿಕೊಳ್ಳುತ್ತೇನೆ. ಇಂತಹ ಒಂದು ಪ್ರಾಜೆಕ್ಟನ್ನು ತಾಲ್ಲೂಕಿನಲ್ಲಿಯೂ ಒಂದು ಇದೆ. ಇದನ್ನು ಹಿಂದೆ ಮಾನ್ಯ ಮಂತ್ರಿಗಳು ಬಂದು ಈ ಪ್ರಾಜೆಕ್ಟನ್ನು ನೋಡಿ, ಇದನ್ನು

(ಶ್ರೀ ಜಿ. ಬಿ. ಶಂಕರರಾವ್)

ಮಾಡಲು ಸೂಚನೆ ಕೊಡಬಹುದು ಎಂದು ಬಹಳ ಸಂತೋಷದಿಂದ ಇಲ್ಲಿ ಕೆಲಸ ಮಾಡಿಕೊಡಲು ಇದನ್ನು ಚೆನ್ನಾಗಿ ಪರಿಶೀಲನೆ ಮಾಡಿದ್ದರು. ಇದು ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿದೆ. ಸುಮಾರು ಎಂಭತ್ತೈದುಸಾವಿರ ರೂಪಾಯಿಗಳ ಕೆಲಸ ಇದನ್ನು ಮಾಡಲು ಶ್ರಮ ಕಡಿಮೆ ಮಣ್ಣು ತುಂಬಿಕೊಂಡಿರುವ ಪ್ರದೇಶ ಕಡಿಮೆ ಇದೆ. ಹೆಚ್ಚಿನ ಶ್ರಮ ಪಡತಕ್ಕ ಕೆಲಸವೇನೂಇಲ್ಲ. ಈ ಒಂದು ಕೆರೆ ಸೌಕರ್ಯ ಸುಮಾರು 27 ಮೈಲ ದೂರದ ಜನಗಳಿಗೆ ಅನುಕೂಲವಾಗಿ ಸುಮಾರು ಇಪ್ಪತ್ತೈದು ಸಾವಿರ ಎಕರೆಯಷ್ಟು ನೀರಾವರಿ ಮಾಡಲು ಅವಕಾಶವಾಗುತ್ತದೆ. ಈ ವರ್ಷವೇ ಇಲ್ಲಿ ಕೆಲಸ ಮಾಡಲಿಕ್ಕೆ ಯೋಚನೆ ಮಾಡಬೇಕು ಎಂದು ಸರಕಾರದವರನ್ನು ನಾನು ಕೇಳಿಕೊಳ್ಳುತ್ತೇನೆ.

ನನ್ನ ತಾಲ್ಲೂಕಿನ ಮಟ್ಟಿಗೆ ಒಂದು ವಿಚಾರ ಹೇಳಬೇಕಾಗಿದೆ. 1959ನೇ ಇಸವಿಯಲ್ಲಿ ಈ ಇಲಾಖೆಯಲ್ಲಿ ಪುನರ್ವಿಂಗಡಣೆಯಾದ ನಂತರ ಈ ಹಿಂದೆ ನನ್ನ ತಾಲ್ಲೂಕು ಆದ ಹಿರೇಕರೂರಿನಲ್ಲಿ ಒಂದು ಪಿ. ಡಬ್ಲ್ಯು. ಡಿ. ಡಿವಿಜನ್ನು ಇತ್ತು. ಇದನ್ನು ತಗೆದು ಬ್ಯಾಡಗಿನಲ್ಲಿಟ್ಟು ನನ್ನ ತಾಲ್ಲೂಕಾದ ಹಿರೇಕರೂರು ಮತ್ತು ಬ್ಯಾಡಗಿ ಈ ಎರಡು ತಾಲ್ಲೂಕುಗಳಿಗೂ ಸೇರಿದಂತೆ ಒಂದೇ ಡಿವಿಜನ್ನೆಂದು ಮಾಡಿದರು. ಇದರ ಸಲುವಾಗಿ ನಮ್ಮ ತಾಲ್ಲೂಕಿಗೆ ಬೇಕಾದ ಸೌಕರ್ಯಗಳು ಸಿಗುತ್ತಿಲ್ಲ. ಬ್ಯಾಡಗಿಯ ಮಟ್ಟಕ್ಕೆ ನಮ್ಮ ತಾಲ್ಲೂಕು ಬರಲು ಈ ಡಿವಿಜನ್ನಿನಿಂದ ಹಿಂದೆ ದೊರೆಯುತ್ತಿದ್ದುದಕ್ಕಿಂತ ಅರ್ಧ ಪಟ್ಟು ಸೌಕರ್ಯಗಳು, profits ಸಿಗುತ್ತಿಲ್ಲ. ಬ್ಯಾಡಗಿ ಡಿವಿಜನ್ನಿನಿಂದಾಗಿ ಸುಮಾರು 50 ಮೈಲುಗಳದೂರದಲ್ಲಿರುವ ನನ್ನ ತಾಲ್ಲೂಕಾದ ಹಿರೇಕರೂರಿಗೆ ಆಗಬೇಕಾದ ಕೆಲಸಗಳು ಆಗುವುದಿಲ್ಲ. ಈಗಿರುವುದಕ್ಕಿಂತ ಇನ್ನೂ ದೊಡ್ಡ ಪ್ರಮಾಣದಲ್ಲಿ ಕೆಲಸ ನಡೆಯಲು ಇಲ್ಲಿಗೇ ಒಂದು ಸ್ಪೆಷಲ್ ಸಬ್ ಡಿವಿಜನ್ನನ್ನು ಮಾಡದೆ ಇದ್ದರೆ ಇಲ್ಲಿನ ಪ್ರಗತಿ ಕುಂಠಿತವಾಗಿ ಸಾಕಷ್ಟು ಕೆಲಸಗಳು ಆಗಲಿಕ್ಕಿಲ್ಲ. ಅದ್ದರಿಂದ ಮೊದಲಿದ್ದಂತೆ ಹಿರೇಕರೂರಿನಲ್ಲೇ ಒಂದು ಡಿವಿಜನ್ನನ್ನು ಇಡಬೇಕು. ಬ್ಯಾಡಗಿಗೆ ಬೇಕಾದರೂ ಒಂದು ಸಬ್ ಡಿವಿಜನ್ನು ಮಾಡಲಿ. ಹಿರೇಕರೂರಿನಲ್ಲಿ ಸಬ್ ಡಿವಿಜನ್ನು ಮಾಡಲು ಎಲ್ಲಾ ಸೌಕರ್ಯಗಳು ಇವೆ. ಅಲ್ಲಿ ಸರಕಾರದವರದೇ ಆದ ಒಂದು ಪ್ರವಾಸಿ ಮಂದಿರ ಇದೆ. ಅಲ್ಲಿ ಕೆಲಸ ಮಾಡಲಿಕ್ಕೆ ಬರುವ ಒಂದು ಸರಕಾರದ ಬಿಲ್ಡಿಂಗು ಕೂಡ ಇದೆ. ಕಟ್ಟಡಗಳಿಲ್ಲ ಎಂದು ಸರಕಾರ ಯೋಚನೆ ಮಾಡಬೇಕಾಗಿಲ್ಲ. ಇದನ್ನು ತೀವ್ರವಾಗಿ ಸರಕಾರದವರು ಯೋಚನೆ ಮಾಡಿ ಬ್ಯಾಡಗಿಯಲ್ಲಿನ ಡಿವಿಜನ್ನನ್ನು ತೆಗೆದು ನನ್ನ ತಾಲ್ಲೂಕಿನಲ್ಲಿ ಹಿಂದಿದ್ದಂತೆ ಒಂದು ಸಬ್ ಡಿವಿಜನ್ನನ್ನು ವರ್ಗಾಯಿಸಬೇಕು. ಬ್ಯಾಡಗಿಗೇ ಬೇಕಾದರೆ ಬೇರೊಂದು ಸಬ್‌ಡಿವಿಜನ್ನು ಕೊಡಬಹುದು. ನನ್ನ ತಾಲ್ಲೂಕಿನಲ್ಲಿದ್ದ ಸಬ್‌ಡಿವಿಜನ್ನು ನನ್ನ ತಾಲ್ಲೂಕಿಗೆ ಬರಬೇಕು. ನನ್ನ ತಾಲ್ಲೂಕಿನಲ್ಲೂ ಕೆಲಸಗಳು ಕುಂಠಿತವಾಗದೆ ಬ್ಯಾಡಗಿ ತಾಲ್ಲೂಕಿನ ಮಟ್ಟಕ್ಕೇ ಬರುವಂತೆ ಮಾಡಿಕೊಡಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಸರಕಾರವನ್ನು ಕೇಳಿಕೊಳ್ಳುತ್ತೇನೆ.

ಹಾವೇರಿ ಡಿವಿಜನ್ನಲ್ಲಿ ನಿಮ್ಮ ಇಲಾಖೆಯವರ ಅಸ್ಥೆಯಿಂದ ಸುಮಾರು 60 ಲಕ್ಷ ರೂಪಾಯಿಗಳ ಒಟ್ಟು ಅಂದಾಜಿನ ಸೇತುವೆ ಕೆಲಸ ಆಗುವುದು ಇದೆ. ಒಂದು ವರ್ಷದಿಂದ 4—8 ಸೇತುವೆಗಳಿಗೆ ಮಾನ್ಯ ಸಚಿವರು ಅಡಿಗಲ್ಲು ಇಟ್ಟಿದ್ದಾಯಿತು. ಆ ಸೇತುವೆಗಳ ಕೆಲಸ ಪ್ರಾರಂಭವಾಗಿಲ್ಲ. 40 ರಿಂದ 60 ಲಕ್ಷದಷ್ಟು ಅಂದಾಜಿನಲ್ಲಿ ಸೇತುವೆಗಳಾಗಬೇಕಾಗಿರುವುದರಿಂದ ಇದಕ್ಕೆ ಒಂದು ಸಬ್ ಡಿವಿಜನ ಅವಶ್ಯಕತೆ ಇದೆ ಎಂದು ಹೇಳಬೇಕಾಗಿದೆ. ಅದ್ದರಿಂದ ಹಾವೇರಿ ಸಬ್ ಡಿವಿಜನ್ನಲ್ಲಿ ಇದಕ್ಕೆ ಪ್ರತ್ಯೇಕವಾದಸಬ್ ಡಿವಿಜನ ಆಗಬೇಕೆಂದು ಸರಕಾರದವರಲ್ಲಿ ವಿನಯದಿಂದ ಕೇಳಿಕೊಳ್ಳುತ್ತೇನೆ.

ರಾಜ್ಯದಲ್ಲೆಲ್ಲಾ ದೊಡ್ಡ ದೊಡ್ಡ ಹೊಳೆಗಳು ಹರಿಯುತ್ತವೆ. ನೀರಿನ ಅಸರೆ ಉಂಟು. ಅಂಥ ಕಡೆ ದೊಡ್ಡ ದೊಡ್ಡ ಅಣೆಗಳನ್ನು ಕಟ್ಟುವ ಕೆಲಸ ಪ್ರಾರಂಭ ಮಾಡಿದ್ದಾರೆ. ಇದು

ಸ್ತುತ್ಯವಾದ ಕೆಲಸ. ಈಗ 3–4 ವರ್ಷಗಳಿಂದ ಕಾರ್ಯ ನಡೆದಿರುವುದನ್ನು ನೋಡಿದರೆ ನಿಜವಾಗಿಯೂ ಹೆಮ್ಮೆ ಪಡಬೇಕು. ಸರ್ಕಾರದವರು ಒಳ್ಳೆ ಆಸ್ಥೆಯಿಂದ ಜನಗಳ ಹಿತವೇ ಅಥವಾ ಕಲ್ಯಾಣವೇ ತಮ್ಮ ಗುರಿ ಎಂದು ಇಟ್ಟುಕೊಂಡು ಈ ಕೆಲಸ ಮಾಡಿರುವುದು ನೋಡಿದರೆ ನಿಜವಾಗಿಯೂ ಅವರು ನಮ್ಮ ಪ್ರಶಂಸೆಗೆ ಪಾತ್ರರು. ದೊಡ್ಡ ದೊಡ್ಡ ಯೋಜನೆಗಳನ್ನು ಮಾಡುವುದು ಅಷ್ಟೇ ಅಲ್ಲ ಸಣ್ಣ ಸಣ್ಣ ಕೆಲಸಗಳನ್ನು ಪ್ರಾರಂಭಮಾಡಿ ತೀವ್ರವಾಗಿ ಅದರಿಂದ ಲಾಭ ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ಮಾಡತಕ್ಕ ಯೋಚನೆ ಇಟ್ಟುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಬಾವಿ ತೋಡಿ ಅರ್ಧ ಅಥವಾ ಒಂದು ಎಕರೆ ನೀರಾವರಿ ಮಾಡತಕ್ಕ ಅವಕಾಶವಿದೆ. ಪ್ರತಿಯೊಬ್ಬ ಸಣ್ಣ ಹಿಡುವಳಿದಾರನೂ ನಾಲ್ಕರಿಂದ ಐದು ಎಕರೆ ಹಿಡುವಳಿ ಇರುವವನೂ ಕೂಡ ಅರ್ಧ ಅಥವಾ ಒಂದು ಎಕರೆ ನೀರಾವರಿ ಮಾಡಿದ್ದೇ ಆದರೆ ನಮ್ಮ ದೇಶದಲ್ಲಿ ಆಹಾರದ ಅಭಾವ ಕಡಿಮೆಯಾಗುತ್ತದೆ ಎಂಬ ಭಾವನೆ ಇದೆ. ಅದು ಅಷ್ಟೇನು ಕಠಿಣವಾದ ಕೆಲಸವಲ್ಲ. ಸರ್ಕಾರದವರು ಹೋದ ವರ್ಷ ಎರಡು ಕೋಟಿ ರೂಪಾಯಿ ಖರ್ಚು ಮಾಡಿ ತಗಾಯಿ ಸಾಲ ಕೊಟ್ಟಿದ್ದುಂಟು. ಅಭಾವ ಪರಿಸ್ಥಿತಿ ಇದ್ದಂಥ ತಾಲ್ಲೂಕುಗಳಲ್ಲಿ ಇಂಥಾ ವಿಶೇಷ ಸೌಲಭ್ಯ ಕೊಡಬೇಕೆಂಬ ಭಾವನೆ ಇದೆ. ಆದರೆ ಸಾರ್ವತ್ರಿಕವಾಗಿ ಎಲ್ಲಿ ಬಾವಿ ತೆಗೆದು ನೀರಾವರಿ ಕೆಲಸ ಮಾಲಿಕರಿಗೆ ಸಾಧ್ಯವಿದೆ ಅಂಥ ಕಡೆ ಪ್ರತಿಯೊಬ್ಬ ರೈತನಿಗೂ ಕನಿಷ್ಟ ಪಕ್ಷ ಅರ್ಧ ಅಥವಾ ಒಂದು ಎಕರೆ ನೀರಾವರಿ ಭೂಮಿ ಇರಬೇಕು ಎನ್ನುವ ಉದ್ದೇಶದಿಂದ ದೇಶದಾದ್ಯಂತ ಇಂಥಾ ಒಂದು ಯೋಜನೆಯನ್ನು ಸರಕಾರದವರು ಕೈಕೊಳ್ಳಬೇಕು. ಇದಕ್ಕೆ ಅಷ್ಟೇನೂ ವಿಶೇಷ ಹಣ ಬೇಕಾಗಿಲ್ಲ ಎಂದು ಅನಿಸುತ್ತದೆ. ಎಲ್ಲಿ ಹಳ್ಳ ಹರಿಯುತ್ತದೆ ಅಂಥಲ್ಲಿ ಈ ಕೆಲಸ ಕೈಕೊಂಡರೆ ನಾಲ್ಕು ಅಥವಾ ಐದು ಕೋಟಿ ರೂಪಾಯಿನಲ್ಲಿ ಈ ಕೆಲಸಮಾಡಿಸಲಿಕ್ಕೆ ಅವಕಾಶವಿದೆ. ಪಂಚವಾರ್ಷಿಕ ಯೋಜನೆಯಲ್ಲಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತೇವೆ. 40-80-100 ಕೋಟಿ ರೂಪಾಯಿ ಕೆಲಸ ನಡೆಯುತ್ತದೆ. ಸರಾಸರಿ ತೆಗೆದು ನೋಡಿದರೆ ನಾಲ್ಕು ಅಥವಾ ಐದು ಕೋಟಿ ರೂಪಾಯಿ ಇದಕ್ಕೆ ವೆಚ್ಚ ಮಾಡುವುದು ಅಷ್ಟೇನು ದೊಡ್ಡ ವೆಚ್ಚ ಅನ್ನಿಸಲಿಕ್ಕಿಲ್ಲ. ಇಂಥಾ ಯೋಜನೆಯನ್ನು ಸರ್ಕಾರ ಆಲೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ವಿದ್ಯುಚ್ಛಕ್ತಿ ಹಳೆಯ ಮೈಸೂರು ಸರ್ಕಾರಕ್ಕೆ ಧನ್ಯವಾದ ಅರ್ಪಿಸಬೇಕಾಗಿದೆ. ವಿದ್ಯುತ್ ಯೋಜನೆಯಲ್ಲಿ ಮತ್ತು ಔದ್ಯೋಗಿಕ ಪ್ರಗತಿಯಲ್ಲಿ ಅವರು ಭಾರತ ದೇಶದಲ್ಲೇ ಮುಂದುವರೆದಿದ್ದರು. ವಿದ್ಯುತ್‌ಸೌಲಭ್ಯ ಒದಗಬೇಕು. ಔದ್ಯೋಗಿಕ ಪ್ರಗತಿಯಾಗಬೇಕು. ಎಂಬ ಆಶೆಯಿಂದಲೇ ಹೊರ ಭಾಗಗಳಿಂದ ನಾವು ಇಲ್ಲಿಗೆ ಬಂದು ಸೇರಿದೆವು. ವಿದ್ಯುಚ್ಛಕ್ತಿ ನಮ್ಮ ಭಾಗದಲ್ಲಿ ಯೋಜನೆ ಪ್ರಕಾರ ಬರುತ್ತಾ ಇದ್ದು ಅಂದಾಜಿಗೆ ಮಂಜೂರಾತಿ ಪಡೆದಿದ್ದರೂ ಮೆಟೀರಿಯಲ್ಸ್ ಅಭಾವದಿಂದ ಅದು ತೀವ್ರಗತಿಯಿಂದ ಆಗದೇ ಇರುವುದು ಬಹಳ ವಿಷಾದಕರವಾದ ಸಂಗತಿ. ಆದ್ದರಿಂದ ಸರ್ಕಾರದವರು ಎಲ್ಲೆಲ್ಲಿ ಇನ್ನೂ ಈ ವಿದ್ಯುಚ್ಛಕ್ತಿ ಕೊಟ್ಟಿಲ್ಲವೋ ಅಂಥಲ್ಲಿ ಎಸ್ಟಿಮೇಟ್ ಮಂಜೂರಾತಿ ಆದಂತಹವುಗಳಿಗೆ ಪ್ರಯಾರಿಟಿ ಬೇಸಿಸ್ ಮೇಲೆ ಮೆಟೀರಿಯಲ್ಸ್ ಒದಗಿಸಿ ವಿದ್ಯುಚ್ಛಕ್ತಿ ಸೌಲಭ್ಯ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಸರ್ಕಾರದವರು ಈಗ ಎರಡು—ಮೂರು ವರ್ಷಗಳಿಂದ ಉತ್ತರಿಸುತ್ತಾ ಇದ್ದ ಪ್ರಶ್ನೆಗಳನ್ನು ಗಮನಿಸಿಲ್ಲ ಎಂದು ಕಾಣುತ್ತದೆ. ಬೆಟರ್‌ಮೆಂಟ್ ಲೆವಿ ಅಮೆಂಡ್‌ಮೆಂಟ್ ಮಾಡುವ ವಿಷಯ ಎರಡು-ಮೂರು ಸಲ ಪ್ರಸ್ತಾಪ ಮಾಡಿದ್ದೇನೆ. ಹೋದ ಸಲ ಕೂಡ ನಾನು ಹೇಳಿದ್ದೇನೆ. ಕಳೆದ ಮತ್ತು ಮೂರನೇ ಪಂಚ ವಾರ್ಷಿಕ ಯೋಜನೆಯಲ್ಲಿ ಸಾಕಾದಷ್ಟು ಹಣ ಕೇಂದ್ರದಿಂದ ಬಂದಿದೆ. ಬೆಟರ್‌ಮೆಂಟ್ ಲೆವಿ ಅಮೆಂಡ್‌ಮೆಂಟ್ ಬಿಲ್ಲನ್ನು ಈ ಸಭೆಯ ಅಧಿವೇಶನದಲ್ಲೇ ತಂದು ಪಾಸ್ ಮಾಡಿಸಿದರೆ ಇದಕ್ಕೆ ಇನ್ನೂ ಸಾಕಾದಷ್ಟು ಹಣ ಬರಲಿಕ್ಕೆ ಅನುಕೂಲವಾಗುತ್ತದೆ. ಎಂದು ಹೇಳಿ ಸಭಾಪತಿಗಳು ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಪುಟ್ಟೇಗೌಡ (ಅರಕಲಗೂಡು).— ಮಾನ್ಯ ಅಧ್ಯಕ್ಷರೇ ಈ ದಿವಸ ನಮ್ಮ ಮುಂದೆ ಇಟ್ಟಿರತಕ್ಕಂಥ ಪಬ್ಲಿಕ್ ವರ್ಕ್ಸ್ ಇಲಾಖೆಯ ಡಿಮ್ಯಾಂಡಿನ ವಿಚಾರದಲ್ಲಿ ಕೆಲವು ವಿಚಾರಗಳನ್ನು ಈ ಸಭೆಯ ಮುಂದೆ ತರಬೇಕೆಂದು ನನ್ನ ಅಭಿಪ್ರಾಯ. ಶ್ರೀಮಾನ್ ವೀರಪ್ಪನವರು ಕೆಲವು ವಿಚಾರಗಳನ್ನು ಈಗಾಗಲೇ ಹೇಳಿದ್ದಾರೆ. ನಮ್ಮಲ್ಲಿರತಕ್ಕ ಹೇಮಾವತಿ, ಹಾರಂಗಿ ಕಂಬದಕಡ ಈ ಪ್ರಾಜೆಕ್ಟುಗಳನ್ನು ಕಟ್ಟಿಕೊಡಬೇಕೆಂದು ಸುಮಾರು 20-25 ವರ್ಷಗಳಿಂದಲೂ ನಮ್ಮ ಭಾಗದ ಜನಗಳು ಕೇಳಿಕೊಳ್ಳುತ್ತಿದ್ದಾರೆ. ಅದರಿಂದ ನಮಗೆ ಅನುಕೂಲವಾಗುತ್ತದೆ ಎಂದು ಹೇಳುತ್ತಿದ್ದಾರೆ. ಬಹುಶಃ ಕನಸಿನಲ್ಲಿಯೂ ಸಹ ಅದೇ ಆಶೆಯನ್ನು ಇಟ್ಟುಕೊಂಡಿದ್ದಾರೆ. ಹಾಗೇನೆ ಮುಳುಗಡೆಯಾಗತಕ್ಕ ಪ್ರದೇಶದಲ್ಲಿ ವ್ಯವಸಾಯ ಮಾಡತಕ್ಕ ಜನಗಳೂ ಸಹ, ಆ ಅಣೆಕಟ್ಟುಗಳನ್ನು ಇವೊತ್ತು ಕಟ್ಟುತ್ತಾರೋ ನಾಳೆ ಕಟ್ಟುತ್ತಾರೋ ಎಂದು ಯೋಚನೆ ಮಾಡುತ್ತಿರುತ್ತಾರೆ. ಅಲ್ಲಿ ಏನು ಕೆಲಸ ಮಾಡಿದರೂ ಪ್ರಯೋಜನವಾಗುವುದಿಲ್ಲ ಎಂದು ಅಡಿಕೆ ತೋಟ ಮಾಡತಕ್ಕವರು, ತೆಂಗಿನ ತೋಟವನ್ನು ಮಾಡತಕ್ಕವರು ಸುಮ್ಮನಿದ್ದಾರೆ. ವ್ಯವಸಾಯ ಮಾಡತಕ್ಕವರಿಗೆ ಪಂಪುಸೆಟ್ಟುಗಳು ಸಿಕ್ಕಿದ್ದರೂ ಸಹ ಅವರು ಯಾವ ಕೆಲಸವನ್ನೂ ಮಾಡದೇ ಸುಮ್ಮನಿದ್ದಾರೆ. ಅವರಿಗೆ ಬಹಳ ಅನಾನುಕೂಲವಾಗಿದೆ. ಆ ಅಣೆಕಟ್ಟುಗಳನ್ನು ಇದುವರೆಗೂ ಕಟ್ಟದೆ ಇರುವುದರಿಂದ ಅಲ್ಲಿನ ಅನೇಕ ಜನಗಳಿಗೆ ನೀರಾವರಿ ಸೌಕರ್ಯವನ್ನು ಹೊಂದಲು ಅವಕಾಶ ಇಲ್ಲದಂತಾಗಿದೆ. ಮುಳುಗಡೆ ಆಗತಕ್ಕ ಪ್ರದೇಶದವರಿಗೆ ಈಗ ಅದರಿಂದ ತೊಂದರೆಯಾಗಿದೆ. ಹೀಗಾಗಿ ಸಾಮಾನ್ಯವಾಗಿ ಬಹಳ ಜನ ಕಷ್ಟಪಡತಕ್ಕ ಒಂದು ಪರಿಸ್ಥಿತಿ ನಮ್ಮ ಮುಂದೆ ಇದೆ. ಮುಳುಗಡೆ ಆಗತಕ್ಕ ಪ್ರದೇಶದವರು ಈ ವಿಚಾರದಲ್ಲಿ ಅಸಮಾಧಾನವನ್ನು ಸೂಚಿಸಿರಬಹುದು. ಆ ಕಟ್ಟೆಯನ್ನು ಕಟ್ಟುವುದರಿಂದ ಸ್ವಲ್ಪ ಭಾಗ ಮುಳುಗಡೆಯಾಗುತ್ತದೆ ಎಂದು ಹೇಳಿದರೆ ತಪ್ಪಿಲ್ಲ. ಇವೊತ್ತಿನ ದಿವಸ ಆಹಾರದ ಸಮಸ್ಯೆ ಒಂದು ದೊಡ್ಡ ಸಮಸ್ಯೆಯಾಗಿ ನಮ್ಮ ಮುಂದೆ ಕೂತಿರುವಾಗ ಇಂಥಾ ಅಣೆಕಟ್ಟುಗಳನ್ನು ಕಟ್ಟಿ ಲಕ್ಷಾಂತರ ಜನಗಳು ಅನುಕೂಲವನ್ನು ಹೊಂದತಕ್ಕ ಅವಕಾಶವನ್ನು ಕಲ್ಪಿಸಿ ನಮ್ಮ ದೇಶದಲ್ಲಿರತಕ್ಕ ಆಹಾರದ ಸಮಸ್ಯೆಯನ್ನು ನಿವಾರಿಸುವುದಕ್ಕೆ ಇದು ಉತ್ತಮವಾಗಿದೆ. ಅದರಿಂದ ದಯವಿಟ್ಟು ಆದಷ್ಟು ಜಾಗ್ರತೆ ಹಾರಂಗಿ, ಕಂಬದಕಡ ಮತ್ತು ಹೇಮಾವತಿ ಈ ಅಣೆಕಟ್ಟುಗಳನ್ನು ಕಟ್ಟಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ವಿಶಾಲ ಕರ್ಣಾಟಕವಾಗಿರತಕ್ಕ ಈ ಸಂದರ್ಭದಲ್ಲಿ ಕೇವಲ ಒಂದು ಸಣ್ಣ ಬೇಡಿಕೆಯಾದ ಈ ನೀರಾವರಿ ಯೋಜನೆಯನ್ನಾದರೂ ಆದಷ್ಟು ಬೇಗ ಕಾರ್ಯಗತ ಮಾಡಬೇಕೆಂದು ನಾನು ಸಲಹೆ ಕೊಡುತ್ತೇನೆ.

ಕಂಟ್ರಾಕ್ಟರ ವಿಚಾರದಲ್ಲಿ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಅರಕಲಗೂಡಿನಲ್ಲಿ 1956ನೇ ಇಸವಿಯಲ್ಲಿ ಅರಕಲಗೂಡಿನ ತಾಲ್ಲೂಕಿನಲ್ಲಿ ಒಂದು ಕೆರೆಯ ಕಾಮಗಾರಿ ಕೆಲಸವನ್ನು ಟೆಂಡರ್ ಕರೆದು 6,480 ರೂಪಾಯಿಗಳಿಗೆ ಒಬ್ಬ ಕಂಟ್ರಾಕ್ಟುದಾರನಿಗೆ ಕಂಟ್ರಾಕ್ಟು ಕೊಟ್ಟಿದ್ದರು. ಅದನ್ನೇ ಪುನಃ 9,480 ರೂಪಾಯಿಗಳಿಗೆ ಬೇರೆಯವರಿಗೆ ಕಂಟ್ರಾಕ್ಟು ಕೊಟ್ಟಿದ್ದೇವೆಂದು ಸರ್ಕಾರದವರು ನನ್ನ ಇಂಟರ್ ಪೆಲೇಷನ್ನಿಗೆ ಉತ್ತರವನ್ನು ಕೊಟ್ಟಿದ್ದಾರೆ. ಆ ಕಂಟ್ರಾಕ್ಟುದಾರನ ಮೇಲೆ ಕ್ರಮ ತೆಗೆದುಕೊಂಡಿದ್ದಾರೆಯೋ ಎಂದರೆ ಅನೇಕ ಸಾರಿ ನೋಟೀಸು ಕೊಟ್ಟರೂ ಜವಾಬು ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಡಿಪಾಜಿಟ್ ಅನ್ನು ವಾಪಸ್ಸು ಕೊಟ್ಟಿದ್ದಾರೆ ಎಂದು ನಾನು ಕೇಳಿದ್ದೇನೆ. ಕಂಟ್ರಾಕ್ಟರು ಕೆಲಸವನ್ನು ಮಾಡದೆ ಸರ್ಕಾರಕ್ಕೆ ಈ ದಿವಸ ಮೂರು ಸಾವಿರ ರೂಪಾಯಿಗಳು ನಷ್ಟವಾಗಿದೆ. ಆಗ ಕೂಲಿಯವರಿಗೆ ಒಂದು ದಿವಸಕ್ಕೆ 10 ಅಣೆ 12 ಅಣೆ ಇತ್ತು, ಈಗ ಅದೇ ಕೂಲಿಯಾಳುಗಳಿಗೆ ಒಂದು ದಿವಸಕ್ಕೆ ಒಂದೂ ಕಾಲು ರೂಪಾಯಿ ಆಗಿ ಸರ್ಕಾರಕ್ಕೆ ಲಾಸ್ ಆಗಿದೆ. ಇವೊತ್ತಿನ ದಿವಸ ಸರ್ಕಾರಿ ಅಧಿಕಾರಿಗಳು ಲೆಖ್ಖವಿಲ್ಲದೆ ಕೆಲಸ ಮಾಡುತ್ತಾ ಇರುವುದನ್ನು ನೋಡಿದರೆ ಸರ್ಕಾರದವರು ಎಷ್ಟರ ಮಟ್ಟಿಗೆ ಕೆಲಸವನ್ನು ಮಾಡುತ್ತಿದ್ದಾರೆ ಎನ್ನುವುದು ಅರ್ಥವಾಗುತ್ತದೆ.

ಅರಕಲಗೂಡಿನ ಹೈಸ್ಕೂಲು ವಿಚಾರವನ್ನು ತೆಗೆದು ಕೊಂಡರೆ ಶ್ರೀ ಚನ್ನಬಸಪ್ಪನವರು ಅರಕಲಗೂಡಿಗೆ ಬಂದಿದ್ದಾಗ ಹೈಸ್ಕೂಲು ಕಟ್ಟಡಕ್ಕೆ 8 ಸಾವಿರ ರೂಪಾಯಿ ಒದಗಿಸಿ ಕೊಟ್ಟಿದ್ದೇವೆ ಎಂದು ಹೇಳಿದರು. ಕಟ್ಟಿದ್ದ ಅರ್ಧ ಕಟ್ಟಡವನ್ನು ಕೆಡವಿ ಹಾಕುವುದಕ್ಕೆ 9 ಸಾವಿರ ರೂಪಾಯಿಗಳಿಗೆ ಎಸ್ಟಿಮೇಟ್ ಆಗಿದೆ ಎಂದು ಕೇಳಿದ್ದೇನೆ. ಆ ಕಟ್ಟಡ 47 ಕಡೆ ಕ್ರಾಕ್ ಬಂದಿದೆ ಎಂದು ನಾನು ತಿಳಿದು ಕೊಂಡಿದ್ದೇನೆ. P. W. D. ಡಿಪಾರ್ಟ್‌ಮೆಂಟಿನವರು ಇಂಥಾ ಅನಾನುಕೂಲವಾಗತಕ್ಕ ಕೆಲಸಗಳನ್ನು ಮಾಡುತ್ತಿದ್ದಾರೆ.

ವಾಟರ್ ಸಪ್ಲೈ ವಿಚಾರವಲ್ಲಿ ಹೇಳುವುದಾದರೆ ಶ್ರೀಮಾನ್ ಹನುಮಂತಯ್ಯನವರ ಕಾಲದಲ್ಲಿ ಹೇಮಾವತಿ ನದಿಯಿಂದ ಅರಕಲಗೂಡಿಗೆ ವಾಟರ್ ಸಪ್ಲೈ ಮಾಡಲು ಕೊಟ್ಟಂತ ಸ್ಕೀಮಿನಲ್ಲಿ ಇವೊತ್ತಿನವರೆಗೂ ವಾಟರ್ ಟ್ಯಾಂಕ್ ಕಟ್ಟುವ ಕೆಲಸವೂ ಕೂಡ ಆಗಿಲ್ಲ. ಚೀಫ್ ಇಂಜನಿಯರ್ ಒಂದೆರಡು ತಿಂಗಳಲ್ಲಿ ಅದನ್ನು ಮಾಡಿಸಿ ಕೊಡುತ್ತೇನೆ ಎಂದು ಹೇಳಿದರು. ಅದು ಹಾಗೆಯೇ ಇದೆ. ಹತ್ತಾರು ಜನ ಅನೇಕ ತರಹ ಸರ್ಕಾರದವರಲ್ಲಿ ಮೊರೆ ಇಟ್ಟರೂ ಸಹ ಡಿಪಾರ್ಟ್‌ಮೆಂಟಿನವರು ಕಬ್ಬಿಣ ಇಲ್ಲ, ಸಿಮೆಂಟ್ ಇಲ್ಲ ಎಂದು ಹೇಳುತ್ತಾರೆ. ಪ್ರೈವೇಟ್ ಆಗಿ ಮರ್ಚೆಂಟ್ ಹತ್ತಿರ ಹೋದರೆ ಬೇಕಾದಷ್ಟು ಕಬ್ಬಿಣ ಸಿಮೆಂಟ್ ಸಿಕ್ಕುತ್ತದೆ. ಆದರೆ ಸರ್ಕಾರಕ್ಕೆ ಏತಕ್ಕೆ ಸಿಕ್ಕುವುದಿಲ್ಲ? ಸರ್ಕಾರಿ ಕೆಲಸಕ್ಕೆ ಕಬ್ಬಿಣ ಸಿಮೆಂಟ್ ಸಿಕ್ಕುವುದಿಲ್ಲ. ಹೊರಗಡೆ ಬೇಕಾದಷ್ಟು ಸಿಕ್ಕುತ್ತದೆ. ಹೈಸ್ಕೂಲು ಕಟ್ಟಡ ಕಟ್ಟುವುದನ್ನು ಅರ್ಧಕ್ಕೆ ನಿಲ್ಲಿಸಿರುವುದರಿಂದ ಈಗ ಸ್ಕೂಲು ನಡೆಯುತ್ತಿರುವ ಕಟ್ಟಡಕ್ಕೆ ಮುನಿಸಿಪಾಲಿಟಿಯಿಂದ ಪ್ರತಿ ತಿಂಗಳು 80 ರೂಪಾಯಿಗಳ ಬಾಡಿಗೆಯನ್ನು ಕೊಡಬೇಕಾಗಿದೆ. ಅನೇಕ ಸಂದರ್ಭಗಳಲ್ಲಿ ಎಷ್ಟು ಮೊರೆ ಇಟ್ಟರೂ ಸಹ ಅದನ್ನು ಇನ್ನೂ ಪೂರ್ತಿ ಮಾಡಿ ಕೊಟ್ಟಿಲ್ಲ. ಅದನ್ನು ಮಾಡಿ ಕೊಡುವುದಕ್ಕೆ ಇನ್ನೂ ಎಷ್ಟು ದಿವಸಗಳಾಗುತ್ತದೋ ನನಗೆ ಗೊತ್ತಾಗುವುದಿಲ್ಲ. ನಿಧಾನವಾಗಿ ಕೆಲಸಗಳು ನಡೆಯುತ್ತಾ ಇರುವುದನ್ನು ನೋಡಿದರೆ ಮನಸ್ಸಿಗೆ ಬಹಳ ವ್ಯಥೆಯಾಗುತ್ತದೆ. ಮುನಿಸಿಪಾಲಿಟಿಯವರು ಇದನ್ನು ಮೇನ್‌ಟೈನ್ ಮಾಡುವುದು ಬಹಳ ಕಷ್ಟವಾಗುತ್ತದೆ. ಅದನ್ನು ಜಾಗ್ರತೆ ಮಾಡಿ ಕೊಟ್ಟರೆ ಮುನಿಸಿಪಾಲಿಟಿಯವರಿಗೆ ಹೊರೆ ಕಡಿಮೆಯಾಗುತ್ತದೆ. ದಾನ ಮಾಡತಕ್ಕ ಜನಗಳು ಸಹ ಮುಂದೆ ದಾನ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದರಿಂದ ಆ ವಿಷಯದಲ್ಲಿ ಕೂಡಲೇ ನಿಗಾ ತೆಗೆದು ಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ರೋಡುಗಳ ವಿಷಯದಲ್ಲಿ ಹೇಳುವುದಾದರೆ ರೋಡಿನಲ್ಲಿ ಜಲ್ಲಿ ಗುಡ್ಡೆಗಳನ್ನು ಕಟ್ಟುತ್ತಾರೆ. ಒಂದು ಬಸ್ಸು ಗಾಡಿ ಬಂದರೆ ಮಧ್ಯದಲ್ಲಿ ಆಕ್ಸಿಡೆಂಟ್ ಆಗುತ್ತದೆ. ಆದ್ದರಿಂದ ಜಲ್ಲಿ ಗುಡ್ಡೆಗಳನ್ನು ಕಟ್ಟಬೇಕಾದರೆ ರೋಡು ಬಿಟ್ಟು ಸ್ವಲ್ಪ ಹೊರಗಡೆ ಕಟ್ಟಿದರೆ ಆಕ್ಸಿಡೆಂಟ್ ಸ್ವಲ್ಪ ಕಡಿಮೆಯಾಗುತ್ತವೆ ಎಂದು ನನ್ನ ಅಭಿಪ್ರಾಯ. ಆ ವಿಷಯದಲ್ಲಿ ಸರ್ಕಾರದವರು ಸ್ವಲ್ಪ ನಿಗಾ ತೆಗೆದು ಕೊಳ್ಳಬೇಕೆಂದು ಹೇಳುತ್ತೇನೆ. ಕೆಲವು ಎಸ್ಟಿಮೇಟುಗಳು ತಾಲ್ಲೂಕಿನಲ್ಲಿ ಅಸಿಸ್ಟೆಂಟ್ ಇಂಜಿನಿಯರ್ ಆಫೀಸಿನಿಂದ ಹೆಡ್ ಕ್ವಾರ್ಟ್ರರುಗಳಿಗೆ ಎಂದರೆ ಎಕ್ಸಿಕ್ಯುಟಿವ್ ಇಂಜಿನಿಯರ್ ಆಫೀಸಿಗೆ ಅನೇಕ ಸಾರಿ ಓಡಾಡುತವೆ. ಡಿಪಾರ್ಟ್‌ಮೆಂಟ್ ಅಧಿಕಾರಿಗಳಲ್ಲಿ ಏನೋ ಜಗಳ ಇರುತ್ತದೆ. ಎಸ್ಟಿಮೇಟ್‌ಗಳನ್ನು 12 ಸಾರಿ ವಾಪಸ್ ಕಳುಹಿಸುತ್ತಾರೆ. ಈಗ ಎರಡು ವರ್ಷಗಳಿಂದ ಒಂದು ಎಸ್ಟಿಮೇಟ್ 12 ಸಾರಿ ಬಂದು 12 ಸಾರಿ ಹೋಗಿದೆ. ಅದರ ವಿಚಾರಗಳನ್ನು ಕೇಳಿದರೆ, ಡಿಪಾರ್ಟ್‌ಮೆಂಟ್ ಅಧಿಕಾರಿಗಳಲ್ಲಿ ಒಬ್ಬರಿಗೊಬ್ಬರಿಗೆ ಹೊಂದಾಣಿಕೆ ಇಲ್ಲ. ಅದಕ್ಕೋಸ್ಕರ ಎಸ್ಟಿಮೇಟ್‌ಗಳು ಹಿಂದಕ್ಕೂ ಮುಂದಕ್ಕೂ ಓಡಾಡುತ್ತಿವೆ. ಎಂದು ಕೆಲವು ವಿಚಾರಗಳು ತಿಳಿದು ಬಂದಿದೆ. ಇದನ್ನು ನಿಜವಾಗಿಯೂ ಸಹ ಡಿಪಾರ್ಟ್‌ಮೆಂಟಿನಲ್ಲಿ ಯಾರೊಬ್ಬರಿಗೂ ಅಸೂಯತೆ ಬಾರದ ಹಾಗೆ ಮಾಡಬೇಕು. ಅಂಥಾ ಅಧಿಕಾರಿಗಳು ಇದ್ದರೆ ಅವರನ್ನು ಚೀಫ್ ಎಂಜಿನಿಯರು ಹೆಡ್‌ಕ್ವಾರ್ಟರ್ಸ್‌ನಲ್ಲಿ ಹಾಕಿಕೊಂಡು ಅವರಿಂದ ಕೆಲಸವನ್ನು ತೆಗೆದುಕೊಳ್ಳಬೇಕು. ಇಂಥಾ ಅಧಿಕಾರಿಗಳನ್ನು ಇಡಕೂಡದು ಎಂದು ನನ್ನ ಅಭಿಪ್ರಾಯ.

(ಶ್ರೀ ಬಿ. ಪುಟ್ಟೇಗೌಡ)

ಗಂಗೂರು ಗ್ರಾಮದಲ್ಲಿ ಒಂದು ಮಿಡಲ್ ಸ್ಕೂಲ್ ಕಟ್ಟಡವನ್ನು ಕಟ್ಟಿಸಿ ಕೊಡಬೇಕೆಂದು ಈಗ 14 ವರ್ಷಗಳಿಂದ ಕೇಳುತ್ತಿದ್ದೇವೆ. ಫೌಂಡೇಷನ್ ಹಾಕಿದ್ದಾರೆ. ಆದರೆ ಇಲ್ಲಿಯವರೆಗೂ ಕಟ್ಟಡ ಇಲ್ಲ. ಸ್ಕೂಲುಗಳನ್ನು ಮಸೀದಿಗಳಲ್ಲಿ ದೇವಸ್ಥಾನಗಳಲ್ಲಿ ಗುಡಿಸಲುಗಳಲ್ಲಿ ನಡೆಸುತ್ತಿದ್ದಾರೆ. ಬಾಡಿಗೆ ಕೊಡುವುದನ್ನು ನೋಡಿದರೆ ಬಾಡಿಗೆದಾರರಿಗೆ ಅದೃಷ್ಟ ಚೆನ್ನಾಗಿದೆ ಎಂದು ಕಾಣುತ್ತದೆ. ಅದರ ಮೇಲೆ ಸ್ವಲ್ಪ ಕ್ರಮ ತೆಗೆದು ಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಹಾಸನ ಜಿಲ್ಲೆಯಲ್ಲಿ ಸುಮಾರು 5½ ಸಾವಿರ ಕೆರೆಗಳಿವೆ. ನಮ್ಮ ಜಿಲ್ಲೆಯಲ್ಲಿ ನೀರಾವರಿಯಿಂದ ಸ್ವಲ್ಪ ಜಾಸ್ತಿ ವ್ಯವಸಾಯ ಮಾಡುವವರಿದ್ದಾರೆ. ಯಾವ ಕೈಗಾರಿಕೆಗಳೂ ಅಲ್ಲಿ ಇಲ್ಲ. ಎಲ್ಲಾ ರಿಕಾರ್ಡ್‌ಗಳು ಸೂಪರಿನ್‌ಟೆಂಡಿಂಗ್ ಇಂಜಿನಿಯರ ಆಫೀಸಿಗೆ ಶಿವಮೊಗ್ಗಾಕ್ಕೆ ಹೋಗುತ್ತವೆ. ನಮ್ಮ ಜಿಲ್ಲೆಯಲ್ಲಿ 5½ ಸಾವಿರ ಕೆರೆಗಳು ಇವೆ. ಆದರಿಂದ ಒಂದು ಸೂಪರಿನ್‌ಟೆಂಡಿಂಗ್ ಇಂಜನಿಯರ್ ಅವರ ಆಫೀಸನ್ನು ಹಾಸನದಲ್ಲಿ ಏತಕ್ಕೆ ಹಾಕಬಾರದು? ಕಾಗದ ಪತ್ರಗಳು ಸೂಪರಿನ್‌ಟೆಂಡಿಂಗ್ ಇಂಜನಿಯರ್ ಅವರ ಆಫೀಸಿಗೆ ಹೋಗಿ ಅಲ್ಲಿಂದ ನಮಗೆ ಬರಬೇಕಾದರೆ ಸುಮಾರು ವರ್ಷಗಟ್ಟಲೇ ನಿಧಾನವಾಗುತ್ತದೆ. ಇರ್ರಿಗೇಷನ್ ವಿಚಾರದಲ್ಲಿ ಎಷ್ಟರ ಮಟ್ಟಿಗೆ ಕೆಲಸ ಕಾರ್ಯಗಳು ನಡೆಯುತ್ತಿವೆ. ಎಂಬುವುದನ್ನು ಹೇಳುವುದಕ್ಕೆ ನನಗಾದರೂ ವ್ಯಸನವಾಗುತ್ತದೆ. ನೀರಾವರೀ ವಿಚಾರದಲ್ಲಿ ಆದಷ್ಟು ಜಾಗ್ರತೆ ಕೆಲಸ ನಡೆಯುವುದಕ್ಕೆ ಏರ್ಪಾಡು ಮಾಡಬೇಕು.

ಕೊನೆಯದಾಗಿ ಇನ್ನೊಂದು ಸಾರಿ ಹೇಳುವುದೇನೆಂದರೆ 10 ಲಕ್ಷ ಜನಗಳಿಗೆ ಹಾರಂಗಿ, ಹೇಮಾವತಿ, ಕಂಬದಕಡ ಈ ಮೂರು ಪ್ರಾಜೆಕ್ಟುಗಳಿಂದ ಅನುಕೂಲವಾಗುತ್ತದೆ. ಆದ್ದರಿಂದ ಆ ವಿಷಯದಲ್ಲಿ ಕಾರ್ಯಕ್ರಮ ತೆಗೆದುಕೊಂಡು ಅಲ್ಲಿರುವ ದರಿದ್ರ ದೇವತೆಯು ಬಡ ಜನರನ್ನು ಬಿಟ್ಟು ಓಡುವಂತೆ ಮಾಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಿಂದೆ ಯಾವುದೋ ಒಂದು ಸಂದರ್ಭದಲ್ಲಿ ಶ್ರೀ ವೀರಣ್ಣಗೌಡರು ಕರಿಕಂಬಳಿಯನ್ನು ಹೊದ್ದುಕೊಂಡು ಕೈಯಲ್ಲಿ ದೊಣ್ಣೆ ಹಿಡಿದುಕೊಂಡು ಅಠಾರ ಕಛೇರಿಯ ಮುಂದೆ ಬಂದು ನಾನು ಸತ್ಯಾಗ್ರಹವನ್ನು ಮಾಡುತ್ತೇನೆ ಎಂದು ಸರ್ಕಾರದವರನ್ನು ಹೆದರಿಸಿ ಯಾವ ರೀತಿ ತಮ್ಮ ಕೆಲಸವನ್ನು ಮಾಡಿಕೊಂಡು ಹೋದರೋ, ಅವರೇ ಈಗ ಆ ಖಾತೆಯನ್ನು ವಹಿಸಿ ಕೊಂಡಿರುವುದರಿಂದ ನಮ್ಮ ಕೆಲಸಗಳನ್ನು ಆದಷ್ಟು ಬೇಗ ಮಾಡಿಸಿ ಕೊಡಬೇಕೆಂದು ಹೇಳುತ್ತೇನೆ. ಈ ರೀತಿ ನಾನು ಈ ಸಭೆಯಲ್ಲಿ ಎರಡು ಮಾತುಗಳನ್ನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಕೆ. ಬೊಮ್ಮೇಗೌಡ.—(ಕೃಷ್ಣರಾಜಪೇಟೆ) ಸ್ವಾಮಿ, ನಮ್ಮ ಮುಂದೆ ಇರತಕ್ಕಂಥ ಮರಾಮತ್ತು ಇಲಾಖೆಯ ಬೇಡಿಕೆಯನ್ನು ಒಪ್ಪಿಕೊಳ್ಳುತ್ತಾ ಈ ಇಲಾಖೆಯ ವಿಚಾರದಲ್ಲಿ ನಾನು ಎರಡು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ. ಈ ಇಲಾಖೆಗೆ ⅓ ಭಾಗದಷ್ಟು ನಮ್ಮ ಬಡೆಟ್ಟಿನಲ್ಲಿ ಇರತಕ್ಕ ದುಡ್ಡನ್ನು ಕೊಡುತ್ತೇವೆ. ಇದು ಬಹಳ ಅಗತ್ಯವಾದ ಇಲಾಖೆ. ಇದಕ್ಕೆ ಹಣವನ್ನೇನೋ ಕೊಡೋಣ, ಸಂತೋಷ. ಆದರೆ ಈ ಇಲಾಖೆಯಲ್ಲಿ ಕೆಲಸ ಆಗುತ್ತಾ ಇರತಕ್ಕದ್ದನ್ನು ನೋಡಿದರೆ ಬಹಳ ನಿಧಾನವಾಗಿ ಆಗುತ್ತಿದೆ. ಇದಕ್ಕೆ ಏನು ಕಾರಣ ಎಂಬುದು ಮಾತ್ರ ಗೊತ್ತಾಗುವುದಿಲ್ಲ. ಆದ್ದರಿಂದ ನಾವು ಈ ಇಲಾಖೆಯಲ್ಲಿ ಎಷ್ಟು ದುಡ್ಡನ್ನು ಖರ್ಚು ಮಾಡುತ್ತಿದ್ದೇವೆಯೋ ಅದಕ್ಕೆ ತಕ್ಕಂತೆ ಕೆಲಸ ಕಾರ್ಯಗಳು ಆಗುವುದಾದರೆ ಬಹಳ ಸಂತೋಷ. ದುಡ್ಡು ಖರ್ಚಾಗುವುದಕ್ಕೆ ಯೋಚನೆ ಇಲ್ಲ. ಎಷ್ಟು ಬೇಕಾದರೂ ಕೊಡೋಣ. ನಾವು ಕೊಟ್ಟಂಥ ದುಡ್ಡು ಸರಿಯಾಗಿ ಸಾರ್ಥಕವಾಗುವುದಾದರೆ ಅದಕ್ಕೆ ಎಷ್ಟು ಬೇಕಾದರೂ ಬೆಂಬಲವನ್ನೂ ಕೊಡೋಣ. ಆದರೆ ಎಷ್ಟು ದುಡ್ಡು ಖರ್ಚಾಗುತ್ತದೆಯೋ ಅದು ಸರಿಯಾಗಿ ದೇಶದಲ್ಲಿ ವಿನಿಯೋಗವಾಗುತ್ತಿದೆಯೇ, ಅದರಿಂದ ಪ್ರಯೋಜನವಾಗುತ್ತಿಯೇ ಎಂದು ನೋಡಿದರೆ ಏನೂ

ಇಲ್ಲ ಎಂದು ನನಗೆ ಎನಿಸುತ್ತದೆ. ಇದಕ್ಕೆ ಕಾರಣ ನನಗಾದರೂ ಅನ್ನಿಸುತ್ತದೆ, ಈ ಡಿಪಾರ್ಟ್‌ಮೆಂಟಿನಲ್ಲಿ ಕೆಲಸ ಮಾಡುವಾಗ ಬೇಕಾದಷ್ಟು ಜಿಗುಪ್ಸೆಗಳು ಅಲ್ಲಲ್ಲಿ ಜನಗಳಲ್ಲಿ, ಕೆಲಸ ಮಾಡುವವರಲ್ಲಿ ಇದೆ ಎಂದು. ಈ ಇಲಾಖೆಯಲ್ಲಿ ಪ್ರಾಮಾಣಿಕರಾಗಿ ಕೆಲಸ ಮಾಡತಕ್ಕ ಜನಗಳಿಗೆ ಒಂದು ನಿಶ್ಚಿತವಾದ ಒಂದು ಅವಕಾಶವಿಲ್ಲ. ಪ್ರಾಮಾಣಿಕನಾಗಿ ಕೆಲಸ ಮಾಡತಕ್ಕದ್ದೇ ಒಂದು ಅಪರಾಧ ಎಂದು ಕಾಣುತ್ತದೆ. ಏತಕ್ಕೆಂದರೆ ನಾನು ನೋಡಿದ ಹಾಗೆ ಎಷ್ಟೋ ಜನ ಪ್ರಾಮಾಣಿಕರಾಗಿ ಕೆಲಸ ಮಾಡಿದರೆ ಅವರಿಗೆ ಸರಿಯಾದ ಉತ್ತೇಜನ ದೊರಕುತ್ತಾ ಇಲ್ಲ. ತಾಲ್ಲೂಕು ಮಟ್ಟದಲ್ಲಿ ಹೇಳುವುದಾದರೆ ಓವರ್ ಸೀರ್ ಆಗಲೀ ಅಥವಾ ಅಸಿಸ್ಟೆಂಟ್ ಇಂಜನಿಯರ್ ಆಗಲೀ ಪ್ರಾಮಾಣಿಕರಾಗಿ ಕೆಲಸ ಮಾಡುತ್ತಿದ್ದರೆ ಎಷ್ಟೋ ಸಂದರ್ಭಗಳಲ್ಲಿ ಅವರನ್ನೇ ಆಂಟಿಕರಪ್ಷನ್ನಿನವರು ಬಂದು ಹಿಡಿದ ಸಂದರ್ಭಗಳು ಇವೆ. ಯಾವಾಗ ಅವರು ಪ್ರಾಮಾಣಿಕರಾಗಿರುತ್ತಾರೋ ಅಂಥವರನ್ನು ಅಪ್ರಾಮಾಣಿಕರು ಎಂದು ಭಾವಿಸಿ ಅವರ ಮೇಲೆ ಕುತಂತ್ರವನ್ನು ಹೂಡಿ ತೊಂದರೆಗಳನ್ನು ಕೊಡತಕ್ಕ ಸಂದರ್ಭಗಳೂ ಇವೆ. ಈ ವಿಚಾರದಲ್ಲಿ ಸರ್ಕಾರದವರು ತೀವ್ರವಾಗಿ ಎಚ್ಚರಿಕೆ ಕ್ರಮವನ್ನು ತೆಗೆದುಕೊಂಡು ಅಂಥಾ ಸಂದರ್ಭ ಬಂದಾಗ ಪ್ರಾಮಾಣಿಕರಾಗಿರ ತಕ್ಕವರಿಗೆ ರಕ್ಷಣೆಯನ್ನು ಮಾಡತಕ್ಕದ್ದು ಧರ್ಮ.

6-00 P. M.

ಒಂದೇ ಒಂದು ಉದಾಹರಣೆ ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಅಸಿಸ್ಟೆಂಟ್ ಇಂಜನಿಯರಾಗಿದ್ದ ಮರಿಯಪ್ಪ ಎಂಬ ಯುವಕನಿಗೆ ಪ್ರಮೋಷನ್ ಸಿಕ್ಕಿ ಈಗ ಎಗ್ಸಿಕ್ಯೂಟಿವ್ ಇಂಜಿನಿಯರಾಗ ಬೇಕಾಗಿತ್ತು, ಯಾರೋ ಮಾಡಿದ ಯಾವುದೋ ಒಂದು ತಪ್ಪಿಗಾಗಿ ಆತನ ಪ್ರಮೋಷನ್ ನಿಲ್ಲಿಸಿದ್ದಾರೆ. ಆತನನ್ನು ನಾನು ಚೆನ್ನಾಗಿ ಬಲ್ಲೆ. ಆತನ ಇಂಟಗ್ರಿಟಿ, ಹಾನೆಸ್ಟಿ ಮತ್ತು ಸೀನಿಯಾರಿಟಿ ಬಗ್ಗೆ ಬೇಕಾದರೆ ನಾನು ಛಾಲೆಂಜ್ ಮಾಡಬಲ್ಲೆ. ಯಾವುದೋ ಒಂದು ಬಿಲ್ಲು ಮೂರು ತಿಂಗಳು ನಿಧಾನವಾಗಿತ್ತು ಎಂತಲೋ ಏನೋ ಬಡ್ತಿ ನಿಲ್ಲಿಸುರುವುದನ್ನು ನೋಡಿದರೆ ಈ ಇಲಾಖೆಯಲ್ಲಿ ಸತ್ಯವಂತರಾಗಿ, ದೇಶಭಕ್ತರಾಗಿ ಕೆಲಸ ಮಾಡುವವರಿಗೆ, ಅಧಿಕಾರ ವರ್ಗದವರಿಗೆ ಪ್ರೋತ್ಸಾಹವಿಲ್ಲ ವೆಂಬುದು ಗೊತ್ತಾಗುತ್ತದೆ ಇಂಥದ್ದಕ್ಕೆ ಅವಕಾಶವಿಲ್ಲದಂತೆ ನ್ಯಾಯ ದೊರಕಿಸಿಕೊಡುತ್ತಾರೆಂದು ನಂಬುತ್ತೇನೆ. ಈ ತರಹ ಮಾಡಿದರೆ ಸತ್ಯಕ್ಕೆ ನ್ಯಾಯ ದೊರೆಯುವುದಿಲ್ಲ. ಆದುದರಿಂದ ಈ ಇಲಾಖೆ ಆಡಳಿತ ನಡೆಸತಕ್ಕವರು ಇವನ್ನು ಗಮನಿಸಿ ಪ್ರತಿಯೊಬ್ಬರಿಗೂ ನ್ಯಾಯ ದೊರಕಿಸಿ ಕೊಡಬೇಕೆಂಬುದು ನನ್ನ ಅಭಿಪ್ರಾಯ.

ದೇಶದಲ್ಲಿ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕೊಡಬೇಕೆಂದು ಯೋಜನೆಗಳನ್ನು ಹಾಕಿಕೊಂಡು, ಕೆಲಸ ಮಾಡುತ್ತಿದ್ದಾರೆ. ಈಗ ಯೋಜನೆ ಕೂಡ ಒಂದಾಯಿತು, ಎರಡಾಯಿತು, ಮೂರನೆಯ ಯೋಜನೆಗೆ ಬಂದಿವೆ. ಇದಕ್ಕಾಗಿ ಬೇಕಾದಷ್ಟು ಹಣ ಖರ್ಚು ಮಾಡುತ್ತಿದ್ದೇವೆ. ಈ ಯೋಜನೆಗಳನ್ನು ನೋಡಿದರೆ ಯಾವ ಒಂದು ಫಲದಾಯಕವಾದ ಕಾರ್ಯವೂ ನಮಗೆ ಕಂಡು ಬಂದಿಲ್ಲ ಎಲ್ಲಾದರೂ ಮಾಡಿರಬಹುದು. ಆದರೆ ನಮ್ಮ ಊರಿನ ಕಡೆ ನಾವು ನೋಡುತ್ತಿಲ್ಲ ಆದುದರಿಂದ ಒಂದು ವಿಚಾರ ಹೇಳಬೇಕಾಗಿದೆ ಕಾವೇರಿ ನದಿ ನೀರಿನ ಉಪಯೋಗದ ವಿಚಾರದಲ್ಲಿ 1924ರಲ್ಲಿ ಒಪ್ಪಂದವಾಗಿದೆ. ಅದರಲ್ಲಿ ಕೆಲವು ಲೋಪದೋಷಗಳಿವೆ. ಅದು one sided ಆಗಿ ಒಂದು ಕಡೆಗೆ ನ್ಯಾಯದೊರಕಿ ಇನ್ನೊಂದು ಕಡೆಗೆ ಅನ್ಯಾಯವಾಗುತ್ತಿದೆ. ಒಪ್ಪಂದವಾದಾಗ ಏಕೆ ಸರಿಯಾಗಿ ವಿಚಾರಕೊಡಲಿಲ್ಲ? ಈಗ ನೋಡುವುದಾದರೆ ನಮ್ಮ ಈ ಒಪ್ಪಂದ ನಮ್ಮ ದೇಶಕ್ಕೆ ಬಹಳ ಕೆಟ್ಟದ್ದಾಗಿ ಪರಿಣಮಿಸುತ್ತಿದೆ ಅದರಲ್ಲೂ ಕಾವೇರಿ, ಹೇಮಾವತಿ ನದಿ ದಡದಲ್ಲಿರುವವರಿಗೆ ಬಹಳ ಅನ್ಯಾಯವಾಗಿದೆ. ಅವರು ಹೊಳೆ ಬಂದಾಗ ಅನಾಹುತಕ್ಕೊಳಗಾಗಿದ್ದಾರೆ. ಅಂಥವರಿಗೆ ಈ ನದಿಗಳ ನೀರನ್ನು ಉಪಯೋಗಿಸಿಕೊಳ್ಳುವ ಅವಕಾಶವಿಲ್ಲವೆಂದು ಹೇಳುವುದು ಸರಿಯೆ? ನಾವು 1924ರ ಒಪ್ಪಂದದಂತೆ

(ಶ್ರೀ ಎಂ. ಕೆ. ಬೊಮ್ಮೇಗೌಡ)

ನಡೆದು ಕೊಂಡಿರುವಾಗ ಮದ್ರಾಸಿನವರು ಅದರಂತೆ ನಡೆದುಕೊಂಡಿಲ್ಲ. ನಾವು ಒಂದು ಎಕರೆಗೆ ಹೆಚ್ಚಾಗಿ ನೀರಾವರಿ ಮಾಡಿಕೊಳ್ಳಲು ಹೋದರೆ ಮೈಸೂರು ಸರ್ಕಾರದ ಮೇಲೆ ಆಪಾದನೆ ಹೊರಿಸುತ್ತಾರೆ. ಮದ್ರಾಸಿನವರು ಇಲ್ಲೂ ಅವರ ಒಂದು ಇಲಾಖೆ ಇಟ್ಟು ಕೊಂಡಿದ್ದಾರೆ. ಅದೇ ನಮ್ಮವರ್ಯಾರೂ ಮದ್ರಾಸಿನಲ್ಲಿದ್ದು ಅಲ್ಲಿ ನಡೆಯುವುದನ್ನು ನೋಡುತ್ತಿಲ್ಲ. ಈ ಒಪ್ಪಂದದ ಪ್ರಕಾರ ನಮಗೆ 45 T. M. Cft. ನೀರನ್ನು ಉಪಯೋಗಿಸಿ ಕೊಳ್ಳಲು ಅವಕಾಶವಿದೆ. ಅದನ್ನು ಉಪಯೋಗಿಸಿಕೊಳ್ಳಲು ನಮ್ಮವರು ಪ್ರಯತ್ನ ಮಾಡಿಲ್ಲ. ಅದೇಕೆ ಎಂಬುದು ಅರ್ಥವಾಗುತ್ತಿಲ್ಲ ಈ ಕಾರ್ಯ ತೀವ್ರವಾಗಿ ಆಗಬೇಕಾಗಿತ್ತು. ಹಾರಂಗಿ ಪ್ರಾಜೆಕ್ಟ್ ಈ ಒಪ್ಪಂದಕ್ಕೆ ಒಳಪಟ್ಟಿಲ್ಲ ಅದರಿಂದ ಸುಮಾರು ಒಂದು ಲಕ್ಷ ಚಿಲ್ಲರೆ ಎಕರೆ ನೀರಾವರಿ ವ್ಯವಸಾಯಕ್ಕೆ ಬರುತ್ತದೆ. ಇಂಥ ಸುಲಭವಾಗಿ ಆಗುವಕೆಲಸಕ್ಕೆ ಬೇಕಾದಷ್ಟು ತಕರಾರಿದೆ. ಹಿಂದೆ ಪ್ರಾಜೆಕ್ಟುಗಳಿದ್ದಾಗಲೂ ಗ್ರಾಮಗಳು ಮುಳುಗಡೆಯಾಗಿವೆ. ಒಳ್ಳೆಯ ಫಲವತ್ತಾದ ಜಮೀನು ಮುಳುಗಡೆ ಯಾಗಿದೆ ಆಕಾಲದಲ್ಲಿ ಜಪಾನ್ ಮೆಥೆಡ್ ಆಗಲ ಅಥವಾ ಬೇರೆ ಹೊಸವಿಧಾನವಾಗಲಿ ಇಲ್ಲದೆ ಒಂದು ಎಕರೆಗೆ 30-40 ಪಲ್ಲ ಧಾನ್ಯವನ್ನು ಬೆಳೆಯುತ್ತಿದ್ದರು ಅಂಥ ಜಮೀನು ಮುಳುಗಡೆಯಾಗಿರುವುದನ್ನು ರಿಕಾರ್ಡಿನಲ್ಲಿ ನೋಡಬಹುದು ಆದರೆ ದೇಶಕ್ಕೆ ಕಲ್ಯಾಣ ವಾಗಿಲ್ಲವೆ. 20-30ಗ್ರಾಮಗಳ ಮುಳುಗಡೆಯಾದರೂ ಬಡತನ ಅನುಭವಿಸುತ್ತಿದ್ದ ನೂರಾರು ಮಂದಿ ಉದ್ಧಾರವಾಗಿದ್ದಾರೆ. ಹಾರಂಗಿ ಅಥವಾ ಕಂಬದಕಡ ಪ್ರಾಜೆಕ್ಟುಗಳಿಂದ ನಿಜವಾಗಿಯೂ ದೇಶಕ್ಕೆಅನುಕೂಲವಾಗುತ್ತದೆ ಮುಳುಗಡೆ ಯಾಗುವ ರೈತರಿಗೆ ಯಾವುದಾದರೂ ಒಂದು ಯೋಜನೆಮಾಡಿ ಕೆಲಸಮಾಡಬೇಕು. ಕೃಷ್ಣರಾಜಸಾಗರ ಕಟ್ಟಿದಾಗಲೂ ಮುಳುಗಡೆಯಾಗಿ ಜನರಿಗೆ ಬಹಳ ತೊಂದರೆ ಯಾಗಿದೆ. ಅದನ್ನು ನೋಡಿ ಮುಳುಗಡೆ ಯಾಗುವ ಜಮೀನನ್ನು ಪಡೆದಿರುವ ರೈತರು ಚಳುವಳಿ ಹೂಡಲು ಅವಕಾಶವಿಲ್ಲದಂತೆ ಒಂದು ಸ್ಕೀಂ ಹಾಕಬೇಕು. ಮೊದಲು ಒಂದು ಕಾಲೋನಿ ಮಾಡಲು ಸ್ಕೀಂ ಹಾಕಬೇಕು. ಕನ್ನಂಬಾಡಿ ಕಟ್ಟೆ ಕಟ್ಟುವಾಗ ಒಂದು ಸರಿಯಾದ ಸ್ಕೀಂ ಹಾಕದೆ ಹೋದುದರಿಂದ ಈ ದಿವಸ ಜನರು ಬೀದಿ ಭಿಕಾರಿಗಳಾಗಿ ಭಿಕ್ಷೆ ಮಾಡುತ್ತಿದ್ದಾರೆ. ಅವರು ಬಹಳ ಬಡತನಕ್ಕೆ ಗುರಿಯಾಗಿದ್ದಾರೆ. ಅದೇಸ್ಥಿತಿ ಹೊಸದಾಗಿ ಪ್ರಾಜೆಕ್ಟು ಮಾಡುವಾಗ ಬರಲು ಅವಕಾಶವಿರಬಾರದು. ಒಳ್ಳೆಯ ವಾತಾವರಣ ಕಲ್ಪಿಸು ವುದಾದರೆ ಜನರು ನಿಜವಾಗಿಯೂ ಒಪ್ಪುತ್ತಾರೆ. ಕೃಷ್ಣರಾಜಸಾಗರದ ನಿರ್ಮಾಣದಿಂದ ಜಮೀನು ಮುಳುಗಡೆಯಾದ ಮೇಲೆ ಜಮೀನು ಕಳೆದು ಕೊಂಡವರ ಕ್ಲೈಮ್ಸ್ ಇನ್ನೂ ಸೆಟ್ಲ್ ಆಗಿಲ್ಲ. 35 ವರ್ಷಗಳಾದರೂ ರೈತರಿಗೆ ಪರಿಹಾರ ದೊರಕಿಲ್ಲವೆ ಅನ್ಯಾಯವಾಗಿದೆ. ಈ ಸಂಬಂಧವಾದ ಆಫೀಸು ಇನ್ನೂ ಇದೆ. ಜಮೀನು ಕಳೆದುಕೊಂಡವರಿಗೆ ಇನ್ನೂ ಬೇರೆ ಜಮೀನು ಕೊಟ್ಟಿಲ್ಲ ಅವರಿಗೆ ಅವಾರ್ಡ್ ಮೊಬಲಗು ಪಾವತಿಯಾಗಿಲ್ಲ. ಈ ರೀತಿ ಮುಂದೆ ಆಗಬಾರದು. ನಿಜವಾಗಿಯೂ ಪ್ರಾಜೆಕ್ಟ್ ಮಾಡುವಕಡೆ ಮುಳುಗಡೆ ಯಾಗುವ ಜಮೀನುಳ್ಳ ರೈತರು ಪ್ರಬಲವಾದ ಚಳುವಳಿ ಹೂಡುವುದುಂಟು. ಅಂಥ ಸಂದರ್ಭಗಳಲ್ಲಿ ತಮ್ಮಂಥವರು ಎದುರು ಬೀಳುವುದಕ್ಕೆ ಅವಕಾಶವಾಗುತ್ತದೆ ಆದಕ್ಕಾಗಿ ಒಂದು ಸ್ಕೀಂ ಮಾಡಿ ಜನರು ಚಳುವಳಿ ಹೂಡಬೇಕೆಂಬ ಮನೋಭಾವ ತಾಳದಂತೆ ಭರವಸೆ ಕೊಟ್ಟರೆ ಚಳುವಳಿ ನಡೆ ಯುವುದಿಲ್ಲ. ರಾಷ್ಟ್ರ ನಿರ್ಮಾಣ ಕಾರ್ಯ ಮಾಡುವಾಗ ಚಳುವಳಿ ನಡೆಯುತ್ತದೆ, ಜನರು ಎದುರು ಬೀಳುತ್ತಾರೆ ಎಂಬ ಶಂಕೆಯನ್ನಿಟ್ಟುಕೊಂಡು ಕಾರ್ಯವನ್ನು ಕೈಬಿಡದೆ ತೊಂದರೆ ಯಾಗುವವರಿಗೆ ತಕ್ಕ ಏರ್ಪಾಡು ಮಾಡಿ ಕೆಲಸ ಪೂರೈಸುತ್ತಾರೆಂದು ನಂಬುತ್ತೇನೆ. ಕನ್ನಂಬಾಡಿಕಟ್ಟೆಯಿಂದ ಜಮೀನು ಯಾವ ರೈತರದು ಮುಳುಗಡೆಯಾಗಿದೆಯೋ ಅವರಿಗೆ ದೊರೆಯ ಬೇಕಾದ್ದನ್ನು ಜಾಗ್ರತೆ ಕೊಡಿಸಿಕೊಡಬೇಕು. ಅವರಿಗಾಗಿ ಮೀಸಲಾಗಿಟ್ಟಿರುವ ಜಮಾ ಜಾಗ್ರತೆ ಖರ್ಚುಮಾಡಬೇಕೆಂದು ಈ ಸಭೆಯಲ್ಲಿ ಹೋದ ಬಡ್ಜೆಟ್ ಅಧಿವೇಶನ

ನಲ್ಲೇ ಹೇಳಿದೆವು ಆಗ ಅದಕ್ಕಾಗಿ ಒಂದು ಸಮಿತಿ ಮಾಡಿದರು ಅದರ ವರದಿ ಏನಾಯಿತೋ ಗೊತ್ತಿಲ್ಲ. ಆ ಸಮಿತಿಯವರು ಹಳ್ಳಿಗಳಲ್ಲಿ ಸಂಚಾರ ಮಾಡಿ ಯಾವ ಸೌಲಭ್ಯಗಳನ್ನು ಕೊಡಬಹುದು. ಬೇಡಿಕೆಯೇನಿದೆ ಎಂಬುದನ್ನು ಪರಿಶೀಲಿಸಿ ವರದಿ ಮಾಡಿದ್ದಾರೆ, ಅದರಲ್ಲಿ ಕೆಲವು ಅಭಿವೃಧಿ ಕಾರ್ಯಗಳು ಸೂಚಿಸಲ್ಪಟ್ಟಿವೆ. ಅವು ಆಗಬೇಕೆಂದು ಆರ್ಡರ್ ಸಹ ಆಗಿದೆ ಆದರೆ ಅವು ಆಗಿಲ್ಲ. ಅವು ಒಂದು ಸ್ಕೀಂ ಪ್ರಕಾರ ಆಗಬೇಕು.

ಈಗ ನೀವು 50 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೂ, ಖರ್ಚು ಮಾಡುವುದಕ್ಕೆ ಕಮಿಟಿಯನ್ನು ಮಾಡಿದ್ದರೂ, ಅಪ್ರೋಚ್‌ರಸ್ತೆ, ಸ್ಕೂಲು ಕಟ್ಟಡ, ಸಣ್ಣ ಸಣ್ಣ ನೀರಾವರಿ ಕಾಮಗಾರಿಗಳು ಏನೇನು ಸೂಚನೆ ಮಾಡಿದ್ದಾರೋ ಅವೆಲ್ಲವನ್ನು ನಮ್ಮ ತಾಲ್ಲೂಕಿನಲ್ಲಿ ನಡೆಯಬೇಕಾಗಿರುವ ಅಭಿವೃದ್ಧಿ ಕಾರ್ಯದಲ್ಲಿಯೇ ಸೇರಿಸಿ ನಡೆಸಬಹುದಾಗಿತ್ತು. ಅದನ್ನು ಮಾಡಿಲ್ಲ. ಮಾಡಿರುವ ಸಣ್ಣ ಪುಟ್ಟ ಕೆಲವು ಕಾಮಗಾರಿಗಳನ್ನು ಜನರ ತೃಪ್ತಿಗೆ ಸರಿಯಾಗಿ ಮಾಡಿಲ್ಲ. ಅರಾಂಬೂದಿ ಕಾವಲ್ ಎಂಬ ಊರಿನಲ್ಲಿ ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅಲ್ಲಿಗೊಂದು ಮಸೀದಿಯನ್ನು ಕಟ್ಟಿಸಿಕೊಡಿ ಎಂದು 15′×20′ ವಿಸ್ತೀರ್ಣದ ಒಂದು ಮಸೀದಿ ಮಾಡಿ ಅವರಿಗೆ ಕಣ್ಣೊರಸಿದ್ದಾರೆ. ಆ ಕಾಲದ ದುಡ್ಡು 30 ಲಕ್ಷ ರೂಪಾಯಿಗಳು ಉಳಿದಿರುವುದನ್ನು ಖರ್ಚು ಮಾಡುವುದಕ್ಕೆ ಇಷ್ಟು ಉದಾಸೀನವಾಗಿದ್ದಾರೆ. ಆಗಿನ ಕಾಲದಲ್ಲಿ 30 ಲಕ್ಷ ರೂಪಾಯಿ ಎಂದರೆ ಈಗ ಅದಕ್ಕೆ ಒಂದಕ್ಕೆ ನಾಲ್ಕರಷ್ಟಾಗುತ್ತದೆ. ಆ ದಿನವೆಸೋ ಬೇರೆಜವಾಬ್ದಾರಿ ಸರ್ಕಾರವಿತ್ತು ಎನ್ನಬಹುದು. ಈಗ ಜವಾಬ್ದಾರಿ ಸರ್ಕಾರ ಬಂದಾಗಲೂ ಅವರಿಗೆ ಅನ್ನ ಬಟ್ಟೆ ವಸತಿ ಮಾಡಿಕೊಟ್ಟು ಜೀವನ ಮಾಡುವುದಕ್ಕೆ ಅವಕಾಶ ಮಾಡಿಕೊಡದೆ ಕಣ್ಣೊರೆಸುವ ಈ ಅನ್ಯಾಯವನ್ನು ಮಾಡುವುದು ಈ ಪ್ರಜಾಪ್ರಭುತ್ವದ ನೀತಿಯಾಗುವುದಿಲ್ಲ. ಈಗಲಾದರೂ ಆ ಕಮಿಟಿಯ ರಿಪೋರ್ಟನ್ನು ಕಲಿಸಿ ಎಲ್ಲೆಲ್ಲಿ ಕುಂದು ಕೊರತೆಗಳಿವೆಯೆಂಬುದನ್ನು ನೋಡಿ, ಇರುವ ಹಣವನ್ನು ಖರ್ಚುಮಾಡಿ ಆ ಪ್ರದೇಶದ ಜನರಿಗೆ ಅನುಕೂಲ ಮಾಡಿ ಕೊಡಬೇಕೆಂದು ಹೇಳುತ್ತೇನೆ.

ಹೇಮಾವತಿ ಮತ್ತು ಕಾವೇರಿ ಈ ಎರಡು ನದಿಗಳು ಹರಿದು ಹೋಗುವ ಸ್ಥಳದಲ್ಲಿ ನಾವಿದ್ದೇವೆ. ಈ ಪ್ರದೇಶದಲ್ಲಿ ಮದ್ರಾಸು–ಮೈಸೂರು ಪ್ರಾಂತ್ಯಗಳಿಗಿರುವ ಅಗ್ರಿಮೆಂಟ್ ಪ್ರಕಾರ ಏನೂ ಹೆಚ್ಚಿಗೆ ನೀರಾವರಿ ಕಾಮಗಾರಿಗಳನ್ನು ಕೈಕೊಳ್ಳುವುದಕ್ಕೆ ಅವಕಾಶವಿಲ್ಲದೆ ಇದ್ದರೂ, ನದಿಯ ದಂಡೆಗಳಲ್ಲಿ ತಕ್ಕಮಟ್ಟಿಗೆ ಕಾಮಗಾರಿ ಕೈಕೊಳ್ಳುವುದಕ್ಕೆ ಅವಕಾಶವಿದೆ. ಈ ಬಗ್ಗೆ ಒಂದು ಇರಿಗೇಷನ್ ಸೆಸ್ ಆದರೂ ತಾವು ಹಾಕಬಹುದು, ದಂಡೆಗಳಲ್ಲಿ ನೀರನ್ನು ಉಪಯೋಗಿಸಿಕೊಂಡು ವ್ಯವಸಾಯ ಅಭಿವೃದ್ಧಿ ಮಾಡಿಕೊಳ್ಳುವುದಕ್ಕೆ ಇದುವರೆಗೂ ಯಾವ ಸ್ಕೀಮನ್ನು ಏಕೆ ತಯಾರಿಸಿಲ್ಲವೋ ಗೊತ್ತಿಲ್ಲ. ನಮ್ಮ ಕಡೆ ಈಗ ಮಳೆ ಬರುವುದಂತೂ ಬಹಳ ಕಡಮೆಯಾಗಿದೆ. ಋತು ನಿಯಮಗಳೇ ಬದಲಾವಣೆ ಹೊಂದುತ್ತಿವೆ. ಬರೀ ಮಳೆಯ ನೀರಿನಿಂದ ವ್ಯವಸಾಯ ಮಾಡುವ ಕಾಲ ಹೋಯಿತು ಕಾಲುವೆ ನೀರನ್ನು ಉಪಯೋಗಿಸಬೇಕು. ಇಲ್ಲವೇ ಬಾವಿಯ ನೀರನ್ನು ಉಪಯೋಗಿಸಬೇಕು. ಇಲ್ಲದಿದ್ದರೆ, ನಾಲೆಯ ದಂಡೆಗಳಲ್ಲಿರುವ ನೀರನ್ನು ಉಪಯೋಗಿಸಿಕೊಂಡು ಇರಿಗೇಷನ್ ಪಂಪ್ ಮೂಲಕ ವ್ಯವಸಾಯ ನಡೆಸಬಹುದು. ಸರ್ಕಾರದವರು ಈ ಕಡೆಗೆ ಸ್ವಲ್ಪ ಗಮನ ಕೊಡಬೇಕೆಂದು ಹೇಳುತ್ತೇನೆ.

ಮತ್ತೊಂದು ವಿಷಯವೇನೆಂದರೆ, ಈಗ ನಮ್ಮಲ್ಲಿ ವಿದ್ಯುಚ್ಛಕ್ತಿ ವ್ಯವಸಾಯಕ್ಕೆ ಅಷ್ಟು ಹೆಚ್ಚಿಗೆ ಸಿಕ್ಕುತ್ತಿಲ್ಲ. ತಾವು ರಾತ್ರಿಕಾಲ ಮಾತ್ರ ಕೊಡುತ್ತೇನೆಂದು ಹೇಳಿದ್ದೀರಿ. ಅದರಂತೆಯಾದರೂ ತಾವು ಕೊಟ್ಟು ವ್ಯವಸಾಯಕ್ಕೆ ಹೆಚ್ಚಿಗೆ ಉಪಯೋಗ ಮಾಡುವಹಾಗೆ ಮಾಡುವುದಾದರೆ ನಮ್ಮಲ್ಲಿನ ಆಹಾರ ಸಮಸ್ಯೆಯನ್ನು ಹೋಗಲಾಡಿಸುವುದಕ್ಕೆ ಸಾಧ್ಯವಾಗುತ್ತದೆ. ನಾವು ಮಾಡತಕ್ಕ ಆರ್ಡರುಗಳು ಕಾಗದ ಪತ್ರಗಳಲ್ಲಿ ಮಾತ್ರವೇ ಇರದಂತೆ ಕಾರ್ಯ ರೂಪಕ್ಕೆ ಬರು

(ಶ್ರೀ ಎಂ. ಕೆ. ಬೊಮ್ಮೇಗೌಡ)

ವತೆ ಮಾಡಬೇಕು. ಸರ್ಕಾರ ನಡೆಸುವುದರಲ್ಲಿ ಅನೇಕ ಲೋಪದೋಷಗಳು ಇರುವುದು ಸಹಜ. ಹಾಗೆಯೇ ಕೆಲಸಮಾಡುವ ಅಧಿಕಾರಿಗಳಲ್ಲೂ ಏನಾದರೂ ಲೋಪದೋಷಗಳಿರಬಹುದು ಅದನ್ನೇ ದೊಡ್ಡದು ಮಾಡದೆ, ವೈಯಕ್ತಿಕ ವೈಮನಸ್ಸುಗಳಿಗೆ ಅವಕಾಶ ಕೊಡದೆ ನಮ್ಮ ಹೊಣೆಗಾರಿಕೆಯನ್ನು ಸಲ್ಲಿಸಿ, ದೇಶಕ್ಕೆ ಉಪಕಾರ ಮಾಡಬೇಕೆಂದು ಹೇಳುತ್ತೇನೆ. ನಮ್ಮ ನಮ್ಮ ವೈಯಕ್ತಿಕ ಚಟಗಳನ್ನು ತೀರಿಸಿಕೊಳ್ಳುವುದರಲ್ಲಿ ನಿರತರಾಗಬಾರದು. ಸರ್ಕಾರ ಚಿಕ್ಕದು; ಸಮಾಜ ದೊಡ್ಡದು. ಸಮಾಜವನ್ನು ಎದುರು ಹಾಕಿಕೊಂಡು ಯಾವ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ. ಎಲ್ಲೆಲ್ಲಿ ಅನ್ಯಾಯವಾಗುತ್ತಿದೆ, ಅಲ್ಲಿ ನಮ್ಮ ವೈಯಕ್ತಿಕ ಪ್ರಶ್ನೆಗಳು ಏನೇ ಇರಲಿ ಅದನ್ನು ಕಡೆಗಣಿಸಿ ಜನರಿಗೆ ಆಗುತ್ತಿರುವ ಅನ್ಯಾಯಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನಪಟ್ಟರೆ ನಮಗೆ ಸುಖೀ ರಾಜ್ಯ ಬರುತ್ತದೆಯೇ ವಿನಾ ಬೇರೆ ರೀತಿ ಬರುವುದಿಲ್ಲ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri K. P. KARUMBAYYA (Virajpet).—Sir, at the very out set I thank the Hon'ble Speaker for giving me an opportunity to speak on the Demand before us. The Government was very far sighted to leave the rural communication to the charge of the P.W.D. and many roads have been formed. But, the policy of the Government seems to be to form the roads and then hand them over to the Taluk Boards. I am afraid, if these roads are given to the taluk boards, in the present conditions, only for the maintainance, the object of farming these roads is very much frustrated for the reason, if you go and look at these roads, we find them with full of dust. In Malnad areas where the rainfall would be between 100 to 200 inches, most of the roads would have been damaged during monsoon. So, as far as possible, these roads should be metalled and then handed over to the taluk boards. Then, the amount of 30 rupees meant for maintaining a mile should be enhanced. So far as my district is concerned, the maintenance charges should be raised to 300 rupees per mile for district roads. I hope, Government would be kind enough to concede that suggestion.

I am happy to see from the recent orders that certain roads which extend to 3,677 miles have been taken over under State Fund from 1-3-1961. My district is also lucky enough to get 90 miles. Kadanga-Kottehdi-Virajpet road may be handed over to the State for the reason, for many months in the year during monsoon, this road would help divert traffic from Napoklu–Virajpet Road which would be cut off and considerable part submerged under floods. I also commend T. Shettigiri—Birunani road to be included under State Fund, as Birunani Hospital is cut off for more than six months in this year during monsoon from the rest of vehicular roads.

In this connection, I must submit that Government is somehow or other not paying as much attention as it ought to have, to some of the bridges sanctioned by the Government of Mysore for instance, bridge to Cauvery at Kottamerdi was sanctioned in May 1957. I am told that the contract has been accepted and the bridge would be constructed

very soon. I submit that Government should expedite the bridge at Kuttamudi across Cauvery for which foundation laid in 1957, Kondagiri sanctioned in 1958, Nittor bridge across Laxmana Theertha which, I am told, has been also sanctioned by the Government.

So far as minor irrigation is concerned, I must submit, in respect of Coorg, that is a district where we are not having assured supply of water. For want of sufficient rain this year, the turn over of paddy is 25 percent less compared to last year. So, minor irrigation must be given its due share. The Minor Irrigation Scheme were entirely under the Minor Irrigation Department and it manned them. This was done till 1959. After that department was abolished and after the P.W.D. took it over, I must submit, work is very slow. I myself put some interpellations on the floor of this House and it was answered that schemes sanctioned and schemes commenced about 4 to 5 years ago and where 50 to 60 thousand rupees have been spent, would be completed soon. In South Coorg in a village called Kottegiri and another work in Paloor, schemes over which considerable sums of money has been invested, have not been completed so far. In my district some tanks have to be repaired and they are silted ; some pickups have got to be constructed. There is also the problem of drainage of water, particularly, in the vicinity of Laxman Teertha, in what are called kolly lands. The erstwhile department of Minor Irrigation has submitted a scheme for this costing to the tune of 3 lakhs of rupees to drain this water but unfortunately, that scheme is not available now. Some time ago I myself went with the concerned officer and walked for 6 to 7 miles and showed how the plan can be redrawn. I am surprised that the opinion of the Executive Engineer is that it would cost more than 50,000 and he himself must prepare the estimate. The result is, some of the poor agriculturists who are holding uneconomic holdings, have had to leave their lands fallow for more than 3 to 4 years. They represented year after year to the Deputy Commissioner and the Executive Engineer and nothing has been done. My submission is, Government should pay proper attention so far as the grievances of these people are concerned for their immediate redress.

Then, Sir, we have been seeing for the last 2 or 3 years, the State is paying great importance so far as power and irrigation are concerned. We are very happy that Sharavathi Project is being worked up and on the completion of this project, we are going to be benefitted immensely by it. But, at the same time, I must submit that Government has not paid any attention, particularly after integration of Coorg with Mysore, towards the power potential in my own district of Coorg. Before integration, we had the Barapole Hydro-Electric Scheme ; it had been investigated and even plan and estimate, I gather, was prepared and the matter was submitted to the Government of India and the Planning Commission for being included in the II Five-year Plan. It is more than 4 to 5 years that Coorg was integrated with Mysore and nothing is seen except some nominal allotment without anything being done. If it

(Sri K. P. KARUMBAYYA)

is the policy of the Government to encourage power potential and if it is the policy of the Government to encourage industrialisation, they should pay greater attention, so far as Barapole Hydro-Electric scheme is concerned and this schemes must be taken up at least in the next plan period i.e., IVth Five Year Plan.

In this connection I might say that about an year ago Kushalnagar the township where Hyder Ali had the pleasant news that his son Tippu was born has been electified. The electricity was generated from Jog falls and we expected that it would be further distributed throughout the length and bredth of Coorg but unfortunately the work seems to be at a standstill. My only submission is that in view of the high rate of charges of current in the Ponnampet, Virajpet. and Mercara towns, made available from Diesel generators where we are paying 7 annas a unit, the Government might be pleased to distribute current from Jog till further arrangements are made in Coorg by implementation of the Barapole electric scheme or some such scheme.

So far as my district is concerned, I have got to make a representation, particularly with reference to the proposed Kambadkada dam. It is true that the Harangi and Kambadkada dams are being included in the third five-year plan in pursuance of an agreement which the erstwhile Government of Mysore had entered into with the Government of Madras in 1924. My submission is that in the year 1924; so far as Coorg was concerned it was a separate entity directly under the Government of India. Coorg was not a party to this agreement. of 1924, between the Governments of old Mysore and Madras. The construction of Kambadkada dam within the district of Coorg was not contemplated at that time, nor was Harangi contemplated at that time, nor were they contemplated till 1956 year of integration. My submission is that because Coorg has been integrated with Mysore, it is only on that plea that this Government can take it that it is obligatory on them or as a matter of right to construct the dam within the district of Coorg and utilise the water to the extent of 45 T.C.mft of water.Never the less even today I am not opposed to the construction of any low level dam within Coorg on Cauvery or Harangi rivers. I am against construction of high level Dams. I am opposed so far as Kambadkada is concerned as proposed for the reason whether the investment proposed is commensurate with the returns we are going to get. Government has bee pleased to announce in the note that has been circulated among the Members of this House that this Kambadkada dam in going to irrigate only 22½ thousand acres of which 10 or 12 thousand acres might be under sugar cane of which 2 thousand 500 acres would be brought under cultivation within Coorg, So far as the 20,000 acres are concerned, it is said that the old channels are going to be utilised and the present atchcut is going to be converted into sugar cane cultivation. Now whether this investment of nearly 2 crores on

this project is warranted is the point under these circumstances of limited atchcut under irrigation.

The next point is that we have got to consider the area that would come under submersion. To bring about cultivation of 22½ thousand acres. 6,000 acres are going to be submerged, out of which 4,000 acres are going to be forest land in Dubari forest not waste land where we have teak plantation. While giving a comparative statement of areas under submerssion. on page 6 of the note circulated among Members the Hon'ble Minister for P.W.D. has been kind enough to state that the extent of submergence per TCMft, in Kambadkada we have a submergence of 1,015 acres. It is not going to be useful. My submission is that on that point alone, this project is not going to be so useful as has been thought by the sponsores of the scheme. The next point is that the point where Kambadkada is going to be constructed, is going to be 100 feet lower in elevation than Bagagondale (?) that is three miles from the source of Tale Cauvery, That is 30 miles from Kambadkada spot and on either side of the river we have got paddy lands to a length of 3 to 5 miles. Though in the opinion of Government, the submerssion would be only 6 thousand acres, my submission is that because of water logging during monsoon, from July to September or october, these paddy lands to a distance of 3to 5 miles on either side of Cauvery basin will not be available for cultivation with the result that though Coorg is a surplus area today in the production of paddy it will be defecit in furture. To a distance of 35 miles these paddy fields would sustain considerable damage. There is going to be loss area of paddy cultivation which yields a surplus of about 7,500 tons of paddy out of a total of 15 thousand tons in Coorg. We have got the consider whether the implementation of this Kambadkada project is going to show only this submersion of 6 thousand acres as put on the paper or whether it is going to practically ruin the very economic prosperity of Coorg as a whole. From that point of view I submit that if only a proper investigation is made into these facts and a proper assessement of its utilitarian value is placed before the house, I am sanguine that even the experts would be forced to revise their opinion so far as Kambadkada is concerned.

Thank you.

Sri M. C. NARASIMHAN.—I would like to know whether on the 13th and 14 we are closing discussion on all the demands or there is a possibility of the time being extended. I am not saying that each and every demand should be discussed but some of them are extremely important.

Mr. SPEAKER.—We are not going to extend the time.

Sri M. C. NARASIMHAN.—There would be a number of speakers on that day, that is the 14th, because there are 20 demands.

Mr. SPEAKER.—I do not know whether we could dispose of all the 20 demands by discussion.

Mr. M. C. NARASIMHAN,—Generaly there would be a certain amount of guillotine.

Mr. SPEAKER.—There will be a guillotine no doubt. Out of the 20 demands, he can choose a few demands on which he can concentrate his attention.

Sri M. C. NARASIMHAN.—Because about 20 to 25 demands are come up, actually the number of speakers will be great and it will be very difficult to regulate the debate.

Mr. SPEAKER.—Because there is going to be a guillotine he can choose out of the 20 demands if they all agree.

Sri M. C. NARASIMHAN.—The difficulty will be that we cannot come to an understanding.

Sri B. D. JATTI.—Then you leave it to me. I will put such demands as are necessary and the rest will be guillotined·

Sri M. C. NARASIMHAN.—You have to put all the demands.

Mr. SPEAKER.—I can refuse also.

Sri C. J. MUCKANNAPPA.—Anyway you please reconsider this question, Sir.

Mr. SPEAKER.—It is not possible to extend the time because we have taken 21 days in discussing the budget.

Sri C. J. MUCKANNAPPA.—We have passed the vote on account. Where is the hurry now?

Mr. SPEAKER.—How long can we go on with it ?

Sri C. J. MUCKANNAPPA.—Government is not in a hurry or in an anxiety because they have already acquired the vote of the House. After all, we co-operated with the Government and the speaker in giving the vote on account. Government and the Speaker should now show some consideration.

Mr. SPEAKER.—We will see.

Sri K. P. KARUMBAYYA.—Sir, on a point of explanation, I am submitting that Government may be pleased to revise their decission so far as construction of Kambadakada is concerned. I am not so narrow minded to oppose it because it is going to be located in my constituency with all disadvantages upon my people who say that Government may go ahead with the implementation of Barapole Hydr-Electricity project through it is in my constituency where personally I am going to loose tens of acres of land, I am opposing so far as Kambadakada is concerned because I am definite, very experienced people are definite, even private engineers, whom I have contacted have been definite, that the investment to be made on Kambadakada is not going to be compatiable or commensurate with the returns anticipated.

For this reason I most humbly appeal, on behalf of myself and on behalf of the people of Coorg, that the decision of the Government may kindly be reconsidered and the Kambadakada project be dropped.

With these words I thank the Hon'ble Speaker once again. For the opportunity given to me to participate in the debate on demand for grants.

Sri M. C. NARASIMHAN.—Sir, the difficulty is, tomorrow nearly 20 to 25 demands are put and there will be a large number of speakers.

Mr. SPEAKER.—In that case why not we drop Industries?

Sri M. C. NARASIMHAN.—So far as industries are concerned, we cannot discuss it without Sri J. B. Mallaradhya.

Mr. SPEAKER.—I understand the Hon'ble Member's anxiety. I know he is interested in Labour. We will consider it tomorrow.

Sri C. K. RAJAIAH SHETTY.—Sir, You are aware that this year happens to be the first year of the Third Plan and last year of the Second Plan. Therefore it is necessary that the Government should enlighten us with some information. From that aspect you must consider and allow us a few more days.

Mr. SPEAKER.—The House will now rise and meet tomorrow at 12 Noon.

The House adjourned at Forty-Five Minutes past Six of the Clock to meet again at Twelve of the Clock on Thursday the 13th April 1961.